ಸಂಪುಟ: 06 ಸಂಚಿಕೆ: 195 ಪುಟಗಳು: 08 ಬುಧವಾರ 30 ಸೆಪ್ಟೆಂಬರ್ 2026

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833

9448225696 + 91 8035621249

₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಸಮಯದ ಮಹತ್ವ

ನಾನು, ನಾನು, ನನ್ನಿಂದಲೇ, ನಾನಿದ್ದರೆ ಎಲ್ಲಾ ಎಂಬ ಅಹಂಕಾರ ತಲೆಗೆ ಏರಿಸಿ ಕೊಂಡವನಿಗೆ ಯಾವತ್ತೂ ತನ್ನ ತಪ್ಪಿನ ಅರಿವಾಗುವುದಿಲ್ಲ. ಕೋಳಿ ಕೂಗಿದರೆ ಮಾತ್ರ ಬೆಳಕಾಗುತ್ತದೆ ಎಂದು ತಿಳ್ಕೊಳ್ಳುವ ಮೊದಲು.... ಸಮಯ ಆಗಿದ್ದಕ್ಕೇ ಕೋಳಿ ಕೂಗಿದ್ದು ಎನ್ನುವ ವಾಸ್ತವ ಸತ್ಯ ತಿಳಿದುಕೊಳ್ಳಿ......!

## ಯೋಜಿತ ಬೆಂಗಳೂರು ನಿರ್ಮಾಣಕ್ಕಾಗಿ ವ್ಯವಸ್ಥಿತ ರಸ್ತೆ ಜಾಲ: ಕೃಷ್ಣ ಬೈರೇಗೌಡ

• ಉದಯವಾಹಿನಿ, ಬೆಂಗಳೂರು

ಜಿಬಿಎ ಹೊರಗಿನ-ಬೆಂಗಳೂರು ನಗರ ಜಿಲ್ಲೆಯ ಒಳಗಿನ ಪ್ರದೇಶಗಳ ಭವಿಷ್ಯದ ದೃಷ್ಟಿಯಿಂದ ಹೊಸ ರಸ್ತೆ ಜಾಲ (ರೋಡ್ ಗ್ರಿಡ್) ನಿರ್ಮಾಣ ಹಾಗೂ ಸಮರ್ಪಕ ರಸ್ತೆ, ಕುಡಿಯುವ ನೀರು, ಒಳಚರಂಡಿ ವ್ಯವಸ್ಥೆ ಸೇರಿದಂತೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಸಂಬಂಧ ಅಧಿಸೂಚನೆ ಹೊರಡಿಸಲಾಗಿದೆ ಎಂದು ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು. ಮಂಗಳವಾರ ವಿಕಾಸಸೌಧದಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು, ಬೆಂಗಳೂರು ನಗರ ಕಳೆದ 25 ವರ್ಷಗಳಿಂದ ಸೂಕ್ತ ಪೂರ್ವಯೋಜನೆ ಹಾಗೂ ಮುಂಜಾಗ್ರತಾ ತಯಾರಿ ಇಲ್ಲದೆ ಬೆಳೆದಿದೆ. ಪರಿಣಾಮ ಇಂದು ಟ್ರಾಫಿಕ್ ಸಮಸ್ಯೆ, ರಸ್ತೆ, ಕುಡಿಯುವ ನೀರು ಮತ್ತು ಒಳಚರಂಡಿ ವ್ಯವಸ್ಥೆಯಂತಹ ಮೂಲಭೂತ ಸೌಲಭ್ಯಗಳು ಹಲವಾರು ಸವಾಲುಗಳನ್ನು ಎದುರಿಸುತ್ತಿದ್ದೇವೆ ಎಂದು ಬೇಸರ ಹೊರಹಾಕಿದರು. ಸುಮಾರು 20 ವರ್ಷಗಳ ಹಿಂದೆ ಯಾವುದೇ ಮುನ್ನೆಚ್ಚರಿಕೆ ಹಾಗೂ ತಯಾರಿ ಇಲ್ಲದೆ 110 ಹಳ್ಳಿಗಳು ಹಾಗೂ 7 ನಗರಸಭೆಗಳನ್ನು ಬೆಂಗಳೂರಿನ ವ್ಯಾಪ್ತಿಗೆ ಒಳಪಡಿಸಲಾಗಿತ್ತು. ಈ ವೇಳೆ ಆ ಭಾಗದಲ್ಲಿ ಸೂಕ್ತ ಮೂಲಭೂತ ಸೌಕರ್ಯಗಳು ಇರಲಿಲ್ಲ. ಕಳೆದ ಎರಡು ದಶಕಗಳಿಂದ ಅಲ್ಲಿಗೆ ಶಾಶ್ವತ ಕುಡಿಯುವ ನೀರು, ಒಳಚರಂಡಿ ಹಾಗೂ ಸಮರ್ಪಕ ರಸ್ತೆಗಳನ್ನು ನೀಡಲು ಸರ್ಕಾರಗಳು ಎಷ್ಟೇ ಪ್ರಯತ್ನಿಸುತ್ತಿದ್ದರೂ, ಮೂಲಭೂತ ಸೌಲಭ್ಯಗಳನ್ನು ಇಂದಿಗೂ ಸಂಪೂರ್ಣವಾಗಿ ಕಲ್ಪಿಸಲು ಸಾಧ್ಯವಾಗಿಲ್ಲ.

## ಉಪ್ಪು ಸೇವನೆಗೂ ಆರೋಗ್ಯ ಇಲಾಖೆ ಮಾರ್ಗಸೂಚಿ

• ಉದಯವಾಹಿನಿ, ಬೆಂಗಳೂರು

ಉಪ್ಪು ಬಳಕೆ ಮತ್ತು ಸೇವನೆ ಬಗ್ಗೆ ಎಚ್ಚರಿಕೆ ನೀಡಿ ಆರೋಗ್ಯ ಇಲಾಖೆ ಮಾರ್ಗಸೂಚಿ ಪ್ರಕಟಿಸಿದೆ. ಈ ಸಂಬಂಧ ಸಾರ್ವಜನಿಕರು, ಶಾಲೆಗಳು, ಹೋಟೆಲ್-ರೆಸ್ಟೋರೆಂಟ್, ಆಹಾರ ಪ್ಯಾಕೇಜ್ಡ್ ತಯಾರಕರಿಗೆ ಗೈಡ್‌ಲೈನ್ಸ್ ಬಿಡುಗಡೆ ಮಾಡಿದೆ.

ಅತಿಯಾದ ಉಪ್ಪು ಸೇವನೆಯಿಂದ ರಕ್ತದೊತ್ತಡ, ಹೃದಯಾಘಾತ ಪ್ರಕರಣಗಳು ಹೆಚ್ಚಾಗುತ್ತಿವೆ. ಈ ಹಿನ್ನೆಲೆ ಇಲಾಖೆ ಮಾರ್ಗಸೂಚಿ ಹೊರಡಿಸಿದೆ. ಒಬ್ಬ ವ್ಯಕ್ತಿ 5 ಗ್ರಾಂಗಿಂತ ಕಡಿಮೆ ಉಪ್ಪು ಸೇವನೆ ಮಾಡಬೇಕು. ಆದರೆ, ಅತಿಯಾದ ಸೇವನೆ ಮಾಡಲಾಗುತ್ತಿದೆ ಎಂದು ಎಚ್ಚರಿಸಿದೆ. 1. ದಿನಕ್ಕೆ 5 ಗ್ರಾಂ ಗಿಂತ ಕಡಿಮೆ ಉಪ್ಪು ಸೇವಿಸಿ. ಅಡುಗೆ ಮಾಡುವಾಗ ಉಪ್ಪನ್ನು ಕಡಿಮೆ ಹಾಕಿ. ಉಪ್ಪಿನಕಾಯಿ, ಚಟ್ನಿ, ಸ್ನ್ಯಾಕ್ಸ್ ಮಾಡುವಾಗ ಉಪ್ಪು ಕಡಿಮೆ ಬಳಸಿ ಊಟ ಮಾಡುವ ಮೊದಲು ರುಚಿ ನೋಡದೆ ಸುಮ್ಮನೆ ಉಪ್ಪು ಹಾಕಬೇಡಿ. ಸಂಸ್ಕರಿಸಿದ, ಪ್ಯಾಕ್ ಮಾಡಿದ, ಇನ್ ಸ್ಟಂಟ್ ಮತ್ತು ರೆಡಿ-ಟು-ಈಟ್ ಆಹಾರಗಳನ್ನು ಕಡಿಮೆ ತಿನ್ನಿ. ಪ್ಯಾಕ್ ಮಾಡಿದ ಆಹಾರ ಕೊಳ್ಳುವಾಗ ಅದರ ಲೇಬಲ್‌ನಲ್ಲಿ ಉಪ್ಪು/ಸೋಡಿಯಂ ಅಂಶ ನೋಡಿ ಹೋಲಿಕೆ ಮಾಡಿಕೊಳ್ಳಿ. ತಾಜಾ ಮತ್ತು ಕಡಿಮೆ ಸಂಸ್ಕರಿಸಿದ ಆಹಾರ, ಹಣ್ಣು-ತರಕಾರಿ ಹೆಚ್ಚು ಸೇವಿಸಿ. ಪೋಷಕರು ಚಿಕ್ಕ ವಯಸ್ಸಿನಿಂದಲೇ ಮಕ್ಕಳಿಗೆ ಕಡಿಮೆ ಉಪ್ಪಿನ ಅಭ್ಯಾಸ ಬೆಳೆಸಿ. ಇತರ ಕಾಯಿಲೆ ಇರುವವರು ಉಪ್ಪು ಕಡಿಮೆ ಮಾಡುವ ಬಗ್ಗೆ ವೈದ್ಯರ ಸಲಹೆ ಪಡೆಯಿರಿ.

## ನಮ್ಮ ಮೆಟ್ರೋ ಪ್ರಯಾಣಿಕರಿಗೆ ಗುಡ್ ನ್ಯೂಸ್

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನ ಮೆಟ್ರೋ ಪ್ರಯಾಣಿಕರಿಗೆ ಗುಡ್ ನ್ಯೂಸ್ ಸಿಕ್ಕಿದೆ. ಈಗಿರುವ ನಮ್ಮ ಮೆಟ್ರೋ ಮಾರ್ಗಗಳನ್ನು ಮತ್ತಷ್ಟು ವಿಸ್ತರಿಸಲು ಪ್ರಸ್ತಾವನೆ ಸಲ್ಲಿಕೆಯಾಗಿದ್ದು, ಒಟ್ಟು 6 ಮಾರ್ಗಗಳ ವಿಸ್ತರಣೆಗೆ ಯೋಜನೆ ರೂಪಿಸಲಾಗುತ್ತಿದೆ. ಈ ಮಾರ್ಗಗಳ ವಿಸ್ತರಣೆಯಿಂದ ನಗರದ ಹೊರವಲಯಗಳು, ಕೈಗಾರಿಕಾ ಪ್ರದೇಶಗಳು ಹಾಗೂ ಬೆಳೆಯುತ್ತಿರುವ ಸ್ಯಾಟಲೈಟ್ ಪಟ್ಟಣಗಳಿಗೆ ಮೆಟ್ರೋ ಸಂಪರ್ಕ ಮತ್ತಷ್ಟು ವಿಸ್ತರಣೆಯಾಗಲಿದೆ. ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ (ಬಿಎಂಆರ್‌ಸಿಎಲ್) ಈಗ ಹಲವು ಮಾರ್ಗಗಳ ಕಾರ್ಯಸಾಧ್ಯತಾ ವರದಿಯನ್ನು ಸಿದ್ಧಪಡಿಸುತ್ತಿದೆ. ಸುಮಾರು 15 ಕಿ.ಮೀ ಉದ್ದದ ಈ ಮಾರ್ಗದ ಕಾರ್ಯಸಾಧ್ಯತಾ ವರದಿ ಸಿದ್ಧಪಡಿಸುವ ಹಂತದಲ್ಲಿದೆ. ಸುಮಾರು 24 ಕಿ.ಮೀ ಉದ್ದದ ಮಾರ್ಗ ಇದಾಗಿದ್ದು, ಸದ್ಯ ಕಾರ್ಯಸಾಧ್ಯತಾ ವರದಿ ಹಂತದ ಸುಮಾರು 11 ಕಿ.ಮೀ ಉದ್ದದ ಈ ಮಾರ್ಗಕ್ಕೂ ಕಾರ್ಯಸಾಧ್ಯತಾ ವರದಿ ಸಿದ್ಧಪಡಿಸಲಾಗುತ್ತಿದೆ. ಸುಮಾರು 68 ಕಿ.ಮೀ ಉದ್ದದ ಈ ಮಾರ್ಗ ಪ್ರಸ್ತಾವಿತ ವಿಸ್ತರಣೆಗಳ ಪೈಕಿ ಅತಿ ಉದ್ದದ ಮಾರ್ಗವಾಗಿದೆ. ಸುಮಾರು 60 ಕಿ.ಮೀ ಉದ್ದದ ಈ ಮಾರ್ಗ ಸದ್ಯ ಡಿಪಿಆರ್ ಹಂತದಲ್ಲಿದೆ. ಈ ಹೊಸ ಮಾರ್ಗಗಳು ಜಾರಿಗೆ ಬಂದರೆ ಬೆಂಗಳೂರಿನ ಹೊರವಲಯ ಹಾಗೂ ಬೆಂಗಳೂರಿನ ಸುತ್ತಮುತ್ತ ಬೆಳೆಯುತ್ತಿರುವ ಪ್ರದೇಶಗಳಿಗೆ ಮೆಟ್ರೋ ಸಂಪರ್ಕ ಮತ್ತಷ್ಟು ಹೆಚ್ಚಾಗಲಿದೆ.

## ನವರಾತ್ರಿಗೆ 'ಗೃಹಲಕ್ಷ್ಮಿ'ಯರಿಗೆ ಗುಡ್ ನ್ಯೂಸ್; ಹಬ್ಬಕ್ಕೆ ಅಕೌಂಟ್‌ಗೆ ಬರಲಿದೆ ಹಣ

• ಉದಯವಾಹಿನಿ, ಬೆಂಗಳೂರು

ನವರಾತ್ರಿ ಹಬ್ಬಕ್ಕೆ 'ಗೃಹಲಕ್ಷ್ಮಿ'ಯರಿಗೆ ಗುಡ್ ನ್ಯೂಸ್ ಸಿಕ್ಕಿದೆ. ಹಬ್ಬಕ್ಕೆ ಫಲಾನುಭವಿಗಳ ಅಕೌಂಟ್‌ಗಳಿಗೆ ಹಣ ಜಮೆ ಆಗಲಿದೆ.

ಗೃಹಲಕ್ಷ್ಮಿ ಪರಿಷ್ಕರಣೆಯ ಕಸರತ್ತಿನ ಮಧ್ಯೆಯೂ ಸಿಎಂ ಸೂಚನೆ ಮೇರೆಗೆ 33ನೇ ಕಂತಿನ ದುಡ್ಡು ರಿಲೀಸ್‌ಗೆ ಆರ್ಥಿಕ ಇಲಾಖೆ ಗ್ರೀನ್ ಸಿಗ್ನಲ್ ಕೊಟ್ಟಿದೆ. ಈಗಾಗಲೇ ಗೃಹಲಕ್ಷ್ಮಿ ಪರಿಷ್ಕರಣೆಗೆ ಸರ್ಕಾರ ಮುಂದಾಗಿದೆ. ಪರಿಷ್ಕರಣೆ ವೇಳೆಯಲ್ಲೂ ದುಡ್ಡು ಜಮೆಗೆ ಸಿಎಂ ಸೂಚನೆ ನೀಡಿದ್ದಾರೆ. ಪರಿಷ್ಕರಣೆ ಸಂದರ್ಭದಲ್ಲಿ ಗೃಹಲಕ್ಷ್ಮಿ ದುಡ್ಡು ತಡೆಯೋದು ಬೇಡ ಎಂದು ಸಿಎಂ ಡಿ.ಕೆ.ಶಿವಕುಮಾರ್ ಅವರು ಸೂಚನೆ ನೀಡಿದ್ದಾರೆ.

ಕೇಂದ್ರ ಮುಖ್ಯ ಚುನಾವಣಾ ಆಯುಕ್ತರ ಮೇಲೆ ಒತ್ತಡ ಹೇರಿದ ಕಾರಣಕ್ಕಾಗಿ ಪ್ರಧಾನಮಂತ್ರಿಯವರು ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು ಎಂದು ಕಾಂಗ್ರೆಸ್ ಅಧ್ಯಕ್ಷರು, ಸಿಡಬ್ಲ್ಯುಸಿ ಸಭೆಯ ಆರಂಭಿಕ ಭಾಷಣದಲ್ಲಿ ಹೇಳಿದ್ದಾರೆ. ಮತದಾರರ ಪಟ್ಟಿಯಲ್ಲಿ ಪಾರದರ್ಶಕತೆ ಇರಬೇಕು ಮತ್ತು ಚುನಾವಣಾ ಪ್ರಕ್ರಿಯೆಯು ನಿಷ್ಪಕ್ಷಪಾತವಾಗಿರಬೇಕು ಎಂದು ನಾವು ಸಿಡಬ್ಲ್ಯುಸಿ ಸಭೆಯಲ್ಲಿ ಪ್ರತಿಜ್ಞೆ ಮಾಡಬೇಕು. ಸಂಸ್ಥೆಗಳು ಸ್ವತಂತ್ರವಾಗಿರಬೇಕು ಮತ್ತು ಪ್ರತಿಯೊಬ್ಬ ಭಾರತೀಯನ ಮತವನ್ನು ರಕ್ಷಿಸಬೇಕು ಎಂದು ಖರ್ಗೆ ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದ್ದಾರೆ.



## ಸಿಇಸಿ ವಿರುದ್ಧ ವಿಚಾರಣೆಗೆ ಸುಪ್ರೀಂ ಅಸ್ತು

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ನೇತೃತ್ವದ ಚುನಾವಣಾ ಆಯೋಗದ ಕೆಲವು ನಿರ್ಧಾರಗಳ ಬಗ್ಗೆ ಪ್ರಶ್ನೆ ಎತ್ತಿರುವ ಅರ್ಜಿಯನ್ನು ಮುಂದಿನ ವಾರ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಮಂಗಳವಾರ ಒಪ್ಪಿಗೆ ನೀಡಿದೆ.

ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿಗಳಾದ ಜಾಯ್ ಮಾಲ್ಯ ಬಾಗ್ಚಿ ಹಾಗೂ ವಿ. ಮೋಹನಾ ಅವರನ್ನೊಳಗೊಂಡ ಪೀಠದ ಮುಂದೆ ಹಿರಿಯ ವಕೀಲ ವಿಕಾಸ್ ಸಿಂಗ್ ಅವರು ಅರ್ಜಿಯ ತ್ವರಿತ ವಿಚಾರಣೆಗೆ ಮನವಿ ಮಾಡಿದರು. ಬಹುಸದಸ್ಯರನ್ನೊಳಗೊಂಡ ಚುನಾವಣಾ ಆಯೋಗದ ನಿರ್ಧಾರಗಳು ಕಾನೂನುಬದ್ಧ ವ್ಯವಸ್ಥೆಯ ಪ್ರಕಾರ ಸರ್ವಾನುಮತದಿಂದ ಅಥವಾ ಬಹುಮತದ ಆಧಾರದ ಮೇಲೆ ಕೈಗೊಳ್ಳಬೇಕಾಗುತ್ತದೆ ಎಂದು ವಿಕಾಸ್ ಸಿಂಗ್ ನ್ಯಾಯಪೀಠದ ಗಮನಕ್ಕೆ ತಂದರು.

# ಕಮಲ ವಿರುದ್ಧ ಖರ್ಗೆ ಕಿಡಿ

## ಮತದಾರರಿಗೆ ಅವಕಾಶ ನೀಡಿ





ಖರ್ಗೆ ವಾಗ್ದಾಳಿ

ಮೋದಿ ರಾಜೀನಾಮೆಗೆ "ಕೈ" ಪಟ್ಟು

• ಉದಯವಾಹಿನಿ, ನವದೆಹಲಿ

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್‌ಕುಮಾರ್ ಅವರನ್ನು ತಕ್ಷಣವೇ ಹುದ್ದೆಯಿಂದ ತೆಗೆದುಹಾಕಬೇಕು ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮಂಗಳವಾರ ಆಗ್ರಹಿಸಿದ್ದಾರೆ. ಅಲ್ಲದೇ ಚುನಾವಣಾ ಆಯೋಗದ ಮುಖ್ಯಸ್ಥರ ಮೇಲೆ ಒತ್ತಡ ಹೇರಿದ ಆರೋಪದ ಮೇಲೆ ಪ್ರಧಾನಿ ನರೇಂದ್ರ ಮೋದಿ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು ಎಂದೂ ಅವರು ಇದೇ ವೇಳೆ ಒತ್ತಾಯಿಸಿದ್ದಾರೆ. ರಾಷ್ಟ್ರ ರಾಜಧಾನಿಯಲ್ಲಿ ನಡೆದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ - ಸಿಡಬ್ಲ್ಯುಸಿಯ ನಿರ್ಣಾಯಕ ಸಭೆ ಉದ್ದೇಶಿಸಿ ಮಾತನಾಡಿದ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷರು, ಮತದಾರರ ಪಟ್ಟಿ ಮತ್ತು ಚುನಾವಣಾ ಪ್ರಕ್ರಿಯೆಯಲ್ಲಿನ ಅಕ್ರಮ ಆರೋಪಗಳಿಗೆ ಸಂಬಂಧಿಸಿದ ವಿಷಯಗಳನ್ನು ಸಂಸತ್ತಿನಲ್ಲಿ ಪ್ರಸ್ತಾಪಿಸಲಾಗುವುದು. ಈ ಬಗ್ಗೆ ಕಾಂಗ್ರೆಸ್ ಬೀದಿಗಿಳಿದು ಹೋರಾಟ ನಡೆಸಲಿದೆ ಎಂದು ತಿಳಿಸಿದ್ದಾರೆ. ಸಿಡಬ್ಲ್ಯುಸಿ ಸಭೆಯಲ್ಲಿ ಖರ್ಗೆ ಐದು ಪ್ರಮುಖ ಬೇಡಿಕೆಗಳನ್ನು ಮಂಡಿಸಿದ್ದಾರೆ. ಮತದಾರರ ಪಟ್ಟಿಯಲ್ಲಿನ ಬದಲಾವಣೆಗಳಿಗೆ ಸಂಬಂಧಿಸಿದ ಎಲ್ಲಾ ಮಾಹಿತಿಯನ್ನು ಸಾರ್ವಜನಿಕಗೊಳಿಸಬೇಕು, ಹೆಸರುಗಳನ್ನು ಕೈಬಿಡಲಾದ ಮತದಾರರಿಗೆ ಮೇಲ್ಮನವಿ ಸಲ್ಲಿಸಲು ಅವಕಾಶ ನೀಡಬೇಕು ಮತ್ತು ಎಲ್ಲಾ ರಾಜಕೀಯ ಪಕ್ಷಗಳಿಗೆ ಸರಳ ಸ್ವರೂಪದ ಮತದಾರರ ಪಟ್ಟಿಯನ್ನು ಸಮಯಕ್ಕೆ ಸರಿಯಾಗಿ ಒದಗಿಸಬೇಕು ಎಂದು ಪ್ರತಿಪಾದಿಸಿದ್ದಾರೆ.

ಗಂಭೀರ ಲೋಪದೋಷಗಳು ಕಂಡುಬಂದ ಕಡೆಗಳಲ್ಲಿ ಸ್ವತಂತ್ರ ಹಾಗೂ ನಿರ್ದಿಷ್ಟ ಕಾಲಮಿತಿಯ ತನಿಖೆ ನಡೆಸಬೇಕು ಮತ್ತು ಮಾಹಿತಿಯನ್ನು ಮುಚ್ಚಿಡಲಾಗುತ್ತಿದೆ ಎಂಬ ಭಾವನೆ ಬಾರದಂತೆ ಚುನಾವಣಾ ಪ್ರಕ್ರಿಯೆಯನ್ನು ಪಾರದರ್ಶಕಗೊಳಿಸಬೇಕು ಎಂದೂ ಅವರು ಇದೇ ವೇಳೆ ಆಗ್ರಹಿಸಿದ್ದಾರೆ. ಇಬ್ಬರು ಚುನಾವಣಾ ಆಯುಕ್ತರೇ ಸಿಇಸಿ ಅವರ ಕ್ರಮಗಳನ್ನು ಸ್ವೇಚ್ಛಾಚಾರದ ಮತ್ತು ಅಸಮಂಜಸ ನಿರ್ಧಾರ ಎಂದು ಕರೆದಿದ್ದಾರೆ.

ಅವರು ಆಡಳಿತಾರೂಢ ಪಕ್ಷಕ್ಕೆ ಸಹಾಯ ಮಾಡಲು ಪ್ರಯತ್ನಿಸುತ್ತಿದ್ದಾರೆ ಎಂಬುದು ಈಗ ಇಡೀ ದೇಶಕ್ಕೆ ತಿಳಿದಿದೆ. ಇಂತಹ ಪರಿಸ್ಥಿತಿಯಲ್ಲಿ ಆ ಹುದ್ದೆಯಲ್ಲಿ ಮುಂದುವರಿಯುವ ಹಕ್ಕು ಅವರಿಗಿಲ್ಲ ಮತ್ತು ಅವರನ್ನು ತಕ್ಷಣವೇ ತೆಗೆದುಹಾಕಬೇಕು ಎಂದು ಖರ್ಗೆ ಒತ್ತಾಯಿದ್ದಾರೆ.

ಚುನಾವಣಾ ಆಯೋಗಕ್ಕೆ 5 ಬೇಡಿಕೆ

ಜ್ಞಾನೇಶ್‌ಕುಮಾರ್ ಪ್ರಭುತ್ವದ ಗಿಳಿ



### ಐದು ಪ್ರಮುಖ ಬೇಡಿಕೆ ಮಂಡಿಸಿದ ಖರ್ಗೆ

1 ಜ್ಞಾನೇಶ್ ಕುಮಾರ್ ಬಿಜೆಪಿ ಸರ್ಕಾರದ ಕೈಗೊಂಬೆ ಎಂದ ಖರ್ಗೆ

2 ಮುಖ್ಯ ಚುನಾವಣಾ ಆಯುಕ್ತರ ರಾಜೀನಾಮೆಗೆ ಎಐಸಿಸಿ ಅಧ್ಯಕ್ಷರ ಒತ್ತಾಯ

3 ಚುನಾವಣಾ ಆಯೋಗಕ್ಕೆ ತಮ್ಮ ಐದು ಬೇಡಿಕೆಗಳ ಪಟ್ಟಿ ಸಲ್ಲಿಸಿದ ರಾಜ್ಯಸಭೆ ಪ್ರತಿಪಕ್ಷ ನಾಯಕ

ಮುಖ್ಯ ಚುನಾವಣಾ ಆಯುಕ್ತರು ಮೋದಿ ಸರ್ಕಾರದ ಕೈಗೊಂಬೆಯಾಗಿದ್ದಾರೆ. ಸ್ವತಃ ಅವರ ಸಹೋದ್ಯೋಗಿಗಳೇ ಮುಖ್ಯ ಚುನಾವಣಾ ಆಯುಕ್ತರನ್ನು ನಂಬುವುದಿಲ್ಲ. ಯುವಜನರು ಪ್ರಶ್ನೆಗಳನ್ನು ಕೇಳುತ್ತಾರೆ ಮತ್ತು ಅವರನ್ನು ಪದಚ್ಯುತಗೊಳಿಸುತ್ತಾರೆ. ಈ ಕಾರಣಕ್ಕೆ ನಾನು ಚುನಾವಣಾ ಆಯೋಗಕ್ಕೆ ಕಾಂಗ್ರೆಸ್ ಪಕ್ಷದ ಐದು ಪ್ರಮುಖ ಬೇಡಿಕೆಗಳನ್ನು ಮಂಡಿಸಿದ್ದೇನೆ ಎಂದು ಮಲ್ಲಿಕಾರ್ಜುನ ಖರ್ಗೆ ತಿಳಿಸಿದರು.

ಮತದಾರರ ಪಟ್ಟಿಯಲ್ಲಿನ ಬದಲಾವಣೆಗಳಿಗೆ ಸಂಬಂಧಿಸಿದ ಎಲ್ಲಾ ಮಾಹಿತಿಯನ್ನು ಸಾರ್ವಜನಿಕಗೊಳಿಸಬೇಕು. ಹೆಸರು ಕೈಬಿಡಲಾದ ಎಲ್ಲಾ ಮತದಾರರಿಗೆ ಮೇಲ್ಮನವಿ ಸಲ್ಲಿಸಲು ಅವಕಾಶ ನೀಡಬೇಕು ಮತ್ತು ಎಲ್ಲಾ ರಾಜಕೀಯ ಪಕ್ಷಗಳಿಗೆ ಸರಳ ಸ್ವರೂಪದ ಮತದಾರರ ಪಟ್ಟಿಯನ್ನು ಸಮಯಕ್ಕೆ ಸರಿಯಾಗಿ ಒದಗಿಸಬೇಕು ಎಂದು ಎಐಸಿಸಿ ಅಧ್ಯಕ್ಷರು ಆಗ್ರಹಿಸಿದರು. ಮುಂದುವರೆದು ಗಂಭೀರ ಅಕ್ರಮಗಳು ಕಂಡುಬಂದಿರುವ ಕಡೆಗಳಲ್ಲಿ ಸ್ವತಂತ್ರ ಹಾಗೂ ಕಾಲಮಿತಿಯ ತನಿಖೆಯನ್ನು ನಡೆಸಬೇಕು ಮತ್ತು ಚುನಾವಣಾ ಪ್ರಕ್ರಿಯೆಯನ್ನು ಪಾರದರ್ಶಕವಾಗಿಸಬೇಕು. ಇದರಿಂದಾಗಿ ಯಾವುದೇ ಮಾಹಿತಿಯನ್ನು ಮುಚ್ಚಿಡಲಾಗುತ್ತಿದೆ ಎಂಬ ಭಾವನೆ ಯಾರಿಗೂ ಉಂಟಾಗಬಾರದು ಎಂದು ಮಲ್ಲಿಕಾರ್ಜುನ ಖರ್ಗೆ ಚುನಾವಣಾ ಆಯೋಗವನ್ನು ಒತ್ತಾಯಿಸಿದ್ದಾರೆ.

### ಮೋದಿ ಸರ್ಕಾರದ ಕೈಗೊಂಬೆ

ಚುನಾವಣಾ ಆಯೋಗದ ಮುಖ್ಯ ಆಯುಕ್ತ ಜ್ಞಾನೇಶ್ ಕುಮಾರ್ ವಿರುದ್ಧ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ ವಾಗ್ದಾಳಿ ನಡೆಸಿದ್ದಾರೆ. ಜ್ಞಾನೇಶ್ ಕುಮಾರ್ ಆಡಳಿತಾರೂಢ ಬಿಜೆಪಿಯ ಕೈಗೊಂಬೆ. ಅವರನ್ನು ಆಯುಕ್ತ ಸ್ಥಾನದಿಂದ ತಕ್ಷಣ ವಜಾಗೊಳಿಸುವಂತೆ ಆಗ್ರಹಿಸಿದ್ದಾರೆ. ಬ್ರಿಟಿಷರ ಆಡಳಿತದ ಸಂದರ್ಭದಲ್ಲಿ ಇದ್ದಂತೆಯೇ, ಭಾರತದ ಪ್ರಜಾಪ್ರಭುತ್ವ ಮತ್ತು ಸಂವಿಧಾನವನ್ನು ರಕ್ಷಿಸುವ ಐತಿಹಾಸಿಕ ಹೊಣೆಗಾರಿಕೆ ಮತ್ತೊಮ್ಮೆ ಕಾಂಗ್ರೆಸ್ ಹೆಗಲ ಮೇಲೆ ಬಂದಿದೆ. ಬ್ರಿಟಿಷರಿಂದ ನಾವು ಮತದಾನದ ಹಕ್ಕನ್ನು ಹೋರಾಡಿ ಪಡೆದುಕೊಂಡಿದ್ದೆವು. ಇಂದು ಅದೇ ಹಕ್ಕನ್ನು ರಕ್ಷಿಸಲು ಮತ್ತೊಮ್ಮೆ ಹೋರಾಡಬೇಕಾಗಿದೆ.

ನಮ್ಮ ಪೂರ್ವಜರು ತಮ್ಮ ತ್ಯಾಗ ಮತ್ತು ಬಲಿದಾನಗಳಿಂದ ಬಲಿಷ್ಠ ಪ್ರಜಾಪ್ರಭುತ್ವದ ಅಡಿಪಾಯ ಹಾಕಿದ್ದರು. ಆ ಪ್ರಜಾಪ್ರಭುತ್ವದ ಅಡಿಪಾಯವನ್ನು ಮೋದಿ ಸರ್ಕಾರ 12 ವರ್ಷಗಳಲ್ಲಿ ಸಂಚು ರೂಪಿಸಿ ದುರ್ಬಲಗೊಳಿಸಿದೆ ಎಂದಿದ್ದಾರೆ. ಸಂಚಿನ ಮೂಲಕ ಜನರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕಲಾಗುತ್ತಿದೆ. ಮುಖ್ಯ ಚುನಾವಣಾ ಆಯುಕ್ತರು ಮೋದಿ ಸರ್ಕಾರದ ಕೈಗೊಂಬೆಯಾಗಿದ್ದಾರೆ. ಡಾ. ಬಿ.ಆರ್.ಅಂಬೇಡ್ಕರ್ ಅವರ ಆಶಯಗಳ ವಿರುದ್ಧವಾಗಿ ಕೆಲಸ ನಡೆಯುತ್ತಿದೆ. ರಕ್ಷಕರೇ ಭಕ್ಷಕರಾಗಿದ್ದಾರೆ.

## ಕೇಂದ್ರ ಜಲಶಕ್ತಿ ಸಚಿವರಿಂದ ಸಕಾರಾತ್ಮಕ ಸ್ಪಂದನೆ; ಮೇಕೆದಾಟು ಯೋಜನೆ ಸ್ಥಳಕ್ಕೆ ತಮಿಳುನಾಡು ನಿಯೋಗ ಭೇಟಿ ನೀಡಲಿ

• ಉದಯವಾಹಿನಿ, ಬೆಂಗಳೂರು

ಮೇಕೆದಾಟು ಯೋಜನೆಯಿಂದ ನಾವು ಕುಡಿಯುವ ಉದ್ದೇಶಕ್ಕೆ ಮಾತ್ರ ನೀರನ್ನು ಬಳಸಿಕೊಳ್ಳಬಹುದು, ನೀರಾವರಿಗೆ ಬಳಸಿಕೊಳ್ಳಲು ಸಾಧ್ಯವಿಲ್ಲ ಎಂಬ ಅಂಶ ಕೇಂದ್ರ ಸಚಿವರಿಗೆ ಮನದಟ್ಟಾಗಿದೆ. ತಮಿಳುನಾಡು ಸರ್ಕಾರ ಕೂಡ ನಿಯೋಗ ಕಳುಹಿಸಿ ಯೋಜನೆ ಜಾಗ ಪರಿಶೀಲನೆ ಮಾಡಲಿ ಎಂದು ಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು. ದೆಹಲಿಯಲ್ಲಿ ಕೇಂದ್ರ ಸಚಿವರ ಭೇಟಿ ಬಳಿಕ ಕರ್ನಾಟಕ ಭವನದಲ್ಲಿ ಸೋಮವಾರ ಮಾಧ್ಯಮಗೋಷ್ಠಿ ನಡೆಸಿ ಮಾತನಾಡಿದ ಸಿಎಂ, ಮೇಕೆದಾಟು ಅಣೆಕಟ್ಟಿಗೆ ಮತ್ತೊಮ್ಮೆ ಡಿಪಿಆರ್ ಸಲ್ಲಿಕೆಯಾಗಿರುವ ಬಗ್ಗೆ ಎಂದು ಕೇಳಿದಾಗ, ಈ ಯೋಜನೆಯಲ್ಲಿ ಮುಳುಗಡೆಯಾಗುವ ಅರಣ್ಯ ಭೂಮಿಗೆ ಪರ್ಯಾಯ ಸ್ಥಳ ಗುರುತಿಸಲಾಗಿದೆ.

ಈಗ 5 ಸಾವಿರ ಕ್ಯೂಸೆಕ್ ನೀರಿಗೆ ಬಡಿದಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಬಾರಿ ಕೆ.ಆರ್.ಎಸ್ ತುಂಬಿಲ್ಲದ ಕಾರಣ ಕಬಿನಿ ಭಾಗದ ರೈತರು ಗಲಾಟೆ ಮಾಡುತ್ತಿದ್ದಾರೆ. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಕೇಂದ್ರ ತಂಡ ಸ್ಥಳಕ್ಕೆ ಭೇಟಿ ನೀಡಿದೆ ಎಂದು



ಮಾಹಿತಿ ನೀಡಿದರು.ತಮಿಳುನಾಡು ತಂಡ ಭೇಟಿ ನೀಡಿದರೂ ಅವರಿಗೂ ಸಹಕಾರ ನೀಡಲಾಗುವುದು. ನೀರನ್ನು ದುರ್ಬಳಕೆ ಮಾಡಲು ಸಾಧ್ಯವಿಲ್ಲ ಎನ್ನುವುದು ಅಧಿಕಾರಿಗಳಿಗೆ ಸಹ ಮನದಟ್ಟಾಗಿದೆ. ತಮಿಳುನಾಡು ಮುಖ್ಯಮಂತ್ರಿಯವರಿಗೆ ಮೇಕೆದಾಟು ಯೋಜನೆಯ ಸಭೆಯಲ್ಲಿ ಪಾಲ್ಗೊಳ್ಳಲು, ಭೇಟಿ ನೀಡಲು ಮನವಿ ಮಾಡಿಕೊಳ್ಳಲಾಗುವುದು ಎಂದರು. ರಾಜ್ಯದ ಕೃಷ್ಣಾ, ಮೇಕೆದಾಟು ಸೇರಿದಂತೆ ಇತರೆ ಜಲವಿವಾದಗಳ ಕುರಿತು ಕೇಂದ್ರ ಜಲಶಕ್ತಿ ಸಚಿವ ಸಿ. ಆರ್. ಪಾಟೀಲ್ ಅವರೊಂದಿಗೆ ಚರ್ಚಿಸಿ ರಾಜ್ಯದ ನೀರಾವರಿ ಯೋಜನೆಗಳಿಗೆ ಕೇಂದ್ರದ ಮಧ್ಯಸ್ಥಿಕೆ ವಹಿಸಿ ಸಹಕರಿಸಲು ಮನವಿ ಮಾಡಲಾಗಿದ್ದು, ಸಚಿವರು ಸಕಾರಾತ್ಮಕ ಸ್ಪಂದಿಸಿದ್ದಾರೆ. ರಾಜ್ಯದ ಯೋಜನೆಗಳಿಗೆ ಬರಬೇಕಾದ ಅನುದಾನಗಳ ಬಗ್ಗೆ ಮನವಿ ಮಾಡಲಾಗಿದೆ ಎಂದು ತಿಳಿಸಿದರು. ಮಹದಾಯಿ ಮತ್ತು ಅರಣ್ಯ ವಿಚಾರಕ್ಕೆ ಸಂಬಂಧಿಸಿದಂತೆ ಜಂಟಿ ಸಭೆಯನ್ನು ಕೈಗೊಳ್ಳುವುದಾಗಿ ಭರವಸೆ ನೀಡಿದ್ದಾರೆ.

ಹಾಗೂ ಕೃಷ್ಣಾ ಮೇಲ್ದಂಡೆ ಯೋಜನೆಗೆ ಸಂಬಂಧಿಸಿದಂತೆ ಅಕ್ಕ ಪಕ್ಕದ ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ಕರೆದು ಸಮಸ್ಯೆ ಬಗೆಹರಿಸುವುದಾಗಿ ಭರವಸೆ ನೀಡಿದ್ದಾರೆ ಎಂದು ಮಾಹಿತಿ ನೀಡಿದರು. ಮಹದಾಯಿ ಯೋಜನೆಗೆ ಸಂಬಂಧಿಸಿದಂತೆ ಪತ್ರವ್ಯವಹಾರ ಸರಿಯಾಗಿ ಆಗುತ್ತಿಲ್ಲ ಎಂದು ಕೇಳಿದಾಗ, ಅವೆಲ್ಲ ಸುಳ್ಳು.

ಕೇಂದ್ರ ಸಚಿವರೂ ಈ ಬಗ್ಗೆ ಪ್ರಯತ್ನ ಮಾಡಿದ್ದಾರೆ. ಇದಕ್ಕೆ ರಾಜಕೀಯ ಬದ್ಧತೆ ಅಗತ್ಯವಿದೆ. ಅರಣ್ಯ ಇಲಾಖೆಯೊಂದಿಗೆ ಪ್ರತ್ಯೇಕ ಸಭೆ ನಡೆಸಲು ಮನವಿ ಮಾಡಲಾಗಿದೆ. ಕೇಂದ್ರ ಸರ್ಕಾರ 2023ರ ಬಜೆಟ್‌ನಲ್ಲಿ ಭದ್ರಾ ಮೇಲ್ದಂಡೆಗೆ 5300 ಕೋಟಿ ಮೀಸಲಿರಿಸಿದ್ದರೂ ಈವರೆಗೆ ಅನುದಾನ ಬಿಡುಗಡೆ ಮಾಡಿಲ್ಲ. ನಾವು ಕೇಳುತ್ತಲೇ ಇದ್ದೇವೆ . ಅವರು ಬಿಡುಗಡೆ ಮಾಡುತ್ತಿಲ್ಲ ಎಂದರು.

### ಬರ ಪರಿಹಾರಕ್ಕೆ ಮನವಿ ಮಾಡಲಾಗಿದೆ

ರಾಜ್ಯದಲ್ಲಿ 200 ಕ್ಕೂ ಹೆಚ್ಚು ತಾಲ್ಲೂಕುಗಳು ಬರಪೀಡಿತವಾಗಿವೆ. 101 ತಾಲ್ಲೂಕುಗಳಿಗೆ 700 ಕೋಟಿ ಅನುದಾನ ಕೋರಲಾಗಿತ್ತು. ಪ್ರಸ್ತುತ ಬರಪೀಡಿತ ತಾಲ್ಲೂಕುಗಳ ಸಂಖ್ಯೆ ಹೆಚ್ಚಾಗಿರುವುದರಿಂದ ಪರಿಹಾರದ ಮೊತ್ತವೂ ಏರಿಕೆಯಾಗಲಿದೆ.

ಅಕ್ಟೋಬರ್ 3 ರಂದು ಕೇಂದ್ರದ ತಂಡ ಬರ ಪರಿಶೀಲನೆಗಾಗಿ ರಾಜ್ಯಕ್ಕೆ ಆಗಮಿಸಲಿದೆ ಎಂದು ತಿಳಿಸಿದ್ದಾರೆ. ಬೆಂಗಳೂರಿನ ಇಬ್ಬಲೂರಲ್ಲಿ 700 ಎಕರೆ ರಕ್ಷಣಾ ಇಲಾಖೆಯ ಭೂಮಿ ಖಾಲಿ ಇದೆ. ಹಸಿರು ಉದ್ಯಾನವನ ಪ್ರಾರಂಭಿಸಲು ಸರ್ಕಾರ ಯೋಜಿಸಿದೆ. ಇದಕ್ಕೆ ರಕ್ಷಣಾ ಸಚಿವರು ಸಕಾರಾತ್ಮಕವಾಗಿ ಪ್ರತಿಕ್ರಿಯೆ ನೀಡಿದ್ದಾರೆ ಎಂದು ಸಿಎಂ ಹೇಳಿದ್ದಾರೆ.

## ನೈಸ್ ಯೋಜನೆಯಲ್ಲಿ 3 ಲಕ್ಷ ಕೋಟಿಗಿಂತ ಹೆಚ್ಚು ಅವ್ಯವಹಾರ: ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಸ್ಫೋಟಕ ಆರೋಪ

• ಉದಯವಾಹಿನಿ, ಬೆಂಗಳೂರು

ನೈಸ್ ಯೋಜನೆಯಲ್ಲಿ 3 ಲಕ್ಷ ಕೋಟಿಗಿಂತ ಹೆಚ್ಚು ಅವ್ಯವಹಾರ ನಡೆದಿದೆ. ಇಷ್ಟೆಲ್ಲಾ ಅವ್ಯವಹಾರ ಮಾಡಿದ ಖೇಣಿಯನ್ನು ಒದ್ದು ಒಳಗೆ ಹಾಕಬೇಕು. ಯಾರು ಕೂಡ ನೈಸ್ ಟೋಲ್ ಕಟ್ಟಬೇಡಿ, ಸರ್ಕಾರ ಇದನ್ನ ಮೊದಲು ನಿಲ್ಲಿಸಲಿ. ನೈಸ್ ಯೋಜನೆಗೆ 1 ಲಕ್ಷ 25 ಸಾವಿರ ಕೆರೆಯನ್ನು 2004ರಲ್ಲೇ ಡಿನೋಟಿಫೈ ಮಾಡಿಟ್ಟಿದ್ದು, ಅದನ್ನೆಲ್ಲಾ ಹೊಡೆಯಲು ಪ್ಲ್ಯಾನ್ ಆಗಿದೆ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಆರೋಪಿಸಿದ್ದಾರೆ.

ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಗ್ಯಾರಂಟಿ ಯೋಜನೆಗಳನ್ನು ಕೊಟ್ಟು ರಾಜ್ಯ ಸರ್ಕಾರದ ಬಳಿ ದುಡ್ಡಿಲ್ಲ. ನನಗೆ 2 ಲಕ್ಷ ಕೋಟಿ ಕೊಡಬೇಕಾಗುತ್ತೆ ಅದನ್ನ ಎಲ್ಲಿಂದ ತರ್ತಾರೆ ವಿಧಾನಸೌಧ, ವಿಕಾಸಸೌಧ ಬರೆದುಕೊಡಬೇಕಾಗುತ್ತೆ ಎಂದು ಖೇಣಿ ಹೇಳ್ತಾರೆ. ರಸ್ತೆ ಕೆಲಸ ಮಾಡೋಕೆ ಬಂದವನು ಹೀಗೆ ಮಾತಾಡ್ತಾನೆ ಅಂದ್ರೆ, ಆತನ ಹಿಂದೆ ಯಾರಿದ್ದಾರೆ ಎಂದು ಅವರು ಪ್ರಶ್ನಿಸಿದ್ದಾರೆ.

ಕರ್ನಾಟಕದಲ್ಲಿ ಜೆಡಿಎಸ್‌ಗೆ 134 ಸೀಟು ಬಂದಿದ್ದರೆ ನೈಸ್ ಯೋಜನೆ ರದ್ದು ಮಾಡ್ತಿದ್ದೆ. ಚಿಟಿಕೆ ಹೊಡೆಯೊದರಲ್ಲಿ ಯೋಜನೆ ರದ್ದು ಮಾಡಿ ಒಳಗೆ ಹಾಕಿಸುತ್ತಿದ್ದೆ. ನಾನು ಸಿಎಂ ಆಗಿದ್ದಾಗ ಈ ಯೋಜನೆ ಸ್ಕ್ರಾಪ್ ಮಾಡಲು ಹೊರಟೆ. ಆಗ ನನಗೆ ಬಿಜೆಪಿ ಸೇರಿದಂತೆ ಯಾರ ಸಹಕಾರವೂ



ಸಿಗಲಿಲ್ಲ. ಭೂಮಿ ಕಳೆದುಕೊಂಡ ರೈತರು ಹೋರಾಟಕ್ಕೆ ನಮ್ಮ ನೆರವು ಕೇಳಿದ್ದಾರೆ. ಕೋರ್ಟ್ ತೀರ್ಪು ನೀಡಿದ ಹಿನ್ನೆಲೆ ಕಾನೂನು ಹೋರಾಟ ಮಾಡ್ತೀವಿ. ಸರ್ಕಾರಕ್ಕೆ ತೀರ್ಮಾನ ಮಾಡಿ ಎಂದು ಕೋರ್ಟ್ ಸೂಚನೆ ಕೊಟ್ಟಿದೆ. ಕೋರ್ಟ್ ಆದೇಶವನ್ನು ಸರ್ಕಾರ ಎಷ್ಟು ಪಾಲನೆ ಮಾಡುತ್ತೆ ನೋಡೋಣ. ನೈಸ್ ಸಂಸ್ಥೆಯ ಅಕ್ರಮ ಪ್ರಕರಣವನ್ನು ಸುಮ್ಮನೆ ಬಿಡುವುದಿಲ್ಲ. ಆಗ ರೈತರು ರಸ್ತೆ ಆಗಲಿ ಎಂದು ಸಂತೋಷದಿಂದ ಭೂಮಿ ನೀಡಿದ್ರು. ಆದರೆ ರೈತರು ನೀಡಿದ್ದ ಭೂಮಿಯನ್ನು ನೈಸ್ ಸಂಸ್ಥೆ ದುರ್ಬಳಕೆ ಮಾಡಿಕೊಂಡಿದೆ ಎಂದವರು ಆರೋಪಿಸಿದ್ದಾರೆ. ಅಲ್ಲೋಲ ಕಲ್ಲೋಲ ಆಗುವಂತಹ ದಾಖಲೆ ಇದೇನಾ ಎಂಬ ಬಗ್ಗೆ ಮಾಧ್ಯಮದವರ ಪ್ರಶ್ನೆಗೂ ಇದೇ ವೇಳೆ ಉತ್ತರಿಸಿದ ಕೇಂದ್ರ ಸಚಿವರು, ಇದು ಒಂದು ಸಣ್ಣ ವಿಚಾರ. ಇನ್ನೂ ಪಾರ್ಟ್ 2 ಇದೆ, ಪಾರ್ಟ್ 3 ಕೂಡ ಬರಬಹುದು ಎಂದಿದ್ದಾರೆ.

## ಶಾಸಕರು, ಸಚಿವರ ವೇತನವನ್ನು 3 ಲಕ್ಷಕ್ಕೆ ಹೆಚ್ಚಿಸುವ ಮಸೂದೆಗಳನ್ನು ಹಿಂಪಡೆದ ಜಮ್ಮು - ಕಾಶ್ಮೀರ ಸರ್ಕಾರ

• ಉದಯವಾಹಿನಿ, ಜಮ್ಮು ಕಾಶ್ಮೀರ

ಶಾಸಕರು, ಸಚಿವರು ಮತ್ತು ಮಾಜಿ ಶಾಸಕರ ವೇತನವನ್ನು ಹೆಚ್ಚಿಸುವ ಪ್ರಸ್ತಾವನೆಯಿದ್ದ ಮಸೂದೆಗಳನ್ನು ಜಮ್ಮು ಮತ್ತು ಕಾಶ್ಮೀರ್ ಸರ್ಕಾರವು ಮಂಗಳವಾರ ಹಿಂಪಡೆದಿದೆ. ಸದನದಲ್ಲಿ ವೇತನ ಮತ್ತು ಭತ್ಯೆಗಳ ಹೆಚ್ಚಳದ ಕುರಿತು ಚರ್ಚೆ ನಡೆದು, ಆಡಳಿತ ಮತ್ತು ಪ್ರತಿಪಕ್ಷಗಳ ಶಾಸಕರನ್ನೊಳಗೊಂಡ ಸಮಿತಿಯನ್ನು ರಚಿಸಿದ ಕೆಲವೇ ದಿನಗಳಲ್ಲಿ ಈ ಮಸೂದೆಗಳನ್ನು ಹಿಂಪಡೆಯುವ ನಿರ್ಧಾರ ಹೊರಬಿದ್ದಿದೆ.

ದಿನಗೂಲಿ ನೌಕರರು ಮತ್ತು ಇತರೆ ಕಾರ್ಮಿಕರ ನಿರುದ್ಯೋಗದಂತಹ ಸಮಸ್ಯೆಗಳನ್ನು ಬಗೆಹರಿಸದೆಯೇ ಶಾಸಕರ ವೇತನ ಹೆಚ್ಚಳದ ಪ್ರಸ್ತಾವನೆ ಮುಂದಿಟ್ಟಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗುತ್ತದೆ ಎಂದು ಹೇಳಿದರು.

ಕುತೂಹಲಕಾರಿ ಸಂಗತಿಯೆಂದರೆ, ಶಾಸಕರು, ಸಚಿವರು ಮತ್ತು ಮಾಜಿ ಶಾಸಕರ ವೇತನ ಹೆಚ್ಚಳವನ್ನು ಕಳೆದ ವರ್ಷ ಪ್ರಸ್ತಾಪಿಸಿದ್ದ ಸದನದ ಸಮಿತಿಯಲ್ಲಿ ಬಿಜೆಪಿ ಶಾಸಕ ಎಸ್.ಎಸ್. ಸ್ಲಾಥಿಯಾ ಅವರೇ ಅಧ್ಯಕ್ಷ ಆಗಿದ್ದರು.

ಈ ಮಸೂದೆಯನ್ನು ಅಂಗೀಕರಿಸುವ ವಿಷಯದಲ್ಲಿ ಸದನದಲ್ಲಿ ಸರ್ವಾನುಮತವಿಲ್ಲದಿದ್ದರೆ, ಅದನ್ನು ಅಂಗೀಕರಿಸಲು ಒತ್ತಾಯಿಸುವುದಿಲ್ಲ ಮತ್ತು ಹಿಂಪಡೆಯುವುದಾಗಿ ಮುಖ್ಯಮಂತ್ರಿ ಹೇಳಿದರು. ಒಬ್ಬ ಸದಸ್ಯರು ವಿರೋಧಿಸಿದರೂ ಅದು ಅಂಗೀಕಾರವಾಗುವುದಿಲ್ಲ. ನಾನು ಮಸೂದೆಯನ್ನು ಹಿಂಪಡೆಯುತ್ತೇನೆ. ಬಿಜೆಪಿ ಶಾಸಕರೂ ಕೂಡ ಈ ವೇತನ ಹೆಚ್ಚಳದ ಲಾಭವನ್ನು ಪಡೆಯಲಿದ್ದರೂ, ಈ ವಿಷಯವನ್ನು ರಾಜಕೀಯಗೊಳಿಸಲು ಬಿಡುವುದಿಲ್ಲ ಎಂದು ಸಿಎಂ ಅಬ್ದುಲ್ಲಾ ಸ್ಪಷ್ಟಪಡಿಸಿದರು.

ಬಿಜೆಪಿ ಮಸೂದೆಯನ್ನು ವಿರೋಧಿಸುವುದನ್ನು ಮುಂದುವರಿಸಿದಾಗ, ಸ್ಪೀಕರ್ ಅಬ್ದುಲ್ ರಹೀಮ್ ರಾಥರ್ ಅವರು ಮಸೂದೆಯನ್ನು ಹಿಂಪಡೆಯುವ ಕುರಿತು ಮತಕ್ಕೆ ಹಾಕಿದರು. ಆಗ ಆಡಳಿತ ಮತ್ತು ಪ್ರತಿಪಕ್ಷಗಳಿಂದ ಮಸೂದೆಯನ್ನು ಹಿಂಪಡೆಯುವ ಪರವಾಗಿ ಹೆಚ್ಚಿನ ಮತಗಳು ಲಾವಣೆಗೊಂಡವು.ಇದಕ್ಕೂ ಮುನ್ನ, ಒಂದು ದಿನದ ಹಿಂದೆ ಸಿಎಂ ಒಮರ್ ಅಬ್ದುಲ್ಲಾ ಮಂಡಿಸಿದ್ದ ರಾಜ್ಯದ ಸ್ಥಾನಮಾನದ ನಿರ್ಣಯವನ್ನು ಅಂಗೀಕರಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಸದನದಲ್ಲಿ ಗದ್ದಲ ಉಂಟಾಯಿತು ಮತ್ತು ಬಿಜೆಪಿ ನಾಯಕರು ಅಲ್ಪಕಾಲದವರೆಗೆ ಸದನದಿಂದ ಹೊರನಡೆದಿದ್ದರು.



### ಲಾಲ್ ಶರ್ಮಾ ಆಕ್ಷೇಪ

ಶಾಸಕರ ಪ್ರಸ್ತುತ ಒಟ್ಟು ವೇತನವನ್ನು 1.8 ಲಕ್ಷ ರೂಪಾಯಿಯಿಂದ 3 ಲಕ್ಷ ರೂಪಾಯಿಗೆ ಹೆಚ್ಚಿಸುವುದರ ಜೊತೆಗೆ ಭತ್ಯೆಗಳು, ದೂರವಾಣಿ ಬಿಲ್‌ಗಳು ಮತ್ತು ಗೃಹ ಸಾಲಗಳ ಸೌಲಭ್ಯವನ್ನೂ ನೀಡಲು ಈ ಸಮಿತಿಯು ಪ್ರಸ್ತಾಪಿಸಿತ್ತು. ಹಣಕಾಸು ಖಾತೆಯನ್ನು ಹೊಂದಿರುವ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಅವರು ಮಂಗಳವಾರ ಈ ಮೂರು ಮಸೂದೆಗಳ ಪೈಕಿ ಮೊದಲನೆಯದನ್ನು ಮಂಡಿಸಿದಾಗ, ಬಿಜೆಪಿ ಶಾಸಕ ಶಾಮ್ ಲಾಲ್ ಶರ್ಮಾ ಅವರು ಆಕ್ಷೇಪ ವ್ಯಕ್ತಪಡಿಸಿದರು.

**ಈ ದಿನದ ದರ** ಪೆಟ್ರೋಲ್: 111.68₹/L ಡೀಸೆಲ್ : 99.56₹/L ಬಂಗಾರ: ₹ 14,880/Gram 24ct ₹ 13,640 /Gram 22ct ಬೆಳ್ಳಿ: ₹240.00/

# ಶ್ರೀಮದ್ಭಾಗವತ ಪ್ರವಚನ

• ಉದಯವಾಹಿನಿ, ಬೆಂಗಳೂರು



ಉದಯವಾಹಿನಿ ಚಿತ್ರ

ಬೆಂಗಳೂರಿನ ಚಿಕ್ಕಪೇಟೆಯ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಸೆಪ್ಟೆಂಬರ್ 29 ರಿಂದ ಅಕ್ಟೋಬರ್ 4ರ ವರೆಗೆ ಪ್ರತಿದಿನ ಸಂಜೆ 6-30ಕ್ಕೆ ಶ್ರೀ ಐತರೇಯ ಆಚಾರ್ಯರಿಂದ ಶ್ರೀಮದ್ಭಾಗವತ ಪ್ರವಚನ ಏರ್ಪಡಿಸಿದೆ. ಸ್ಥಳ : ನಂಜನಗೂಡು ಶ್ರೀರಾಘವೇಂದ್ರ ಸ್ವಾಮಿಗಳ ಮಠ, ನಂ. 613, ಓಟಿಸಿ ರಸ್ತೆ, ಚಿಕ್ಕಪೇಟೆ, ಬೆಂಗಳೂರು-560053

# ರೇಣುಕಾಸ್ವಾಮಿ ಮರ್ಮಾಂಗಕ್ಕೆ ಒದ್ದಿದ್ದ ದರ್ಶನ್; ನಟನ ಕ್ರೂರತ್ವ ಬಿಚ್ಚಿಟ್ಟ ಪ್ರದೋಷ್!

• ಉದಯವಾಹಿನಿ, ಬೆಂಗಳೂರು

ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಮಾಫಿ ಸಾಕ್ಷಿಯಾಗಿರುವ (14ನೇ ಆರೋಪಿ) ಪ್ರದೋಷ್ ರಾವ್ ಅವರ ಮಾಫಿ ಸಾಕ್ಷಿ ಹೇಳಿಕೆಯನ್ನು 59ನೇ ಸೆಷನ್ಸ್ ಕೋರ್ಟ್‌ನಲ್ಲಿ ಇನ್ ಕ್ಯಾಮೆರಾ ಪ್ರಕ್ರಿಯೆ ಮೂಲಕ ದಾಖಲಿಸಿಕೊಳ್ಳಲಾಗಿದೆ.

ಈ ಮೂಲಕ ಸಹ ಆರೋಪಿಯಾಗಿದ್ದ ಪ್ರದೂಷ್ ಹೇಳಿಕೆ ವಿಡಿಯೋ ಕಾನ್ಫರೆನ್ಸ್‌ನಲ್ಲಿದ್ದ ದರ್ಶನ್ ಹಾಗೂ ಇತರ ಆರೋಪಿಗಳಿಗೆ ನೇರವಾಗಿ ಆತಂಕಕ್ಕೀಡು ಮಾಡಿತು. ಮಾಫಿ ಸಾಕ್ಷಿ ಹೇಳಿಕೆಯಲ್ಲಿ ಪ್ರದೋಷ್ ಡಿ ಗ್ಯಾಂಗ್‌ನ ಭೀಕರತೆಯನ್ನು ಬಿಚ್ಚಿಟ್ಟಿದ್ದಾರೆ. ಸುಮಾರು 4 ಗಂಟೆಗಳ ಕಾಲ ಪ್ರದೂಷ್ ರಾವ್ ಮಾಫಿ ಸಾಕ್ಷಿ



ಉದಯವಾಹಿನಿ ಚಿತ್ರ

ಹೇಳಿಕೆ ನೀಡಿದ್ದು ಸಂಪೂರ್ಣವಾಗಿ ವಿಡಿಯೋ ರೆಕಾರ್ಡ್ ಮಾಡಿಕೊಳ್ಳಲಾಯಿತು. ದರ್ಶನ್ ಹೇಗೆ ಪರಿಚಯವಾದರೂ ಎಂಬ ಪ್ರಾಥಮಿಕ ಮಾಹಿತಿಯಿಂದ ಹಿಡಿದು ರೇಣುಕಾಸ್ವಾಮಿ ಹತ್ಯೆಗೈದು, ಆತನ ಮೃತದೇಹವನ್ನು ಹೇಗೆ ಕಾಮಾಕ್ಷಿಪಾಳ್ಯದ ಚರಂಡಿ ಬಳಿ ಬಿಸಾಡಲಾಯಿತು ಎಂಬ ಬಗ್ಗೆ, ಮೊದಲ ಆರೋಪಿ ಪವಿತ್ರಾಗೌಡ, 2ನೇ ಆರೋಪಿ ದರ್ಶನ್, ಪವಿತ್ರಾಗೌಡ ಸಹಾಯಕ ಪವನ್ ಹಾಗೂ ಇತರ ಆರೋಪಿಗಳ ಪಾತ್ರದ ಕುರಿತು ಎಳೆಎಳೆಯಾಗಿ ಬಿಚ್ಚಿಟ್ಟಿದ್ದಾರೆ.

ರೇಣುಕಾಸ್ವಾಮಿ ನಮ್ಮ ಕೈಗೆ ಸಿಕ್ಕಿದ್ದು ಹೇಗೆ? ಆತನನ್ನು ಕೊಂದಿದ್ದು ಹೇಗೆ? ದರ್ಶನ್‌ಗೆ ಪವಿತ್ರಾ ಗೌಡ ಏನಾಗಬೇಕು ಎಂಬುವ ಎಲ್ಲಾ ಮಾಹಿತಿಯನ್ನು ಪದರ ಪದರವಾಗಿ ಬಿಚ್ಚಿಟ್ಟಿದ್ದಾರೆ. ಪವಿತ್ರಾ ಗೌಡಗೆ ಮೆಸೇಜ್ ಮಾಡಿದ್ದ ರೇಣುಕಾಸ್ವಾಮಿಯನ್ನು ಸುಳ್ಳು ಹೇಳಿ ಪಟ್ಟಣಗೆರೆ ಶೆಡ್‌ಗೆ ಕರೆತರಲಾಗಿತ್ತು. ಮೊದಲು ವಾರ್ನಿಂಗ್ ಕೊಟ್ಟು, ನಾಲ್ಕು ಬಾರಿಸಿ ಕಳಿಸುವ ಇರಾದೆ ಇತ್ತು ಎಂದು ಹೇಳಿದ್ದಾರೆ.

### ನನ್ನ ಹೆಂಡತಿಗೆ ಕೆಟ್ಟ ಮೆಸೇಜ್ ಮಾಡುವಷ್ಟು ಧೈರ್ಯನಾ?

ರೇಣುಕಾಸ್ವಾಮಿ ಕ್ಷಮಿಸಿ ಸರ್ ಎಂದು ಕೈಮುಗಿದು ಕೇಳಿಕೊಂಡ. ಆಗ ದರ್ಶನ್ ಮತ್ತೊಮ್ಮೆ ಏರುಧ್ವನಿಯಲ್ಲಿ ಇವಳು ಯಾರು ಗೊತ್ತಾ? ಎಂದು ಪ್ರಶ್ನಿಸಿದರು. ರೇಣುಕಾಸ್ವಾಮಿ ಅಳುತ್ತಿದ್ದ. ಪವಿತ್ರಾರನ್ನು ಹತ್ತಿರ ಎಳೆದು ಅವರ ಹೆಗಲ ಮೇಲೆ ಕೈ ಹಾಕಿ ಇವಳು ನನ್ನ ಹೆಂಡತಿ. ನನ್ನ ಹೆಂಡತಿಗೆ ಕೆಟ್ಟ ಮೆಸೇಜ್ ಮಾಡುವಷ್ಟು ಧೈರ್ಯನಾ? ಎಂದು ಗದರಿ ಆತನ ಮರ್ಮಾಂಗಕ್ಕೆ ಜೋರಾಗಿ ಒದ್ದರು ಎಂದು ಪ್ರದೋಷ್ ಹೇಳಿಕೊಂಡಿದ್ದಾರೆ.

# ಯಾರನ್ನು ಕೇಳಿ ನೀರು ಬಿಟ್ಟದ್ದೀರಾ? ಅಧಿಕಾರಿಗಳ ವಿರುದ್ಧ ಶೋಕಾಸ್ ನೋಟಿಸ್ ಜಾರಿ

• ಉದಯವಾಹಿನಿ, ಬೆಂಗಳೂರು

ತುಂಗಭದ್ರಾ ಡ್ಯಾಮ್‌ನಿಂದ ಕಾರ್ಖಾನೆಗಳಿಗೆ ಅನಧಿಕೃತವಾಗಿ ನೀರು ಬಿಟ್ಟಿರುವ ಘಟನೆಗೆ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ್ ತಂಗಡಗಿ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಸಂಬಂಧ ಸ್ಪಷ್ಟನೆ ನೀಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಶೋಕಾಸ್ ನೋಟಿಸ್ ಜಾರಿಗೊಳಿಸುವಂತೆ ಸಚಿವರು ಸೂಚನೆ ನೀಡಿದ್ದಾರೆ. ಯಾವ ಆದೇಶ ಇಟ್ಟುಕೊಂಡು ಕಾರ್ಖಾನೆಗಳಿಗೆ ನೀರು ಬಿಡಲಾಗಿದೆ ಎಂದು ಪ್ರಶ್ನಿಸಿರುವ ಸಚಿವರು, ಅಧಿಕಾರಿಗಳು ನೀಡುವ ಯಾವುದೇ ಅನಧಿಕೃತ ನೋಟಿಸ್‌ಗಳಿಗೆ



ಉದಯವಾಹಿನಿ ಚಿತ್ರ

ಮಾನ್ಯತೆ ನೀಡುವುದಿಲ್ಲ ಎಂದು ಖಡಾಖಂಡಿತವಾಗಿ ತಿಳಿಸಿದ್ದಾರೆ. ಮುನಿರಾಬಾದ್‌ನಲ್ಲಿರುವ ನೀರಾವರಿ ವಲಯದ ಕಚೇರಿಯ ಅಧಿಕಾರಿಗಳು ಯಾವ ಆದೇಶದ ಮೇಲೆ ನೀರು ಬಿಡಲು ಮುಂದಾದರು ಎಂಬುದನ್ನು ವಿವರಿಸುವಂತೆ ಸೂಚಿಸಲಾಗಿದೆ.

ನನ್ನ ಅಧ್ಯಕ್ಷತೆಯಲ್ಲಿ ನಡೆದ ಐಸಿಸಿ ಸಭೆಯಲ್ಲಿ ಇಂತಹ ಯಾವುದೇ ನಿರ್ಧಾರವಾಗಿಲ್ಲ. ರೈತರು ನನಗೆ ಮಾಹಿತಿ ನೀಡಿದ ತಕ್ಷಣವೇ ನಾನು ಅಧಿಕಾರಿಗಳೊಂದಿಗೆ ಮಾತನಾಡಿದ್ದೇನೆ. ಕಾರ್ಖಾನೆಗಳಿಗೆ ನೀರು ಬಿಡಲು ಅಧಿಕಾರ ಕೊಟ್ಟವರು ಯಾರು? ಇದಕ್ಕೆ ಅವರು ಉತ್ತರ ನೀಡಬೇಕು'' ಎಂದು ಸಚಿವ ತಂಗಡಗಿ ಆಗ್ರಹಿಸಿದ್ದಾರೆ. ಈಗಾಗಲೇ ಎಂಡಿ ಅವರಿಗೆ ಮಾತನಾಡಿ ಶೋಕಾಸ್ ನೋಟಿಸ್ ಕೊಡಿಸುವ ಕೆಲಸ ಮಾಡಲಾಗಿದೆ ಎಂದರು.

# ಸಿಎಂ ಡಿಕೆ ಶಿವಕುಮಾರ್ ಕುಟುಂಬದ ವಿರುದ್ಧವೇ ಭೂಕಬಳಿಕೆ ಆರೋಪ ಮಾಡಿದ ಕುಮಾರಸ್ವಾಮಿ

## ಕರ್ನಾಟಕ ಸಿಎಂ ಡಿಕೆ ಶಿವಕುಮಾರ್ ಮತ್ತು ಕೇಂದ್ರ ಸಚಿವ ಹೆಚ್‌ಡಿ. ಕುಮಾರಸ್ವಾಮಿ ಅವರ ನಡುವಿನ ರಾಜಕೀಯ ಸಮರ ತೀವ್ರ ಸ್ವರೂಪ ಪಡೆದುಕೊಂಡಿದೆ.

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನಲ್ಲಿ ಸುದ್ದಿಗೋಷ್ಠಿ ನಡೆಸಿದ ಹೆಚ್‌ಡಿಕೆ, ಮುಖ್ಯಮಂತ್ರಿಗಳು ಮತ್ತು ಅವರ ಕುಟುಂಬದ ವಿರುದ್ಧ ಭೂಕಬಳಿಕೆ ಆರೋಪ ಮಾಡಿದ್ದಾರೆ. ಅಲ್ಲದೆ ಆ ಸಂಬಂಧ ಹಲವು ದಾಖಲೆಗಳನ್ನೂ ರಿಲೀಸ್ ಮಾಡಿದ್ದಾರೆ. ಯೋಜನೆಗೆಂದು ಪಡೆದಿದ್ದ ಸಿದ್ಧಗಂಗಾ ಮಠಕ್ಕೆ ಸೇರಿದ 7 ಎಕರೆ ಭೂಮಿ ವಿಚಾರವಾಗಿಯೂ ಬಿಗ್ ಬಾಂಬ್ ಸಿಡಿಸಿದ್ದಾರೆ.

ಕರ್ನಾಟಕ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರ ಕುಟುಂಬದ ವಿರುದ್ಧವೇ ಕೇಂದ್ರ ಸಚಿವ ಹೆಚ್‌ಡಿ. ಕುಮಾರಸ್ವಾಮಿ ಬಿಗ್ ಬಾಂಬ್ ಸಿಡಿಸಿದ್ದು, ಭೂಕಬಳಿಕೆ ಆರೋಪ ಮಾಡಿದ್ದಾರೆ. ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ಸುದ್ದಿಗೋಷ್ಠಿ ನಡೆಸಿ ಮಾಹಿತಿ ನೀಡಿರುವ ಹೆಚ್‌ಡಿಕೆ, ತಾವು ಮಾಡಿರುವ ಗಂಭೀರ ಆರೋಪಗಳ ಸಂಬಂಧ ಹಲವು ದಾಖಲೆಗಳನ್ನೂ ರಿಲೀಸ್ ಮಾಡಿದ್ದಾರೆ. 2003ರಲ್ಲಿ ಸಿಎಂ ಡಿಕೆಶಿ ಆಸ್ತಿ 4 ಕೋಟಿ ರೂ. ಇತ್ತು. ಆದರೆ 2023ರಲ್ಲಿ ಅದು 1,413 ಕೋಟಿ ರೂ. ಆಗಿದೆ. ಇದಕ್ಕೆ ಕಾರಣ ಒಡಿಪಿ (ಭೂಮಿಯ ಬಳಕೆ ಉದ್ದೇಶ) ಬದಲಾವಣೆ ಮಾಡಿದ್ದು ಎಂದು ದೂರಿರುವ ಅವರು, 2003ರಿಂದ 2023ರವರೆಗಿನ ದಾಖಲೆಯನ್ನೂ ಮುಂದಿಟ್ಟಿದ್ದಾರೆ.

**ಸಿಎಂ ಡಿಕೆಶಿ ಕುಟುಂಬದ ವಿರುದ್ಧ ಕುಮಾರಸ್ವಾಮಿ ಬಿಗ್‌ಬಾಂಬ್**

ಸಿಎಂ ಡಿಕೆ ಶಿವಕುಮಾರ್ ಕುಟುಂಬದವರ ಹೆಸರಿನಲ್ಲಿ ನೈಸ್ ಯೋಜನೆ ವ್ಯಾಪ್ತಿಗೆ ಬರುವ ಜಮೀನು ಖರೀದಿ ಬಗ್ಗೆಯೂ ಉಲ್ಲೇಖಿಸಿರುವ ಕುಮಾರಸ್ವಾಮಿ, ಜಮೀನು ಖರೀದಿಸಿರುವ ದಾಖಲೆ ಪತ್ರವನ್ನೂ ಬಿಡುಗಡೆ ಮಾಡಿದ್ದಾರೆ. ನಾನು ಟೇಕ್‌ಓವರ್ ಮಾಡಲು ಯತ್ನಿಸ್ತಿಲ್ಲ ಅಂತಾರೆ, ಆದರೆ ಇದಕ್ಕೆ ಏನು ಹೇಳ್ತೀರಾ ಎಂದು ಡಿಕೆಶಿ ಅವರನ್ನು ಪ್ರಶ್ನಿಸಿದ್ದಾರೆ.

ಅಧಿಕಾರಿಗಳಿಗೆ ಹೆದರಿಸಿ ಗೋಮಾಳವನ್ನೂ ಬರೆಸಿಕೊಂಡಿದ್ದು, 150-200 ಎಕರೆಗೂ ಹೆಚ್ಚು ಅವರ ಹೆಸರಿಗೆ ಮಾಡಿಕೊಂಡಿದ್ದಾರೆ. ಅವೆಲ್ಲವೂ ನೈಸ್ ಕಂಪನಿಯ ವ್ಯಾಪ್ತಿಯ ಭೂಮಿ. ಕೆಐಎಡಿಬಿ ಭೂಮಿ ಸ್ವಾಧೀನಪಡಿಸಿಕೊಂಡಿದ್ದ



ಉದಯವಾಹಿನಿ ಚಿತ್ರ

ಭೂಮಿ ಈಗ ಇವರ ಹೆಸರಿನಲ್ಲಿದೆ. ನಾನು ಬ್ಲ್ಯಾಕ್‌ಮೇಲ್ ಮಾಡ್ತಿದ್ದೇನೆಂದು ಡಿಕೆಶಿ ಹೇಳುತ್ತಾರೆ. ಡಿಕೆಶಿ ಅವರೇ ನಾನು ಬ್ಲ್ಯಾಕ್ ಮೇಲ್ ಮಾಡ್ತಿರುವುದು ನಿಜ. ಆದರೆ ಅಕ್ರಮವಾಗಿ ಭೂಮಿ ಖರೀದಿಸಿದ್ದೀರಲ್ಲ, ಅದಕ್ಕೆ ಉತ್ತರ ಕೊಡಿ ಎಂದು ಕುಮಾರಸ್ವಾಮಿ ಆಗ್ರಹಿಸಿದ್ದಾರೆ.

## BMIC ಯೋಜನೆಗೆಂದು ಪಡೆದಿದ್ದ ಸಿದ್ಧಗಂಗಾ ಮಠದ ಜಮೀನಲ್ಲೂ ಅಕ್ರಮ

BMIC ಯೋಜನೆಗೆಂದು ಸಿದ್ಧಗಂಗಾ ಮಠಕ್ಕೆ ಸೇರಿದ 7 ಎಕರೆ ಭೂಮಿ ತೆಗೆದುಕೊಂಡಿದ್ದರು. ಆದರೆ ರಸ್ತೆಗೆ 1 ಎಕರೆ ಹೋಗಿದೆ, ಉಳಿದ ಭೂಮಿ ಕೊಡಿ ಎಂದು ಶ್ರೀಗಳು ಅರ್ಜಿ ಕೊಡ್ತಾರೆ. ಈ ವಿಚಾರಕ್ಕೆ ನನ್ನ ಮನೆಗೆ ಬರಬೇಡಿ. ಆಶೀರ್ವಾದ ಮಾಡೋಕೆ ಮಾತ್ರ ಬನ್ನಿ ಎಂದು ಸಿದ್ಧಗಂಗಾ ಸ್ವಾಮೀಜಿಗೆ ಹೇಳ್ತಾರೆ ಎಂದೂ ತಿಳಿಸಿರುವ ಕೇಂದ್ರ ಸಚಿವ, ಸಿಎಂ ಡಿಕೆಶಿ ಮಾತನಾಡಿದ್ದು ಎನ್ನಲಾದ ಆಡಿಯೋವನ್ನೂ ಬಿಡುಗಡೆ ಮಾಡಿದ್ದಾರೆ.

2004ರ ನ.3ರಂದು ಸರ್ಕಾರದ ಆಸ್ತಿಯನ್ನು ಡಿ.ಕೆ.ಸುರೇಶ್ ಖರೀದಿಸಿದ್ರು. ಯಾರದ್ದೋ ಹೆಸರಿನಲ್ಲಿದೆ ಎಂದು ಸುಮಾರು 10 ಎಕರೆ ಭೂಮಿ ಖರೀದಿ ನಡೆದಿದ್ದು, ಅದು ಸರ್ಕಾರದ ಯೋಜನೆಗೆ 1997ರಲ್ಲಿ ನೋಟಿಫೈ ಆಗಿದ್ದ ಭೂಮಿಯಾಗಿದೆ. ಅದನ್ನು 2026ರಲ್ಲಿ ಸಿಎಂ ಡಿಕೆ ಪುತ್ರಿ ಆಭರಣ ಖರೀದಿ ಮಾಡುತ್ತಾರೆ .ಹೆಚ್‌ಡಿಕೆ

1 ಸಿಎಂ ಡಿಕೆಶಿ ಕುಟುಂಬದ ವಿರುದ್ಧವೇ ಗಂಭೀರ ಆರೋಪ

2 ಭೂಕಬಳಿಕೆ ಆರೋಪ ಮಾಡಿರುವ ಹೆಚ್‌ಡಿ. ಕುಮಾರಸ್ವಾಮಿ

3 ಹಲವು ದಾಖಲೆಗಳನ್ನೂ ರಿಲೀಸ್ ಮಾಡಿರುವ ಕೇಂದ್ರ ಸಚಿವ

### ಗುತ್ತಿಗೆದಾರರ 38 ಸಾವಿರ ಕೋಟಿ ಬಿಲ್

ರಾಜ್ಯದ ವಿವಿಧ ಇಲಾಖೆಗಳಿಂದ ಗುತ್ತಿಗೆದಾರರಿಗೆ ಬರಬೇಕಿರುವ ಒಟ್ಟು ಸುಮಾರು 38,000 ಕೋಟಿರೂ. ಬಾಕಿ ಮೊತ್ತವನ್ನು ತಕ್ಷಣವೇ ಬಿಡುಗಡೆ ಮಾಡುವಂತೆ ಒತ್ತಾಯಿಸಿ ಕರ್ನಾಟಕ ಸ್ಟೇಟ್ ಕಂಟ್ರಾಕ್ಟರ್ಸ್ ಅಸೋಸಿಯೇಷನ್ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅಧಿಕೃತ ಮನವಿ ಪತ್ರ ಸಲ್ಲಿಸಿದೆ.

ಉಪಮುಖ್ಯಮಂತ್ರಿಗಳಾಗಿದ್ದ ಅವಧಿಯಲ್ಲಿ ಫ್ರೀಡಂ ಪಾರ್ಕ್‌ನಲ್ಲಿ ನಡೆದ ಪ್ರತಿಭಟನೆ ನಂತರ ಮುಖ್ಯಮಂತ್ರಿಯಾಗಿ ಆಯ್ಕೆಯಾದ ಬಳಿಕ ಸಂಘದ ಪದಾಧಿಕಾರಿಗಳೊಂದಿಗೆ ನಡೆಸಿದ ಚರ್ಚೆಯಲ್ಲಿ ನೀಡಿದ್ದ ಭರವಸೆಸಂಘ ನೆನಪಿಸಿದೆ.

ಎರಡು ತಿಂಗಳ ಒಳಗಾಗಿ ಬಾಕಿ ಹಣ ಪಾವತಿಗೆ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ್ದರೂ, 2021-22 ರಿಂದ ಇಂದಿನವರೆಗೂ ಬಾಕಿ ಬಿಡುಗಡೆಯಾಗದೆ ಗುತ್ತಿಗೆದಾರರು ಮತ್ತು ಅವರನ್ನು ಅವಲಂಬಿಸಿರುವ ಸುಮಾರು 1.50 ಲಕ್ಷ ಕುಟುಂಬಗಳು ಸಂಕಷ್ಟದಲ್ಲಿವೆ ಎಂದು ಸಂಘ ತಿಳಿಸಿದೆ.

# ಟ್ರಾಫಿಕ್ ಜಾಮ್‌ಗೆ ಸವಾರರ ಪರದಾಟ..!



ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ ಸೋಮವಾರ ರಾತ್ರಿ ಪೂರ್ತಿ ಧಾರಾಕಾರ ಮಳೆಯಾಗಿದ್ದು, ಹಲವೆಡೆ ರಸ್ತೆಗಳು ಜಲಾವೃತಗೊಂಡು ವಾಹನ ಸವಾರರು ಪರದಾಡುವಂತಾಗಿದೆ.ಮಳೆಯ ಪರಿಣಾಮ ನಗರದ ಹಲವು ಪ್ರಮುಖ ರಸ್ತೆಗಳಲ್ಲಿ ಸಂಚಾರ ನಿಧಾನಗೊಂಡಿದ್ದು, ಕೆಲವೆಡೆ ಭಾರಿ ವಾಹನ ದಟ್ಟಣೆ ಉಂಟಾಗಿದೆ.ಯಶವಂತಪುರ, ಮೆಜೆಸ್ಟಿಕ್, ಮಲ್ಲೇಶ್ವರಂ, ರಾಜಾಜಿನಗರ, ಕಾರ್ಪೊರೇಷನ್, ಮಾರ್ಕೆಟ್, ಲಾಲ್‌ಬಾಗ್ ಸೇರಿದಂತೆ ನಗರದ ಹಲವು ಪ್ರದೇಶಗಳಲ್ಲಿ ರಾತ್ರಿ ಭಾರಿ ಮಳೆಯಾಗಿದೆ. ಮಳೆಯ ನೀರು ರಸ್ತೆಯಲ್ಲಿ ನಿಂತ ಪರಿಣಾಮ ವಾಹನ ಸಂಚಾರಕ್ಕೆ ತೊಂದರೆಯಾಗಿದೆ. ವೈಟ್‌ಫೀಲ್ಡ್, ಮಾರತ್ತಹಳ್ಳಿ, ಹೊರ ವರ್ತುಲ ರಸ್ತೆ, ಬಳಗೆರೆ ಹಾಗೂ ಬೆಳ್ಳಂದೂರು ಸುತ್ತಮುತ್ತಲಿನ ಪ್ರದೇಶಗಳಲ್ಲೂ ಮಳೆಯಾಗಿದ್ದು, ಹಲವು ಕಡೆ ಸಂಚಾರ ದಟ್ಟಣೆ ಕಂಡುಬಂದಿದೆ. ಮಳೆಯ ನಡುವೆಯೇ ಸಂಚಾರವನ್ನು ಸುಗಮಗೊಳಿಸಲು ಪೊಲೀಸರು ಹರಸಾಹಸಪಟ್ಟರು. ಇತ್ತ ನೆಲಮಂಗಲದ ಹಲವು ಭಾಗಗಳಲ್ಲಿ ರಾತ್ರಿಯಿಡೀ ಮಳೆಯಾಗಿದ್ದು, ಬೆಳಗ್ಗೆಯೂ ಮಳೆ ಮುಂದುವರಿದಿದೆ. ಈ ನಡುವೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಬೆಳಗಿನ ಜಾವ ಲಾರಿಯೊಂದು 108 ಆಂಬ್ಯುಲೆನ್ಸ್‌ಗೆ ಡಿಕ್ಕಿ ಹೊಡೆದಿದೆ. ಅಪಘಾತದ ಮಾಹಿತಿ ತಿಳಿದು ಚಿಕ್ಕಬಾಣಾವಾರ ಸಂಚಾರಿ ಪೊಲೀಸರು ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದ್ದಾರೆ.ಇಂದು ಕೂಡ ಮಳೆ ಮುಂದುವರಿಯುವ ಸಾಧ್ಯತೆಯಿರುವುದರಿಂದ ಸಂಜೆ ವೇಳೆ ಸಂಚಾರ ದಟ್ಟಣೆ ಮತ್ತಷ್ಟು ಹೆಚ್ಚಾಗುವ ಆತಂಕವಿದೆ.ಹಲವೆಡೆ ಮಳೆಯಾಗುವ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿದೆ. ಚಾಮರಾಜನಗರ, ಚಿಕ್ಕಮಗಳೂರು, ಹಾಸನ, ಮಂಡ್ಯ, ಮೈಸೂರು ಹಾಗೂ ತುಮಕೂರು ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ

# ಮಟನ್ ಶಾಪ್‌ನಲ್ಲಿ ನಡೀತಿತ್ತು ಡ್ರಗ್ಸ್ ಮಾರಾಟ! ಇಬ್ಬರ ಬಂಧನ

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನ ವಿದ್ಯಾರಣ್ಯಪುರದಲ್ಲಿ ಆಘಾತಕಾರಿ ಘಟನೆಯೊಂದು ಬೆಳಕಿಗೆ ಬಂದಿದೆ. ಇಲ್ಲಿನ ಮಟನ್ ಶಾಪ್‌ವೊಂದರಲ್ಲಿ ಎಂಡಿಎಂಎ ಮಾದಕ ವಸ್ತುವಿನ ಮಾರಾಟ ಜಾಲವನ್ನು ಭೇದಿಸಿರುವ ಪೊಲೀಸರು ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ. ಜುನೈದ್ ಪಾಷಾ ಮತ್ತು ರಿಜ್ವಾನ್ ಬೇಗ್ ಬಂಧಿತ ಆರೋಪಿಗಳು. ಪೊಲೀಸರ ತನಿಖೆಯ ಪ್ರಕಾರ, ಈ ಆರೋಪಿಗಳು ನೈಜೀರಿಯಾ ಪ್ರಜೆಯೊಬ್ಬರಿಂದ ಡ್ರಗ್ಸ್ ಅನ್ನು ತರಿಸಿಕೊಂಡು ಮಟನ್ ಶಾಪ್ ಅನ್ನು ಮಾರಾಟದ ತಾಣವನ್ನಾಗಿ ಮಾಡಿಕೊಂಡಿದ್ದರು. ಖಚಿತ ಮಾಹಿತಿ ಆಧರಿಸಿ ದಾಳಿ ನಡೆಸಿದ ವಿದ್ಯಾರಣ್ಯಪುರ ಪೊಲೀಸರು, ಆರೋಪಿಗಳಿಂದ ಬರೋಬ್ಬರಿ 10 ಲಕ್ಷದ 60 ಸಾವಿರ ರೂಪಾಯಿ ಮೌಲ್ಯದ 106 ಗ್ರಾಂ ಎಂಡಿಎಂಎಯನ್ನು ವಶಪಡಿಸಿಕೊಂಡಿದ್ದಾರೆ. ಇದರ ಜೊತೆಗೆ, ಎರಡು ಮೊಬೈಲ್ ಫೋನ್‌ಗಳು, 2,590 ರೂಪಾಯಿ ನಗದು ಮತ್ತು ಒಂದು ದ್ವಿಚಕ್ರ ವಾಹನವನ್ನು ಸಹ ಜಪ್ತಿ ಮಾಡಲಾಗಿದೆ. ಡ್ರಗ್ಸ್ ಮಾರಾಟ ಎಗ್ಗಿಲ್ಲದೆ ನಡೆಯುತ್ತಿದೆ ಎಂಬ ಆರೋಪಗಳ ನಡುವೆ, ಸಣ್ಣ ಅಂಗಡಿಗಳನ್ನೂ ಸಹ ಮಾದಕ ವಸ್ತು ಮಾರಾಟಕ್ಕೆ ಬಳಸಿಕೊಳ್ಳುತ್ತಿರುವುದು, ಸಾರ್ವಜನಿಕ ಸ್ಥಳಗಳಲ್ಲಿ ಇಂತಹ ಕೃತ್ಯಗಳು ನಡೆಯುತ್ತಿರುವುದು ಆತಂಕ ಮೂಡಿಸಿದೆ. ಸದ್ಯ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

# ವಾಹನಗಳಿಗೆ GPS- ಡ್ಯಾಶ್‌ಕ್ಯಾಮ್ ಅಳವಡಿಕೆ ಕಡ್ಡಾಯ

• ಉದಯವಾಹಿನಿ, ಬೆಂಗಳೂರು

ಹಲವು ಹಂತದ ಪರೀಕ್ಷೆಗಳ ಬಳಿಕ ಕರ್ನಾಟಕದ ಎರಡು ಪ್ರಮುಖ ಹುಲಿ ಸಂರಕ್ಷಿತ ಪ್ರದೇಶಗಳಾದ ಬಂಡೀಪುರ ಮತ್ತು ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿನ ಎಲ್ಲಾ ಸಫಾರಿ ವಾಹನಗಳಲ್ಲಿ ಜಿಪಿಎಸ್ ಆಧಾರಿತ ಸಾಧನಗಳು ಮತ್ತು ಟ್ರ್ಯಾಕರ್‌ಗಳ ಕಾರ್ಯಾಚರಣೆ ಆರಂಭವಾಗಿದೆ. ಸಫಾರಿ ವೇಳೆ ಪ್ರವಾಸಿಗರು ಹಾಗೂ ಅರಣ್ಯಾಧಿಕಾರಿಗಳಿಂದ ಮಾರ್ಗ ಬದಲಾವಣೆ, ನಿಗದಿತ ಮಾರ್ಗಕ್ಕಿಂತ ಹೆಚ್ಚಿನ ಸಮಯ ತೆಗೆದುಕೊಳ್ಳುತ್ತಿರುವ ಕುರಿತು ಹೆಚ್ಚುತ್ತಿರುವ ದೂರುಗಳ ಹಿನ್ನೆಲೆಯಲ್ಲಿ ಈ ವ್ಯವಸ್ಥೆ ಜಾರಿಗೆ ತರಲಾಗಿದೆ.

ವನ್ಯಜೀವಿ ಸಂಘರ್ಷ ಹಾಗೂ ಪ್ರಾಣಿಗಳ ಸಾವಿನ ಪ್ರಕರಣಗಳು ಹೆಚ್ಚಾದ ಹಿನ್ನೆಲೆಯಲ್ಲಿ ಸಫಾರಿ ವಾಹನಗಳ



ಉದಯವಾಹಿನಿ ಚಿತ್ರ

ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಿದ ನಂತರ ಈ ಕ್ರಮ ಕೈಗೊಳ್ಳಲಾಗಿದೆ.ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ವನ್ಯಜೀವಿ ವಿಭಾಗದ ಅಧಿಕಾರಿ ಕುಮಾರ್ ಪುಷ್ಕರ್ ಮಾತನಾಡಿ, ಸಫಾರಿ ವಾಹನಗಳಲ್ಲಿ ಜಿಪಿಎಸ್ ಸಾಧನ, ಟ್ರ್ಯಾಕರ್‌ಗಳು ಹಾಗೂ ಡ್ಯಾಶ್ ಕ್ಯಾಮ್‌ಗಳನ್ನು ಅಳವಡಿಸಲಾಗಿದೆ. ಹಂತಹಂತವಾಗಿ ರಾಜ್ಯದ ಇತರ ಎಲ್ಲ ಅರಣ್ಯ ಪ್ರದೇಶಗಳಿಗೂ ಈ ವ್ಯವಸ್ಥೆಯನ್ನು ವಿಸ್ತರಿಸಲಾಗುವುದು ಎಂದು ತಿಳಿಸಿದ್ದಾರೆ. ಈ ವ್ಯವಸ್ಥೆಯ ಪ್ರಮುಖ ಉದ್ದೇಶ ವನ್ಯಜೀವಿ ಸಂಘರ್ಷ, ಪ್ರಾಣಿಗಳ ಕಾಣಿಸಿಕೊಳ್ಳುವಿಕೆ ಹಾಗೂ ಇತರ ಯಾವುದೇ ಘಟನೆಗಳ ಕುರಿತು ತ್ವರಿತವಾಗಿ ಮಾಹಿತಿ ಮತ್ತು ಎಚ್ಚರಿಕೆ ನೀಡುವುದಾಗಿದೆ ಎಂದು ಅರಣ್ಯಾಧಿಕಾರಿಗಳು ತಿಳಿಸಿದ್ದಾರೆ. ಇದರೊಂದಿಗೆ ಸಫಾರಿ ವಾಹನಗಳ ಚಲನವಲನ ಹಾಗೂ ವನ್ಯಜೀವಿಗಳ ಚಲನವಲನದ ಮೇಲ್ವಿಚಾರಣೆಯೂ ಸಾಧ್ಯವಾಗಲಿದೆ. ಸಫಾರಿ ವಾಹನಗಳ ವೇಗ, ಸಂಚರಿಸಿದ ಮಾರ್ಗ, ತೆಗೆದುಕೊಂಡ ಸಮಯ, ವಾಹನ ನಿಲ್ಲಿಸಿದ ಸ್ಥಳ, ವನ್ಯಜೀವಿಗಳ ಕಾಣಿಸಿಕೊಳ್ಳುವಿಕೆ ಸೇರಿದಂತೆ ಹಲವು ಮಾಹಿತಿಗಳನ್ನು ಈ ಸಾಧನಗಳ ಮೂಲಕ ದಾಖಲಿಸಲಾಗುತ್ತದೆ.

# ಅಂಚೆಪಾಳ್ಯದಲ್ಲಿ ಚಿರತೆ ಪ್ರತ್ಯಕ್ಷ: ವನ್ಯಜೀವಿಗಳ ಹಾವಳಿಯಿಂದ ಹೆಚ್ಚಿದ ಜನರ ಆತಂಕ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಅಂಚೆಪಾಳ್ಯ ಪ್ರದೇಶದಲ್ಲಿ ಚಿರತೆಯೊಂದು ಪ್ರತ್ಯಕ್ಷವಾಗಿರುವುದು ಸ್ಥಳೀಯ ನಿವಾಸಿಗಳಲ್ಲಿ ತೀವ್ರ ಆತಂಕಕ್ಕೆ ಕಾರಣವಾಗಿದೆ.

ನಿನ್ನೆ ಕಾಡಾನೆಯೊಂದು ನಗರಕ್ಕೆ ಲಗ್ಗೆ ಇಟ್ಟು ವ್ಯಕ್ತಿಯೊಬ್ಬರನ್ನು ಬಲಿ ಪಡೆದ ಘಟನೆ ಬೆನ್ನಲ್ಲೇ ಈಗ ಚಿರತೆ ಕಾಣಿಸಿಕೊಂಡಿರುವುದು ಪರಿಸ್ಥಿತಿಯನ್ನು ಮತ್ತಷ್ಟು ಉದ್ವಿಗ್ನಗೊಳಿಸಿದೆ. ಮುಂಜಾನೆ ಮೂರು ಗಂಟೆ ಸುಮಾರಿಗೆ ಅಂಚೆಪಾಳ್ಯದ ನಿರ್ಜನ ಪ್ರದೇಶವೊಂದರಲ್ಲಿ ಚಿರತೆ ಓಡಾಡುತ್ತಿರುವ ದೃಶ್ಯವನ್ನು ಭದ್ರತಾ ಸಿಬ್ಬಂದಿ ಸೆರೆಹಿಡಿದಿದ್ದಾರೆ.

ಆನೆ ಪ್ರತ್ಯಕ್ಷವಾದ ಜಾಗದ ಸಮೀಪದಲ್ಲೇ ಚಿರತೆ ಕೂಡ ಕಾಣಿಸಿಕೊಂಡಿದೆ. ಪದೇ ಪದೇ ವನ್ಯಜೀವಿಗಳು ನಗರದ ಕಡೆ ಬರುತ್ತಿರುವುದು ಅರಣ್ಯ ಇಲಾಖೆಯ ಕಾರ್ಯವೈಖರಿಯ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕಿದೆ.

# ಸಂಬಂಧಿಕರ ಮನೆಯಲ್ಲಿ ಅಸಲಿ ಒಡವೆ ಕದ್ದು ನಕಲಿ ಇಟ್ಟು ಹೋದವನ ಬಂಧನ

• ಉದಯವಾಹಿನಿ, ಬೆಂಗಳೂರು

ಸಂಬಂಧಿಕರ ಮನೆಯಲ್ಲೇ ಚಿನ್ನದ ಒಡವೆಗಳನ್ನು ಎಗರಿಸಿ, ಆ ಜಾಗದಲ್ಲಿ ನಕಲಿ ಒಡವೆಗಳನ್ನಿಟ್ಟಿದ್ದ ಆರೋಪಿಯನ್ನು ಕೆಂಗೇರಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಶಿವಮೊಗ್ಗ ಜಿಲ್ಲೆಯ ಹೊಸನಗರ ಮೂಲದ ಅಶ್ವಥ್ ಕೆ.ಹೆಚ್ ಬಂಧಿತ ಆರೋಪಿಯಾಗಿದ್ದು, ಆತನಿಂದ ಒಟ್ಟು 8.40 ಲಕ್ಷ ರೂಪಾಯಿ ಮೌಲ್ಯದ 84.3 ಗ್ರಾಂ ಚಿನ್ನಾಭರಣ ಹಾಗೂ ನಗದನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

**ಸಂಬಂಧಿಯಿಂದಲೇ ಕಳ್ಳತನ ಕೃತ್ಯ :** ಕೆಂಗೇರಿಯ ಕೈಲಾಶ್ ಬಿಡಿಎ ಅಪಾರ್ಟ್‌ಮೆಂಟ್‌ನ ಫ್ಲಾಟ್‌ನಲ್ಲಿ ವಾಸವಾಗಿರುವ ಅಶ್ವಥ್ ಎಸ್ ಎಂಬುವರ ಮನೆಯಲ್ಲಿ ಈ ಕಳ್ಳತನ ನಡೆದಿತ್ತು. ದೂರುದಾರರ ಪತ್ನಿಗೆ ದೂರದ ಸಂಬಂಧಿಯಾಗಿದ್ದ ಆರೋಪಿ ಅಶ್ವಥ್ ಕೆ.ಹೆಚ್, ಆಗಾಗ ಮನೆಗೆ ಬಂದು ಹೋಗುತ್ತಿದ್ದ. ಮನೆಯವರ ಜೊತೆ ಆಪ್ತನಾಗಿದ್ದ ಆರೋಪಿ ಇತ್ತೀಚೆಗೆ ಲಕ್ಷ್ಮೀ ಪೂಜೆಗೆ ಆಹ್ವಾನಿಸಿದ್ದಾಗ ಮನೆಗೆ ಬಂದಿದ್ದ.

ಆಗ ದೇವರಿಗೆ ಹಾಕಿದ್ದ ಒಡವೆಗಳನ್ನ ಗಮನಿಸಿ ಕಳ್ಳತನಕ್ಕೆ ಸಂಚು ರೂಪಿಸಿದ್ದ. ಇದಾದ ಕೆಲ ದಿನಗಳಲ್ಲೇ ಕೌಟುಂಬಿಕ ಕಾರ್ಯಕ್ರಮ ಇದ್ದಿದ್ದರಿಂದ ಮನೆಯವರೆಲ್ಲಾ ಊರಿಗೆ ತೆರಳಿದ್ದರು. ಆ ಸಂದರ್ಭದಲ್ಲಿ ಆರೋಪಿ, ನಕಲಿ ಕೀ ತಯಾರಿಸುವವರನ್ನು ಕರೆತಂದು 'ಇದು ನನ್ನದೇ ಮನೆ, ಕೀ ಕಳೆದುಹೋಗಿದೆ' ಎಂದು ನಂಬಿಸಿ ಬಾಗಿಲು ತೆರೆಸಿದ್ದ. ಬಳಿಕ ಮುಂಚಿತವಾಗಿಯೇ ತನ್ನೊಂದಿಗೆ ತಂದಿದ್ದ ನಕಲಿ ಆಭರಣಗಳನ್ನ, ಮನೆಯಲ್ಲಿರಿಸಿ ಅಸಲಿ ಆಭರಣಗಳನ್ನ ಕದ್ದು ಪರಾರಿಯಾಗಿದ್ದ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಮನೆಯವರು ಊರಿನಿಂದ ಮರಳಿದ ಬಳಿಕ ಪೂಜೆ ತಟ್ಟೆಯಲ್ಲಿದ್ದ 8 ಸಾವಿರ ರೂಪಾಯಿ ನಗದು ಹಣ ಕಾಣೆಯಾಗಿರುವುದು ಕಂಡುಬಂದಿತ್ತು.

ಅನುಮಾನಗೊಂಡು ಪರಿಶೀಲಿಸಿದಾಗ, ಬೀರುವಿನಲ್ಲಿದ್ದ 17.3 ಗ್ರಾಂ ತೂಕದ ಚಿನ್ನದ ರೋಪ್ ಚೈನ್, 45 ಗ್ರಾಂ ತೂಕದ ಹವಳದ ಚಿನ್ನದ ಸರ ಹಾಗೂ 22 ಗ್ರಾಂ ತೂಕದ 2 ಚಿನ್ನದ ಬಳೆಗಳು ಸೇರಿದಂತೆ ಒಟ್ಟು 8.40 ಲಕ್ಷ ರೂಪಾಯಿ ಮೌಲ್ಯದ 84.3 ಗ್ರಾಂ ಚಿನ್ನಾಭರಣ ನಕಲಿಯಾಗಿರುವುದು ಪತ್ತೆಯಾಗಿತ್ತು. ತಕ್ಷಣವೇ ಎಚ್ಚೆತ್ತ ಮನೆ ಮಾಲೀಕ ಅಶ್ವಥ್ ಎಸ್, ಕೆಂಗೇರಿ ಪೊಲೀಸ್ ಠಾಣೆಗೆ ದೂರು ನೀಡಿದ್ದರು.ಪ್ರಕರಣ ದಾಖಲಿಸಿಕೊಂಡ ಪೊಲೀಸರು ಸಿಸಿಟಿವಿ ದೃಶ್ಯಾವಳಿಗಳನ್ನ ಪರಿಶೀಲಿಸಿ, ಕಾರ್ಯಾಚರಣೆ ನಡೆಸಿ ಆರೋಪಿ ಅಶ್ವಥ್ ಕೆ.ಹೆಚ್‌ನನ್ನ ಬಂಧಿಸಲಾಗಿದೆ. ಕಳುವಾಗಿದ್ದ ಒಡವೆ ಹಾಗೂ ನಗದನ್ನ ವಶಕ್ಕೆ ಪಡೆದುಕೊಳ್ಳಲಾಗಿದೆ ತಿಳಿಸಿದ್ದಾರೆ.

# ಬೆಂಗಳೂರಿನಲ್ಲಿ ಮಳೆ ಅಬ್ಬರ: ವೈಟ್‌ಫೀಲ್ಡ್, ಮಾರತ್ತಹಳ್ಳಿಯಲ್ಲಿ ರಸ್ತೆಗಳು ಜಲಾವೃತ

• ಉದಯವಾಹಿನಿ, ಬೆಂಗಳೂರು

ಸಿಲಿಕಾನ್ ಸಿಟಿಯಲ್ಲಿ ರಾತ್ರಿ ಸುರಿದ ಮಳೆಯಿಂದ ಕೆಲ ಭಾಗಗಳಲ್ಲಿ ರಸ್ತೆಗಳು ಜಲಾವೃತಗೊಂಡು ಸಾರ್ವಜನಿಕರು ಹಾಗೂ ವಾಹನ ಸವಾರರು ತೀವ್ರ ಪರದಾಟ ನಡೆಸುವಂತಾಗಿದೆ. ಒಂದು ಗಂಟೆಗಳ ಕಾಲ ಬಿಡದೆ ಸುರಿದ ವರುಣನ ಆರ್ಭಟಕ್ಕೆ ನಗರದ ಕೆಲವು ಕೆಳಸೇತುವೆಗಳು ಮತ್ತು ತಗ್ಗು ಪ್ರದೇಶಗಳಲ್ಲಿ ಭಾರಿ ಪ್ರಮಾಣದ ನೀರು ನಿಂತಿದ್ದು, ಸಂಚಾರ ವ್ಯತ್ಯಯಗೊಂಡಿದೆ.ನಗರದ ಹೃದಯಭಾಗಗಳಾದ ಮೆಜೆಸ್ಟಿಕ್, ಮಲ್ಲೇಶ್ವರಂ, ಯಶವಂತಪುರ, ಕಾರ್ಪೊರೇಷನ್, ಕೆ.ಆರ್.ಮಾರ್ಕೆಟ್ ಹಾಗೂ ಲಾಲ್ ಬಾಗ್ ಸುತ್ತಮುತ್ತಲಿನ ಪ್ರದೇಶಗಳಲ್ಲಿ ರಾತ್ರಿ ಜೋರು ಮಳೆಯಾಗಿದೆ.

ರಾತ್ರಿ ವೇಳೆ ಈ ಭಾಗಗಳಲ್ಲಿ ವಾಹನಗಳ ಓಡಾಟ ವಿರಳವಾಗಿದ್ದು, ಯಾವುದೇ ಪ್ರಮುಖ ಟ್ರಾಫಿಕ್ ಜಾಮ್ ಅಥವಾ ಹೆಚ್ಚಿನ ಅನಾಹುತಗಳು ಸಂಭವಿಸಿಲ್ಲ. ಆದರೆ, ವೈಟ್ ಫೀಲ್ಡ್, ಮಾರತ್ತಹಳ್ಳಿ, ಬೆಳ್ಳಂದೂರು, ಬಳಗೆರೆ ಹಾಗೂ ಔಟರ್ ರಿಂಗ್ ರೋಡ್ ಸುತ್ತಮುತ್ತ ಮಳೆಯ ತೀವ್ರತೆ ಹೆಚ್ಚಾಗಿದ್ದು, ರಸ್ತೆಗಳು ಜಲಾವೃತಗೊಂಡಿವೆ. ತಗ್ಗು ಪ್ರದೇಶಗಳಲ್ಲಿ ನೀರು ಸಂಗ್ರಹಗೊಂಡ ಪರಿಣಾಮ ವೈಟ್‌ಫೀಲ್ಡ್ ಭಾಗದಲ್ಲಿ ತಡರಾತ್ರಿಯೂ ಟ್ರಾಫಿಕ್ ಸಮಸ್ಯೆ ತಲೆದೂರಿದ್ದು, ಸುರಿಯುವ ಮಳೆಯಲ್ಲೇ ಸಂಚಾರ ನಿಯಂತ್ರಿಸಲು ಸಂಚಾರ ಪೊಲೀಸರು ಹರಸಾಹಸ ಪಡುವಂತಾಯಿತು.

# ಟೆಂಡರ್ ಪ್ರಕ್ರಿಯೆಯಲ್ಲಿ 444 ಕೋಟಿ ಅಕ್ರಮ: ಲೋಕಾಯುಕ್ತಕ್ಕೆ ದೂರು

• ಉದಯವಾಹಿನಿ, ಬೆಂಗಳೂರು

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಅಡಿಯಲ್ಲಿನ ಹಾಗೂ ಓನಲ್ಲಿ 444 ಕೋಟಿ ಹಗರಣದ ಆರೋಪದ ಹಿನ್ನೆಲೆಯಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪುತ್ರ ಸಚಿವ ಯತೀಂದ್ರ ಸಿದ್ದರಾಮಯ್ಯ ವಿರುದ್ಧ ಲೋಕಾಯುಕ್ತಕ್ಕೆ ದೂರು ಸಲ್ಲಿಕೆಯಾಗಿದೆ.

ಯತೀಂದ್ರ ಜೊತೆಗೆ ಅಧಿಕಾರಿ ಭೂಬಾಲನ್ ವಿರುದ್ಧವೂ ದಾಖಲೆ ಸಮೇತ ಬಿಜೆಪಿ ಮುಖಂಡ ಎನ್ ಆರ್ ರಮೇಶ್ ದೂರು ನೀಡಿದ್ದಾರೆ. 2025ರಲ್ಲಿ ಕರೆದಿದ್ದ ಟೆಂಡರ್ ಪ್ರಕ್ರಿಯೆಯಲ್ಲಿ ಭಾರಿ ಅಕ್ರಮ ನಡೆದಿದೆ. ಅರ್ಹತೆ ಇಲ್ಲದ ಕಂಪನಿಗೆ ಟೆಂಡರ್ ನೀಡಿದ್ದಾರೆ ಎಂದು ದೂರಲಾಗಿದೆ. ಸಚಿವ ಯತೀಂದ್ರ, ಅಧಿಕಾರಿಗಳ ವಿರುದ್ಧ ತನಿಖೆಗೆ ರಮೇಶ್ ಆಗ್ರಹಿಸಿದ್ದಾರೆ. ಟೆಂಡರ್ ಪ್ರಕ್ರಿಯೆ ಸಿದ್ದರಾಮಯ್ಯ ಸಿಎಂ ಆಗಿದ್ದ ಅವಧಿಯಲ್ಲಿ ನಡೆದಿದೆ ಎನ್ನಲಾಗಿದೆ. ಆಗ ಸಿದ್ದರಾಮಯ್ಯ ಅವರು ತಮ್ಮ ಬಳಿಯೇ ಇಲಾಖೆಯನ್ನು ಉಳಿಸಿಕೊಂಡಿದ್ದರು. ಹೀಗಾಗಿ ಯತೀಂದ್ರ ಸಿದ್ದರಾಮಯ್ಯ ಅಣತಿ ಮೇರೆಗೆ ಟೆಂಡರ್ ನೀಡಿದ ಆರೋಪ ಕೇಳಿಬಂದಿದೆ.

ಅರ್ಹತೆಯೇ ಇಲ್ಲದ ಹೈದರಾಬಾದ್ ಮೂಲದ ಕಂಪನಿಗೆ ಟೆಂಡರ್ ನೀಡಲಾಗಿದೆ. ಇ-ಆಡಳಿತ ವಿಭಾಗದ ಸಿಇಒ ಅಧಿಕಾರಿ ಭೂಬಾಲನ್ ಸೇರಿದಂತೆ ಮೂವರು ಅಧಿಕಾರಿಗಳ ವಿರುದ್ಧವೂ ದೂರು ನೀಡಲಾಗಿದೆ.

# ಕೃಷಿ ಹೊಂಡದಲ್ಲಿ ಸ್ಫೋಟ ಪ್ರಕರಣ ರದ್ದು: ತೀರ್ಪು ಕೇಳಿ ಕಣ್ಣೀರಿಟ್ಟ ಡ್ರೋನ್ ಪ್ರತಾಪ್!

• ಉದಯವಾಹಿನಿ, ಬೆಂಗಳೂರು

ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನ ಜನಕಲೋಟಿ ಗ್ರಾಮದ ಕೃಷಿ ಹೊಂಡದಲ್ಲಿ ಸೋಡಿಯಂ ಮೆಟಲ್ ಎಸೆದು ಸ್ಫೋಟಿಸಿದ ಪ್ರಕರಣದಲ್ಲಿ ಕನ್ನಡದ ಬಿಗ್‌ಬಾಸ್ ಮಾಜಿ ಸ್ಪರ್ಧಿ ಡ್ರೋನ್ ಪ್ರತಾಪ್ ಗೆ ಕೋರ್ಟ್ ಬಿಗ್ ರಿಲೀಫ್ ನೀಡಿದೆ. ಕೃಷಿ ಹೊಂಡದಲ್ಲಿ ಸ್ಫೋಟಕ್ಕೆ ಸಂಬಂಧಿಸಿದಂತೆ ಡ್ರೋನ್ ಪ್ರತಾಪ್ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿತ್ತು. ಈ ಪ್ರಕರಣದಲ್ಲಿ ಬಂಧನಕ್ಕೊಳಾಗಿದ್ದ ಪ್ರತಾಪ್, ಬಳಿಕ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದರು.

ತನ್ನ ವಿರುದ್ಧ ದಾಖಲಾಗಿರುವ ಪ್ರಕರಣ ರದ್ದುಕೋರಿ ಪ್ರತಾಪ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಹೈಕೋರ್ಟ್ ಏಕಸದಸ್ಯ ಪೀಠ, ಪ್ರಯೋಗದ ಉದ್ದೇಶ ಶೈಕ್ಷಣಿಕವಾಗಿದ್ದು, ಯಾವುದೇ ದುರುದ್ದೇಶ ಕಂಡುಬಂದಿಲ್ಲ ಎಂದು ಹೇಳಿ, ಎಫ್‌ಐಆರ್ ರದ್ದುಗೊಳಿಸಿ ಆದೇಶ ಹೊರಡಿಸಿದೆ.

ಪ್ರತಾಪ್ ವಿರುದ್ಧ ದಾಖಲಾಗಿದ್ದ ಎಫ್‌ಐಆರ್ ಹಾಗೂ ಸಂಬಂಧಿತ ಕ್ರಿಮಿನಲ್ ಪ್ರಕರಣ ರದ್ದುಗೊಳಿಸಲಾಗುತ್ತಿದ್ದರೂ ಭವಿಷ್ಯದಲ್ಲಿ ಇದೇ ರೀತಿಯ ಘಟನೆಗಳು ಮರುಕಳಿಸಿದರೆ, ಅವುಗಳನ್ನು ಹೆಚ್ಚು ಗಂಭೀರವಾಗಿ ಪರಿಗಣಿಸಲಾಗುವುದು ಎಂದು ಹೈಕೋರ್ಟ್ ಎಚ್ಚರಿಕೆ ನೀಡಿದೆ.

# ಮುಂಗಾರು ಮುಗಿಯುತ್ತಿದ್ದರೂ ಇನ್ನೂ ಕರುಣೆ ತೋರದ ವರುಣ

## ಸೆ. 28ರ ನೀರಿನ ಮಟ್ಟದ ಮಾಹಿತಿಯ ಪ್ರಕಾರ, ನಾಲ್ಕು ಜಲಾಶಯಗಳಲ್ಲಿ ಒಟ್ಟು 59.5 ಟಿಎಂಸಿ ಅಡಿ ನೀರಿದೆ. ಕಳೆದ ವರ್ಷ 107.4 ಟಿಎಂಸಿ ಅಡಿ ನೀರಿತ್ತು.

• ಉದಯವಾಹಿನಿ, ಬೆಂಗಳೂರು

ನೈಋತ್ಯ ಮುಂಗಾರು ಮುಗಿಯುತ್ತಾ ಬಂದಿದ್ದರೂ ವರುಣದೇವ ಇನ್ನೂ ರಾಜ್ಯದ ಮೇಲೆ ಕರುಣೆ ತೋರಿಲ್ಲ. ಕಳೆದ ವರ್ಷಕ್ಕೆ ಹೋಲಿಸಿದರೆ ಕಾವೇರಿ ಜಲಾಶಯಗಳಲ್ಲಿನ ನೀರಿನ ಮಟ್ಟ ಬಹಳ ಕಡಿಮೆಯಿದೆ. ಈ ಹಂಗಾಮಿನಲ್ಲಿ ಇನ್ನು ಹೆಚ್ಚಿನ ಮಳೆಯ ನಿರೀಕ್ಷೆಯಿಲ್ಲದಿರುವುದರಿಂದ, ಮುಂದಿನ ವರ್ಷದ ಜೂನ್‌ನಲ್ಲಿ ಮುಂಗಾರು ಮಳೆ ಬರುವವರೆಗೆ ರೈತರು ಮತ್ತು ಪಟ್ಟಣಗಳು ಈಗ ಸಂಗ್ರಹವಾಗಿರುವ ನೀರಿನ ಮೇಲೆಯೇ ಅವಲಂಬಿತರಾಗಬೇಕಿದೆ.

1 ಅತ್ಯಲ್ಪ ಹಾಗೂ ತಡವಾಗಿ ಬಂದಿದೆ

2 ಕೃಷಿ ಉತ್ಪಾದನೆಯಲ್ಲಿ ತೀವ್ರ ಕುಸಿತ

3 ಜಿಲ್ಲೆಗಳಲ್ಲಿ ಮಳೆಯ ಕೊರತೆಯಿದೆ

ಸೆಪ್ಟೆಂಬರ್ 28ರ ನೀರಿನ ಮಟ್ಟದ ಮಾಹಿತಿಯ ಪ್ರಕಾರ, ನಾಲ್ಕು ಜಲಾಶಯಗಳಲ್ಲಿ ಒಟ್ಟು 59.5 ಟಿಎಂಸಿ ಅಡಿ ನೀರಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ 107.4 ಟಿಎಂಸಿ ಅಡಿ ನೀರಿತ್ತು. ಇದರಲ್ಲಿ, ಬಳಕೆಗೆ ಲಭ್ಯವಿರುವ ನೀರು (ಲೈವ್ ಸ್ಟೋರೇಜ್) ಕೇವಲ 36.2 ಟಿಎಂಸಿ ಅಡಿಯಷ್ಟಿದೆ.



ಉದಯವಾಹಿನಿ ಚಿತ್ರ

ಆದರೆ ಕಳೆದ ವರ್ಷ ಇದು 84.1 ಟಿಎಂಸಿ ಅಡಿಯಷ್ಟಿತ್ತು. ಪ್ರತಿಯೊಂದು ಜಲಾಶಯದಲ್ಲೂ ನೀರಿನ ಮಟ್ಟದಲ್ಲಿನ ಕುಸಿತ ಎದ್ದು ಕಾಣುತ್ತಿದೆ. ಹೇಮಾವತಿ ಜಲಾಶಯದಲ್ಲಿ ನೀರಿನ ಮಟ್ಟವು ಕಳೆದ ವರ್ಷದ ಶೇ.91ಕ್ಕೆ ಹೋಲಿಸಿದರೆ ಈಗ ಶೇ. 41ರಷ್ಟಿದೆ. ಕೆಆರ್‌ಎಸ್‌ನಲ್ಲಿ ಶೇ.96ರ ಬದಲಿಗೆ ಶೇ.55 ಮತ್ತು ಕಬಿನಿಯಲ್ಲಿ ಶೇ.93ರ ಬದಲಿಗೆ ಶೇ.58ರಷ್ಟಿದೆ. ಹಾರಂಗಿ ಜಲಾಶಯವು ತುಸು ಉತ್ತಮ ಸ್ಥಿತಿಯಲ್ಲಿದ್ದು, ಶೇ.94 ಬದಲಿಗೆ ಶೇ.73 ರಷ್ಟು ನೀರನ್ನು ಹೊಂದಿದೆ.ಇವು ಒಟ್ಟು ನೀರಿನ ಸಂಗ್ರಹದ ಅಂಕಿಅಂಶಗಳಾದರೂ, ಮುಖ್ಯವಾಗಿ ಪರಿಗಣಿಸಬೇಕಾದದ್ದು ಬಳಕೆಗೆ ಲಭ್ಯವಿರುವ ನೀರು (ಲೈವ್ ಸ್ಟೋರೇಜ್). ಇದು 36 ಟಿಎಂಸಿ ಅಡಿ (ಸುಮಾರು ಶೇ.40 ರಷ್ಟಿದೆ. ಕಳೆದ ವರ್ಷದ 84 ಟಿಎಂಸಿ ಅಡಿಗೆ ಹೋಲಿಸಿದರೆ ಅರ್ಧಕ್ಕಿಂತಲೂ ಕಡಿಮೆಯಿದೆ. ಕಬಿನಿ ಜಲಾಶಯದಲ್ಲಿ ಒಟ್ಟು ನೀರಿನ ಮಟ್ಟ ಶೇ. 58ರಷ್ಟಿದ್ದರೂ, ಬಳಕೆಗೆ ಲಭ್ಯವಿರುವ ನೀರು ಕೇವಲ 1.5 ಟಿಎಂಸಿ ಅಡಿ (ಅಂದರೆ ಅದರ ಲೈವ್ ಸಾಮರ್ಥ್ಯದ ಸುಮಾರು ಶೇ.15 ರಷ್ಟು ಮಾತ್ರ ಇದೆ. ಕಾವೇರಿ ಜಲಾನಯನ ಪ್ರದೇಶದಲ್ಲಿ ಮಳೆಯ ಕೊರತೆಯಿದೆ ಮತ್ತು ಬಿದ್ದ ಮಳೆಯೂ ಅತ್ಯಲ್ಪ ಹಾಗೂ ತಡವಾಗಿ ಬಂದಿದೆ ಎಂದು ವಿಪತ್ತು ನಿರ್ವಹಣೆ ಮತ್ತು ಬರ ಪರಿಹಾರ ಇಲಾಖೆಯ ಕಾರ್ಯದರ್ಶಿ ಮನೋಜ್ ಮೀನಾ ತಿಳಿಸಿದ್ದಾರೆ. ಇದರಿಂದಾಗಿ ಕೃಷಿ ಉತ್ಪಾದನೆಯಲ್ಲಿ ತೀವ್ರ ಕುಸಿತವಾಗುವ ನಿರೀಕ್ಷೆಯಿದೆ. ಹೇಮಾವತಿ ಜಲಾಶಯದಲ್ಲಿ ನೀರಿನ ಮಟ್ಟವು ಸುಮಾರು ಶೇ. 40 ರಷ್ಟಿರುವುದರಿಂದ, ಹಾಸನ-ತುಮಕೂರು ಕಾಲುವೆ ವ್ಯವಸ್ಥೆಯ ಮೂಲಕ ಪೂರೈಸಬಹುದಾದ ನೀರಿನ ಪ್ರಮಾಣಕ್ಕೆ ಮಿತಿ ಉಂಟಾಗಿದೆ. ಕೆಲವೇ ದಿನಗಳಲ್ಲಿ ಆರಂಭವಾಗಲಿರುವ ಈಶಾನ್ಯ ಮಾನ್ಸೂನ್ ಸಾಮಾನ್ಯವಾಗಿ ಅಕ್ಟೋಬರ್‌ನಿಂದ ಮಳೆಯನ್ನು ತರುತ್ತದೆ. ಆದರೆ ಈ ಮಳೆಯು ಹೆಚ್ಚಾಗಿ ತಮಿಳುನಾಡಿನ ಮೇಲೆ ಸುರಿಯುವುದರಿಂದ, ನದಿಗೆ ನೀರುಣಿಸುವ ಕರ್ನಾಟಕದ ಜಲಾನಯನ ಪ್ರದೇಶಗಳಿಗೆ ಇದರಿಂದ ಹೆಚ್ಚಿನ ಪ್ರಯೋಜನವಾಗುವುದಿಲ್ಲ.

ಕಾವೇರಿ ಜಲಾನಯನ ಪ್ರದೇಶದ ಬಹುತೇಕ ಎಲ್ಲಾ ಜಿಲ್ಲೆಗಳಲ್ಲಿ ಮಳೆಯ ಕೊರತೆಯಿದೆ.ರಾಜ್ಯದ 240 ತಾಲ್ಲೂಕುಗಳ ಪೈಕಿ 220 ತಾಲ್ಲೂಕುಗಳಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗಿದೆ. ಕಳೆದ 50 ವರ್ಷಗಳಲ್ಲಿನ ಮಳೆಯ ಕೊರತೆಯ ಪೈಕಿ ಇದು ಎರಡನೇ ಅತ್ಯಂತ ಕೆಟ್ಟ ಪರಿಸ್ಥಿತಿ ಎಂದು ಅವರು ಬಣ್ಣಿಸಿದ್ದಾರೆ.- ಮನೋಜ್ ಮೀನಾ

ಎಲ್ಲಿಯೂ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ನಾವು ನೋಡಿಕೊಳ್ಳುತ್ತೇವೆ. ಇನ್ನು ರೈತರ ಅಗತ್ಯಗಳ ವಿಷಯಕ್ಕೆ ಬಂದರೆ, ಅವರ ಸಮಸ್ಯೆಗಳನ್ನು ಬಗೆಹರಿಸಲು ನಾವು ಮಾರ್ಗಗಳನ್ನು ಕಂಡುಕೊಳ್ಳುತ್ತಿದ್ದೇವೆ ಎಂದು ಹೇಳಿದರು.

ಸಚಿವ ಚಲುವರಾಯಸ್ವಾಮಿ

# ಕೆರೆಯ ಮಣ್ಣು ಅಕ್ರಮ ಸಾಗಣೆ:ಸ್ಥಳೀಯರಿಂದ ಆಕ್ರೋಶ

• ಉದಯವಾಹಿನಿ, ಮುಳಬಾಗಿಲು

ತಾಲ್ಲೂಕಿನ ಎನ್.ಚಮಕಲಹಳ್ಳಿ ಗ್ರಾಮದ ಊರುಕೆರೆಯಲ್ಲಿ ಕೆಲವು ಪ್ರಭಾವಿಗಳು ಅನುಮತಿ ಪಡೆಯದೆ ರಾಜಾರೋಷವಾಗಿ ಜೆಸಿಬಿ ಹಾಗೂ ಟ್ರ್ಯಾಕ್ಟರ್‌ಗಳಲ್ಲಿ ವಾಣಿಜ್ಯ ಬಳಕೆಗಾಗಿ ಕೆರೆ ಮಣ್ಣನ್ನು ತೆಗೆದು ಸಾಗಿಸುತ್ತಿದ್ದಾರೆಂದು ಸ್ಥಳೀಯರು ಆರೋಪಿಸಿದ್ದಾರೆ. ತಾಲ್ಲೂಕಿನ ರಾಷ್ಟ್ರೀಯ ಹೆದ್ದಾರಿ 75ಕ್ಕೆ ಹೊಂದಿಕೊಂಡಂತಿರುವ ಜೆಎಸ್‌ಆರ್ ಟೋಲ್ ಸಮೀಪದ ಜಿಲ್ಲಾ ಪಂಚಾಯಿತಿಗೆ ಸೇರಿದ ಕೆರೆಯಿಂದ ಸುತ್ತಮುತ್ತಲಿನ ಇಟ್ಟಿಗೆ ಕಾರ್ಖಾನೆಗಳಿಗೆ ಸ್ಥಳೀಯ ಮುಖಂಡರು ಮಣ್ಣನ್ನು ಸಾಗಿಸುತ್ತಿದ್ದಾರೆ.

ಕೆರೆಯಲ್ಲಿ 20 ರಿಂದ 30 ಅಡಿ ಆಳದಿಂದ ಮಣ್ಣನ್ನು ತೆಗೆಯುತ್ತಿದ್ದು, ಕೆರೆಯ ಸ್ವರೂಪವನ್ನೇ ಬದಲಿಸಿದ್ದಾರೆಂದು ಗ್ರಾಮಸ್ಥರು ದೂರಿದ್ದಾರೆ.

ಸಾಮಾನ್ಯವಾಗಿ ಕೆರೆ ಮಣ್ಣನ್ನು ಸಾಗಿಸಲು ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ತಹಶೀಲ್ದಾರ್ ಹಾಗೂ ಗ್ರಾಮ ಪಂಚಾಯಿತಿಯಿಂದ


ಉದಯವಾಹಿನಿ ಚಿತ್ರ

ಅನುಮತಿ ಪಡೆಯುವುದು ಕಡ್ಡಾಯ.

ಆದರೆ, ಇಲ್ಲಿ ಪ್ರಭಾವಿಗಳು ಯಾರ ಅನುಮತಿಯನ್ನು ಪಡೆಯದೆ ಮಣ್ಣು ಸಾಗಿಸುತ್ತಾ ಕೆರೆಯನ್ನೇ ದೊಡ್ಡ ಗುಂಡಿಗಳನ್ನಾಗಿ ಮಾಡಿದ್ದಾರೆ. ಅಪ್ಪಿತಪ್ಪಿ ಜನ ಅಥವಾ ಜಾನುವಾರು ಗುಂಡಿಗೆ ಬಿದ್ದರೆ ಸಾವು ಖಚಿತ ಎಂಬುದು ಗ್ರಾಮಸ್ಥರ ಆತಂಕವಾಗಿದೆ.

# ವಿರೋಧ ಪಕ್ಷಗಳಿಂದ ಅಪಪ್ರಚಾರ: ಶಾಸಕ ಡಾ. ಮಂತರ್ ಗೌಡ

• ಉದಯವಾಹಿನಿ, ಸೋಮವಾರಪೇಟೆ

ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳು ಮತ್ತು ಅಭಿವೃದ್ಧಿಗೆ ಸಾಕಷ್ಟು ಹಣ ನೀಡುತ್ತಿದ್ದು, ವಿರೋಧ ಪಕ್ಷಗಳು ಅಭಿವೃದ್ಧಿ ಸಹಿಸಲು ಸಾಧ್ಯವಾಗದೆ. ಸರ್ಕಾರದಲ್ಲಿ ಹಣವಿಲ್ಲದೆ ದಿವಾಳಿಯಾಗಿದೆ ಎಂದು ಅಪಪ್ರಚಾರದಲ್ಲಿ ತೊಡಗಿರುವುದು ವಿಪರ್ಯಾಸ ಎಂದು ಶಾಸಕ ಡಾ. ಮಂತರ್ ಗೌಡ ಅಭಿಪ್ರಾಯಪಟ್ಟರು.

ಇಲ್ಲಿನ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ 1.50 ಕೋಟಿ ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿ ಹಾಗೂ 40 ಲಕ್ಷ ವೆಚ್ಚದಲ್ಲಿ ಸಿ.ಕೆ. ಸುಬ್ಬಯ್ಯ ರಸ್ತೆಯ ಮರು ಡಾಂಬರೀಕರಣ ಮತ್ತು ಇಂಟರ್ ಲಾಕ್ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿದ ಬಳಿಕ ಅವರು ಮಾತನಾಡಿ, ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳಾಗುತ್ತಿದ್ದು, ಅಭಿವೃದ್ಧಿಯಲ್ಲಿ ಯಾವುದೇ ರಾಜಕೀಯ ಬೇಡ.

ಎಲ್ಲರೂ ಸಹಕರಿಸಬೇಕು ಎಂದರು.ಸೋಮವಾರಪೇಟೆಯಲ್ಲಿ ಮುಂದಿನ ದಿನಗಳಲ್ಲಿ ಇನ್ನೂ ಸಾಕಷ್ಟು ಅಭಿವೃದ್ಧಿ ಕೆಲಸ ಮಾಡಲಾಗುತ್ತಿದೆ.

ಯಡೂರು ಗ್ರಾಮದ ಬಿಟಿಸಿಜಿ ಸರ್ಕಾರಿ ಪದವಿ ಕಾಲೇಜಿನ ಆವರಣದಲ್ಲಿ ಒಳಾಂಗಣ ಕ್ರೀಡಾಂಗಣಕ್ಕೆ ಸಂಬಂಧಪಟ್ಟ ಸಚಿವರು ಶೀಘ್ರ ಭೂಮಿ ಪೂಜೆ ನಡೆಸುವರು.

ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ 8 ಕೋಟಿ ವೆಚ್ಚದ ಮಾರುಕಟ್ಟೆ ಮತ್ತು ವಾಹನ ನಿಲ್ದಾಣಕ್ಕೆ ಕ್ರಿಯಾ ಯೋಜನೆ ತಯಾರಿಸಿದ್ದು, ಹಲವು ವರ್ಷಗಳಿಂದ ನನೆಗುದಿಗೆ ಬಿದ್ದಿರುವ ಶತಮಾನೋತ್ಸವ ಕಟ್ಟಡ ಕಾಮಗಾರಿಯನ್ನು 2 ಕೋಟಿ ವೆಚ್ಚದಲ್ಲಿ ಮುಂದಿನ ವಾರದಲ್ಲಿ ಪ್ರಾರಂಭಿಸಲಾಗುವುದು.

# ಕನಕಪುರ ರೈತ ಸ್ವಾಭಿಮಾನಿ ಯಾತ್ರೆಯಲ್ಲಿ ಅಜ್ಜಿಗೆ ಧೈರ್ಯ ತುಂಬಿದ ನಿಖಿಲ್

## ರೈತರ ಹೆಸರೇಳಿಕೊಂಡು ಕಾಂಗ್ರೆಸ್ ಅಧಿಕಾರಕ್ಕೆ ಬಂದ ಬಳಿಕ ರಾಜ್ಯದಲ್ಲಿ ಮೂರೂವರೆ ಸಾವಿರಕ್ಕೂ ಹೆಚ್ಚು ರೈತರು ಆತ್ಮಹತ್ಯೆ, ಅನ್ನ ಹಾಕುವ ರೈತನ ಬದುಕು ಬೀದಿಗೆ ಬಂದಿದೆ

• ಉದಯವಾಹಿನಿ, ಕನಕಪುರ

1 3 ಕಿ.ಮೀ. ಪಾದಯಾತ್ರೆಗೆ ಚಾಲನೆ ನೀಡಿದರು
2 ಸರ್ಕಾರದ ವಿರುದ್ಧ ಟೀಕಾಪ್ರಹಾರ ನಡೆಸಿದರು
3 ರಿಯಲ್ ಎಸ್ಟೇಟ್ ಉದ್ಯಮದಲ್ಲಿ ಬ್ಯುಸಿ

ರಾಜ್ಯ ಸರ್ಕಾರದ ರೈತ ವಿರೋಧಿ ಧೋರಣೆ ಖಂಡಿಸಿ ಹಾಗೂ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ, ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ನೇತೃತ್ವದಲ್ಲಿ ಹಮ್ಮಿಕೊಂಡಿರುವ ರೈತ ಸ್ವಾಭಿಮಾನಿ ಯಾತ್ರೆಗೆ ಪಟ್ಟಣದಲ್ಲಿ ಅದ್ದೂರಿ ಚಾಲನೆ ಸಿಕ್ಕಿತು.

ರಾಜ್ಯದಲ್ಲಿ ಮಳೆ ಕೊರತೆಯಿಂದಅಂತರ್ಜಲ ಕುಸಿದು, ಕೆರೆ-ಕಟ್ಟೆಗಳು ಬರಿದಾಗಿ, ಬರ ಪರಿಸ್ಥಿತಿ ತಾಂಡವವಾಡುತ್ತಿದ್ದರೂ ರೈತರ ನೆರವಿಗೆ ಬರಲು ಸರ್ಕಾರ ಮೀನಮೇಷ ಎಣಿಸುತ್ತಿದೆ. ಹೀಗಾಗಿ, ತೀವ್ರ ಬರದಿಂದ ಸಂಕಷ್ಟಕ್ಕೆ ಈಡಾಗಿರುವ ರೈತರ ಸಮಸ್ಯೆ ಆಲಿಸುವ ಉದ್ದೇಶದಿಂದ 'ರೈತ ಸ್ವಾಭಿಮಾನಿ ಯಾತ್ರೆ' ಹಮ್ಮಿಕೊಳ್ಳಲಾಗಿದೆ ನಿಖಿಲ್ ಕುಮಾರಸ್ವಾಮಿ ಹೇಳಿದ್ದಾರೆ.

ಪಟ್ಟಣದ ರೈಸ್ ಮಿಲ್ ಬಳಿಯ ಶಿವ-ಪಾರ್ವತಿ ದೇವಸ್ಥಾನದಲ್ಲಿ ಪೂಜೆ ನೆರವೇರಿಸಿದ ನಿಖಿಲ್, 3 ಕಿ.ಮೀ. ಪಾದಯಾತ್ರೆಗೆ ಚಾಲನೆ ನೀಡಿದರು. ಬಳಿಕ, ಸಾವಿರಾರು ಕಾರ್ಯಕರ್ತರ ಜೊತೆ ನಗರದ ಚನ್ನಬಸಪ್ಪ ವೃತ್ತದವರೆಗೆ ಪಾದಯಾತ್ರೆಯಲ್ಲಿ ಆಗಮಿಸಿದರು. ನಂತರ, ಚನ್ನಬಸಪ್ಪ ವೃತ್ತದಲ್ಲಿ ಬೃಹತ್ ಬಹಿರಂಗ ಸಭೆ ಉದ್ದೇಶಿಸಿ ಮಾತನಾಡಿ, ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಟೀಕಾಪ್ರಹಾರ ನಡೆಸಿದರು.

ರೈತರ ಹೆಸರೇಳಿಕೊಂಡು ಕಾಂಗ್ರೆಸ್ ಅಧಿಕಾರಕ್ಕೆ ಬಂದ ಬಳಿಕ ರಾಜ್ಯದಲ್ಲಿ ಮೂರೂವರೆ ಸಾವಿರಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದು, ಅನ್ನ ಹಾಕುವ


ಉದಯವಾಹಿನಿ ಚಿತ್ರ

ರೈತನ ಬದುಕು ಬೀದಿಗೆ ಬಂದಿದೆ.

ಬರ ಪರಿಹಾರಕ್ಕಾಗಿ ಕೇಂದ್ರ ಸರ್ಕಾರದ ಕಡೆ ಕೈ ತೋರಿಸಿ ಸುಮ್ಮನೆ ಕುಳಿತುಕೊಂಡಿರುವುದು ನಾಚಿಕೆಗೇಡಿನ ವಿಷಯ. ಈ ಹಿಂದೆ ಎಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದ ವೇಳೆ ಬರಗಾಲದ ಸಮಯದಲ್ಲಿ ಕೇಂದ್ರದತ್ತ ನೋಡದೇ ರೈತರ ಸಾಲಮನ್ನಾ ಮಾಡಿದ್ದರು. ಈಗ ಸಿಎಂ ಕ್ಷೇತ್ರದಲ್ಲೇ ಬರ ಪರಿಸ್ಥಿತಿ ಇದೆ. ಆದರೆ, ಈವರೆಗೂ ಅವರು ತಾಲ್ಲೂಕಿಗೆ ಬಂದು ರೈತರ ಸಮಸ್ಯೆ ಆಲಿಸಿಲ್ಲ. ಕೇವಲ ಎಕರೆಗೆ 2,500 ರು. ಬರ ಪರಿಹಾರ ಘೋಷಣೆ ಮಾಡಿ, ಮೂಗಿಗೆ ತುಪ್ಪ ಸವರುವ ಕೆಲಸ ಮಾಡಿದ್ದಾರೆ. ಹೀಗಾಗಿ, ಸಿಎಂ ತವರು ಕ್ಷೇತ್ರದಿಂದಲೇ ರೈತ ಸ್ವಾಭಿಮಾನ ಯಾತ್ರೆ ಆರಂಭಿಸಿದ್ದೇವೆ ಎಂದರು.

ಈಗ ಜಿಲ್ಲೆಯವರು ಸಿಎಂ ಆಗಿದ್ದಾರೆ. ದೇವೇಗೌಡರು, ಕುಮಾರಸ್ವಾಮಿ, ನಾನು, ನೀವು ಸೇರಿದಂತೆ ಯಾರೂ ಕೂಡ ಅವರು ಸಿಎಂ ಆಗಿರುವುದಕ್ಕೆ ಹೊಟ್ಟೆಕಿಚ್ಚು ಪಡುವುದಿಲ್ಲ. ಇಲ್ಲಿ ಅವರಿಗೆ ಮತ ಹಾಕಿರುವ ಜನ ಇದ್ದಾರೆ. ಅವರ ಪರವಾಗಿ ಕೆಲಸ ಮಾಡಿ. ಆಗ ನಾವೇ ನಿಮಗೆ ಶಾಲು, ಹಾರ ಹಾಕಿ, ಸನ್ಮಾನ ಮಾಡುತ್ತೇವೆ. ಆದರೆ, ಕಳೆದ ಹಲವು ದಿನಗಳಿಂದ ಬೈರಮಂಗಲದಲ್ಲಿ ಮಹಿಳೆಯರಿಗೆ ಕಣ್ಣೀರು ಹಾಕಿಸಿದ್ದೀರಿ. ಪರಿಸ್ಥಿತಿ ಹೀಗೆಯೇ ಮುಂದುವರಿದರೆ ಬಹಳ ದಿನ ನೀವು ರಾಜಕಾರಣ ಮಾಡಲು ಸಾಧ್ಯವಿಲ್ಲ ಎಂದು ಸಿಎಂ ವಿರುದ್ಧ ಪರೋಕ್ಷವಾಗ್ದಾಳಿ ನಡೆಸಿದರು.

ನಿಖಿಲ್ ಕುಮಾರಸ್ವಾಮಿಯವರ ಎದುರೇ ಕಣ್ಣೀರು ಹಾಕಿ, 'ಮಗಾ, 3 ತಿಂಗಳಿಂದ ಪಿಂಚಣಿ ಬಂದಿಲ್ಲ. ಬದುಕೋದು ಕಷ್ಟ ಆಗಿದೆ' ಎಂದು ದುಃಖ ತೋಡಿಕೊಂಡರು.

> ಸಕಾರಾತ್ಮಕವಾಗಿ ಸ್ಪಂದಿಸಿದ ನಿಖಿಲ್ ಕುಮಾರಸ್ವಾಮಿ, ವೃದ್ಧೆಗೆ ಧೈರ್ಯ ತುಂಬಿ, 'ಅಜ್ಜಿ ಚಿಂತೆ ಮಾಡಬೇಡಿ, ನಾನು ಇದ್ದೇನೆ, ಅಧಿಕಾರಿಗಳ ಜೊತೆ ಮಾತನಾಡಿ ನಿಮ್ಮ ಪಿಂಚಣಿ ಕೊಡಿಸುತ್ತೇನೆ' ಎಂದು ಭರವಸೆ ನೀಡಿದರು.
> -ನಿಖಿಲ್ ಕುಮಾರಸ್ವಾಮಿ

### ರೈತರ ಸಮಸ್ಯೆ ಆಲಿಸಿಲ್ಲ.

ಸರ್ಕಾರದಲ್ಲಿ ಕುಳಿತಿರುವ ಜನಪ್ರತಿನಿಧಿಗಳು ಜಿಲ್ಲೆಯ ಹೆಸರನ್ನು ಮಾತ್ರ ಬದಲಿಸಿದ್ದಾರೆಯೇ ಹೊರತು, ರೈತರ ಸಮಸ್ಯೆ ಆಲಿಸಿಲ್ಲ. ಅವರೀಗ



ರಿಯಲ್ ಎಸ್ಟೇಟ್ ಉದ್ಯಮದಲ್ಲಿ ಬ್ಯುಸಿ ಇದ್ದು, ರೈತರ ಬಗ್ಗೆ ಅವರಿಗೆ ಕಾಳಜಿಯೇ ಇಲ್ಲ ಎಂದು ಕಿಡಿಕಾರಿದರು.
-ನಿಖಿಲ್ ಕುಮಾರಸ್ವಾಮಿ

# ಹಾಲು ಬೆಲೆ ಹೆಚ್ಚಳದ ನಿರೀಕ್ಷೆ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಮಾಲೂರು

ಹಾಲು ಉತ್ಪಾದಕರು ಹಾಲು ಉತ್ಪಾದಕ ಸಹಕಾರ ಸಂಘಗಳಿಗೆ ಗುಣಮಟ್ಟದ ಹಾಲನ್ನು ನೀಡುವುದರಿಂದ ಸಂಘಗಳು ಹಾಗೂ ಒಕ್ಕೂಟವು ಲಾಭದಾಯಕವಾಗುತ್ತದೆ. ಹಾಲು ಉತ್ಪಾದಕರು ಹಾಲನ್ನು ಉತ್ಪಾದಿಸಲು ವೆಚ್ಚ ಹೆಚ್ಚಾಗುತ್ತಿರುವುದರಿಂದ ಹಾಲು ಒಕ್ಕೂಟಗಳು ಹಾಗೂ ಕೆಎಂಎಫ್ ಮುಖ್ಯಮಂತ್ರಿಗಳಿಗೆ ಮನವಿ ಮಾಡಿದ್ದ ಹಿನ್ನೆಲೆ, ಶೀಘ್ರದಲ್ಲಿಯೇ ರೈತರು ಉತ್ಪಾದಿಸುವ ಹಾಲಿನ ಬೆಲೆಯನ್ನು -10 ಹೆಚ್ಚಳ ಮಾಡುವ ನಿರೀಕ್ಷೆ ಇದೆ ಎಂದು ಶಾಸಕ ಹಾಗೂ ಕೋಮುಲ್ ಒಕ್ಕೂಟದ ಅಧ್ಯಕ್ಷ ಕೆ.ವೈ. ನಂಜೇಗೌಡ ಹೇಳಿದರು. ತಾಲ್ಲೂಕಿನ ಸಂತೆಹಳ್ಳಿ ಹಾಲು ಉತ್ಪಾದಕ ಸಹಕಾರ ಸಂಘದ ಆವರಣದಲ್ಲಿ 2025-26ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಜಿಲ್ಲೆಯಾದ್ಯಂತ ಹೈನುಗಾರಿಕೆ ಉದ್ಯಮಿಯನ್ನು ಅವಲಂಬಿಸಿರುವ ಹಾಲು ಉತ್ಪಾದಕರಿಗೆ ಒಕ್ಕೂಟವು ಹಲವಾರು ಸವಲತ್ತುಗಳನ್ನು ಒದಗಿಸಿದೆ.

ಇತ್ತೀಚಿನ ದಿನಗಳಲ್ಲಿ ಹಾಲು ಉತ್ಪಾದನೆಗೆ ವೆಚ್ಚ ಹೆಚ್ಚಾಗುತ್ತಿರುವುದರಿಂದ ರೈತರ ಹಾಲಿಗೆ ಅತ್ತರುಗಳನ್ನು ನೀಡುವಂತೆ ಒಕ್ಕೂಟಗಳು ಹಾಗೂ ಕೆಎಂಎಫ್ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಮಾಡಲಾಗಿದೆ. ಅಕ್ಟೋಬರ್ ಮೊದಲ ವಾರದಲ್ಲಿಯೇ ಮುಖ್ಯಮಂತ್ರಿಗಳು ಹಾಲಿನ ದರವನ್ನು ಏರಿಸಲು ನಿರ್ಧರಿಸಿದ್ದಾರೆ, ಇದು ಹಾಲು ಉತ್ಪಾದಕರಿಗೆ ಅನುಕೂಲ ಆಗಲಿದೆ.

# ತಾಲ್ಲೂಕು ಕಚೇರಿಯಿಂದ ಗ್ರಾ.ಪಂ.ವರೆಗೆ ಭ್ರಷ್ಟಾಚಾರದ ಆರೋಪ

• ಉದಯವಾಹಿನಿ, ಕೆಜಿಎಫ್

ಕೆಜಿಎಫ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ತಾಲ್ಲೂಕು ಕಚೇರಿಯಿಂದ ಹಿಡಿದು ಗ್ರಾಮ ಪಂಚಾಯಿತಿವರೆಗೂ ವಿವಿಧ ಸರ್ಕಾರಿ ಕಚೇರಿಗಳಲ್ಲಿ ಅವ್ಯವಹಾರ ಹಾಗೂ ಭ್ರಷ್ಟಾಚಾರ ನಡೆಯುತ್ತಿದೆ ಎಂದು ದಲಿತ ಸಂಘರ್ಷ ಸಮಿತಿ ಮುಖಂಡರು ಆರೋಪಿಸಿದ್ದು, ಈ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ನಗರಸಭೆ ಮುಂಭಾಗದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ದಲಿತ ಸಂಘರ್ಷ ಸಮಿತಿ ತಾಲ್ಲೂಕು ಅಧ್ಯಕ್ಷ ರಾಮಪ್ಪ, ತಾಲ್ಲೂಕು ಕಚೇರಿ, ಗ್ರಾಮ ಪಂಚಾಯಿತಿ, ನಗರಸಭೆ ಸೇರಿದಂತೆ ವಿವಿಧ ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕರ ಕೆಲಸಗಳು ಹಣ ನೀಡಿದರೆ ಮಾತ್ರ ನಡೆಯುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಆರೋಪಿಸಿದರು. ಹಣ ನೀಡಿದರೆ ಒಬ್ಬರ ಜಮೀನನ್ನು ಮತ್ತೊಬ್ಬರ ಹೆಸರಿಗೆ ಖಾತೆ ಮಾಡಿಕೊಡುವಂತಹ ಘಟನೆಗಳು ನಡೆಯುತ್ತಿವೆ ಎಂಬ ಆರೋಪಗಳಿದ್ದು, ಬಡವರು ಹಾಗೂ ಸಾಮಾನ್ಯ ಜನರು ತಮ್ಮ ಕೆಲಸಗಳಿಗಾಗಿ ಕಚೇರಿಗಳಿಗೆ ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಹೇಳಿದರು. ತಾಲ್ಲೂಕಿನಲ್ಲಿ ಇಂದಿಗೂ ಹಲವಾರು ಭೂರಹಿತ ದಲಿತ ಕುಟುಂಬಗಳು ಸ್ವಂತ ಜಮೀನು ಇಲ್ಲದೆ ಜೀವನ ನಡೆಸುತ್ತಿವೆ.

ಸರ್ಕಾರದ ವ್ಯಾಪ್ತಿಯಲ್ಲಿರುವ ಜಮೀನುಗಳನ್ನು ಸಮರ್ಪಕವಾಗಿ ಗುರುತಿಸಿ, ಅರ್ಹ ಭೂರಹಿತ ದಲಿತ ಕುಟುಂಬಗಳಿಗೆ ನಿಯಮಾನುಸಾರ ಭೂಮಿ ಹಂಚಿಕೆ ಮಾಡಬೇಕು ಎಂದು ಅವರು ಒತ್ತಾಯಿಸಿದರು. ಸರ್ಕಾರಿ ಜಮೀನುಗಳ ಲಭ್ಯತೆ, ಹಂಚಿಕೆ ಹಾಗೂ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಬೇಕು.

# ಜ್ಞಾನೇಶ್ ಕುಮಾರ್ ವಜಾಕ್ಕೆ ಕಾಂಗ್ರೆಸ್ ಆಗ್ರಹ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಚಿಕ್ಕಬಳ್ಳಾಪುರ

ಕೇಂದ್ರ ಬಿಜೆಪಿ ಸರ್ಕಾರವು ಕೇಂದ್ರ ಚುನಾವಣಾ ಆಯೋಗದ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರನ್ನು ಬಳಸಿಕೊಂಡು ಮತಗಳ್ಳತನಕ್ಕೆ ಮುಂದಾಗಿದೆ ಎಂದು ಆರೋಪಿಸಿ, ಅವರನ್ನು ಕೂಡಲೇ ವಜಾಗೊಳಿಸಿ ಬಂಧಿಸುವುದಲ್ಲದೆ ಗಡಿಪಾರು ಮಾಡಬೇಕು ಎಂದು ಒತ್ತಾಯಿಸಿ, ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಸೋಮವಾರ ನಗರದಲ್ಲಿ ಬೃಹತ್ ಪ್ರತಿಭಟನೆಯು ನಡೆಯಿತು. ಜಿಲ್ಲಾಧ್ಯಕ್ಷ ಕೇಶವ ರೆಡ್ಡಿ ಅವರ ನೇತೃತ್ವದಲ್ಲಿ ನೂರಾರು ಕಾಂಗ್ರೆಸ್ ಕಾರ್ಯಕರ್ತರು ಜಿಲ್ಲಾ ಕಾಂಗ್ರೆಸ್ ಕಚೇರಿಯಿಂದ ಮೆರವಣಿಗೆ ನಡೆಸಿ ಅಂಬೇಡ್ಕರ್ ವೃತ್ತದಲ್ಲಿ ಜಮಾಯಿಸಿದರು. ಈ ವೇಳೆ ಕೇಂದ್ರ ಬಿಜೆಪಿ ಸರ್ಕಾರ ಹಾಗೂ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ನಂತರ ಮಾತನಾಡಿದ ಜಿಲ್ಲಾಧ್ಯಕ್ಷ ಕೇಶವ ರೆಡ್ಡಿ, ಕೇಂದ್ರ ಬಿಜೆಪಿ ಸರ್ಕಾರ ದೇಶದ ಜನರ ವಿಶ್ವಾಸ ಕಳೆದುಕೊಂಡಿದೆ. ಚುನಾವಣೆಯಲ್ಲಿ ಗೆಲ್ಲುವ ಉದ್ದೇಶದಿಂದ ಚುನಾವಣಾ ಆಯೋಗವನ್ನು ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂದು ಆರೋಪಿಸಿದರು. ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆ ಸೇರಿದಂತೆ ಚುನಾವಣಾ ಆಯೋಗದ ಕಾರ್ಯವೈಖರಿ ಕುರಿತು ಹಲವು ಆಕ್ಷೇಪಗಳು ವ್ಯಕ್ತವಾಗಿವೆ. ಈ ಹಿನ್ನೆಲೆಯಲ್ಲಿ ಆಯುಕ್ತ ಜ್ಞಾನೇಶ್ ಕುಮಾರ್ ಅವರನ್ನು ವಜಾಗೊಳಿಸಿ, ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಕಾಂಗ್ರೆಸ್ ಒತ್ತಾಯಿಸುತ್ತಿದೆ.

ಬಿಜೆಪಿ ಸರ್ಕಾರದ ಆಡಳಿತದಿಂದ ಜನರು ಬೇಸತ್ತಿದ್ದಾರೆ ಎಂದು ಆರೋಪಿಸಿದ ಅವರು, ರಾಹುಲ್ ಗಾಂಧಿ ಅವರ ನೇತೃತ್ವದಲ್ಲಿ ಕಾಂಗ್ರೆಸ್‌ಗೆ ಜನಬೆಂಬಲ ಹೆಚ್ಚುತ್ತಿದೆ. ಇದರಿಂದ ಆತಂಕಗೊಂಡಿರುವ ಬಿಜೆಪಿ ಅಧಿಕಾರದಲ್ಲಿ ಮುಂದುವರಿಯಲು ಪ್ರಕ್ರಿಯೆಯ ಮೂಲಕ ಮತದಾರರ ಪಟ್ಟಿಯಿಂದ ಲಕ್ಷಾಂತರ ಮತದಾರರ ಹೆಸರುಗಳನ್ನು ತೆಗೆದುಹಾಕುವ ಹುನ್ನಾರ ನಡೆಸಿದೆ ಎಂದು ಆರೋಪಿಸಿದರು.

# ಬಂಡೀಪುರದಲ್ಲಿ ಲಾರಿ ಚಾಲಕನಿಂದ ಇದೆಂಥಾ ಕ್ರೌರ್ಯ?

• ಉದಯವಾಹಿನಿ, ಗುಂಡ್ಲುಪೇಟೆ

ಕಾಡಿನ ಮಾರ್ಗಮಧ್ಯೆ ರಸ್ತೆಗಿಳಿದಿದ್ದ ಆನೆಯನ್ನ ಗಮನಿಸಿಯೂ ಲಾರಿ ಚಾಲಕ ಲಾರಿಯನ್ನ ಅದರತ್ತಲೇ ಮುನ್ನುಗ್ಗಿಸಿದ ಘಟನೆ ಬಂಡೀಪುರ ವ್ಯಾಪ್ತಿಯಲ್ಲಿ ನಡೆದಿದೆ ಎನ್ನಲಾದ ವಿಡಿಯೋ ಇದೀಗ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದ್ದು, ವನ್ಯ ಜೀವಿಪ್ರಿಯರಲ್ಲಿ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ. ರಸ್ತೆ ಬದಿಗೆ ತೆರಳುತ್ತಿದ್ದ ಆನೆಗೆ ದಾರಿ ಮಾಡಿಕೊಡುವ ಬದಲು ಲಾರಿಯನ್ನ ಅದರತ್ತ ಚಲಾಯಿಸಿರುವ ದೃಶ್ಯಗಳು ಮನಕಲಕುವಂತಿವೆ.

**ಮೂಕಜೀವಿಯ ಬದುಕಿಗೂ ಬೆಲೆ ಇಲ್ಲವೇ? :** ಕಾಡು ತನ್ನ ನೆಲವಾಗಿದ್ದರೂ, ಆಹಾರ ಮತ್ತು ನೀರಿಗಾಗಿ ರಸ್ತೆ ದಾಟಿ ಬಂದ ಆನೆಯ ಮೇಲೆ ವಾಹನವನ್ನ ಮುನ್ನುಗ್ಗಿಸುವುದು ಎಷ್ಟರ ಮಟ್ಟಿಗೆ ಮಾನವೀಯ ಎಂಬ ಪ್ರಶ್ನೆ ಇದೀಗ ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿದೆ. ಮನುಷ್ಯನ ಅನುಕೂಲಕ್ಕಾಗಿ ನಿರ್ಮಾಣವಾಗಿರುವ ರಸ್ತೆಗಳಲ್ಲಿ ಸಂಚರಿಸುವಾಗ ವನ್ಯಜೀವಿಗಳ ಉಪಸ್ಥಿತಿಯನ್ನ ಗೌರವಿಸುವ ಜವಾಬ್ದಾರಿಯೂ ನಮ್ಮದೇ ಎಂಬ ಮಾತುಗಳು ಕೇಳಿಬರುತ್ತಿವೆ.

ಮಾನವನ ದುರಾಸೆ ಮತ್ತು ವೇಗದ ಬದುಕಿನ ನಡುವೆ ಕಾಡುಪ್ರಾಣಿಗಳ ಬದುಕು ಬಲಿಯಾಗಬಾರದು. ಮಾತನಾಡಲು ಸಾಧ್ಯವಿಲ್ಲದ ಮೂಕಜೀವಿಗಳ ಜೀವಕ್ಕೂ ಮನುಷ್ಯನ ಜೀವದಷ್ಟೇ ಮೌಲ್ಯವಿದೆ ಎಂಬುದನ್ನ ಮರೆಯಬಾರದು. ಕಾಡು ಮತ್ತು ವನ್ಯಜೀವಿಗಳು ಕೇವಲ ಪ್ರವಾಸಿಗರ ಆಕರ್ಷಣೆಯಲ್ಲ ಅವು ಪ್ರಕೃತಿಯ ಸಮತೋಲನದ ಅವಿಭಾಜ್ಯ ಅಂಗವಾಗಿವೆ. ಒಂದು ಆನೆಯ ಜೀವಕ್ಕೆ ಅಪಾಯ ತಂದೊಡ್ಡುವ ಇಂತಹ


ಉದಯವಾಹಿನಿ ಚಿತ್ರ

ವರ್ತನೆ ಮುಂದಿನ ದಿನಗಳಲ್ಲಿ ಮತ್ತಷ್ಟು ಅನಾಹುತಗಳಿಗೆ ಕಾರಣವಾಗಬಹುದು ಎಂಬ ಆತಂಕ ವ್ಯಕ್ತವಾಗಿದೆ.

ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗುತ್ತಿದ್ದಂತೆ, ಘಟನೆಗೆ ಸಂಬಂಧಿಸಿದಂತೆ ಅರಣ್ಯ ಇಲಾಖೆ ಪರಿಶೀಲನೆ ನಡೆಸಿ, ಲಾರಿ ಚಾಲಕನ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ನೆಟ್ಟಿಗರು ಹಾಗೂ ವನ್ಯಜೀವಿಪ್ರಿಯರು ಒತ್ತಾಯಿಸಿದ್ದಾರೆ. ವನ್ಯಜೀವಿಗಳ ಬದುಕಿಗೆ ಕೊಡಲಿ ಬೀಸುವಂತಹ ನಿರ್ಲಕ್ಷ್ಯಕ್ಕೆ ಕಡಿವಾಣ ಹಾಕಿ, ಕಾಡುಪ್ರಾಣಿಗಳ ಸಂಚಾರದ ಸಂದರ್ಭದಲ್ಲಿ ವಾಹನ ಚಾಲಕರು ಎಚ್ಚರಿಕೆ ವಹಿಸುವಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂಬ ಆಗ್ರಹ ಕೇಳಿಬಂದಿದೆ.

> ಘಟನೆ ಕುರಿತಾಗಿ ಪರಿಶೀಲನೆ ನಡೆಸಿ ಲಾರಿ ಚಾಲಕನ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಅರಣ್ಯ ಮಾರ್ಗದಲ್ಲಿ ಈ ರೀತಿಯಾಗಿ ವಾಹನ ಚಲಾಯಿಸಿರುವುದು ಉದ್ದೇಶಪೂರ್ವಕ ಎಂಬುದು ಪರಿಶೀಲನೆಯಿಂದ ದೃಢಪಟ್ಟರೆ, ಇಲಾಖೆ ನಿಯಮಾನುಸಾರ ಕ್ರಮ ಜರುಗಿಸಲಾಗುವುದು. ಲಾರಿಯ ನೋಂದಣಿ ಸಂಖ್ಯೆಯನ್ನು ಪತ್ತೆಹಚ್ಚಿ ಚಾಲಕನ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು.
> ಮೋಹನ್ ಕುಮಾರ್. ಆರ್‌ಎಫ್‌ಒ ಬಂಡೀಪುರ

# ಧಾರಾಕಾರ ಮಳೆಗೆ ಮಂಡ್ಯ, ಹನೂರು ತತ್ತರ

• ಉದಯವಾಹಿನಿ, ಮಂಡ್ಯ

ಕರ್ನಾಟಕದಲ್ಲಿ ಧಾರಾಕಾರ ಮಳೆಯಿಂದಾಗಿ ಜನಜೀವನ ತೀವ್ರವಾಗಿ ಅಸ್ತವ್ಯಸ್ತಗೊಂಡಿದೆ. ಮಂಡ್ಯ ನಗರದಲ್ಲಿ ಸುರಿದ ಭಾರಿ ಮಳೆಗೆ ಹಲವು ರಸ್ತೆಗಳು ಜಲಾವೃತವಾಗಿದ್ದು, ಮಹಾವೀರ ವೃತ್ತ ಸಂಪೂರ್ಣವಾಗಿ ನೀರಿನಿಂದ ಆವೃತವಾಗಿದೆ. ಇದರಿಂದ ವಾಹನ ಸವಾರರು ಪರದಾಡುವಂತಾಗಿದೆ. ಅಲ್ಲದೆ, ನಗರದ ಹಲವೆಡೆ ಮನೆಗಳಿಗೂ ನೀರು ನುಗ್ಗಿ ನಿವಾಸಿಗಳಿಗೆ ತೊಂದರೆಯಾಗಿದೆ. ಮತ್ತೊಂದೆಡೆ ಚಾಮರಾಜನಗರ ಜಿಲ್ಲೆಯ ಹನೂರು ಪಟ್ಟಣದಲ್ಲಿಯೂ ಭಾರಿ ಮಳೆಯಾಗಿದ್ದು, ಸಾಲು ಸಾಲು ಅವಾಂತರಗಳು ನಡೆದಿವೆ. ಹುಬ್ಬೇಹುಣಸೆ ಕೆರೆ ಹಾಗೂ ಸ್ವಾಮಿಹಳ್ಳ ತುಂಬಿ ಹರಿದು ಸೇತುವೆಗಳು ಜಲಾವೃತವಾಗಿವೆ. ಮುಖ್ಯ ರಸ್ತೆಯಲ್ಲಿ ನೀರು ಹೊಳೆಯಂತೆ ಹರಿದಿದೆ. ಮಳೆ ಆರ್ಭಟಕ್ಕೆ ಮಲೆ ಮಹದೇಶ್ವರ ಬೆಟ್ಟದಲ್ಲಿ ಭೂಕುಸಿತ ಸಂಭವಿಸಿದೆ. ಸಣ್ಣ ಬಂಡೆಕಲ್ಲುಗಳು ಮತ್ತು ಮಣ್ಣು ರಸ್ತೆಗಳ ಮೇಲೆ ಕುಸಿದು ಬಿದ್ದಿದ್ದು, ಮುಖ್ಯ ರಸ್ತೆ ಕೆಸರುಮಯವಾಗಿದೆ. ಇದರಿಂದ ವಾಹನ ಸಂಚಾರಕ್ಕೆ ಅಡಚಣೆಯಾಗಿ, ಭಕ್ತಾದಿಗಳು ಮತ್ತು ಸಾರ್ವಜನಿಕರು ತೊಂದರೆ ಅನುಭವಿಸಿದ್ದಾರೆ.


ಉದಯವಾಹಿನಿ ಚಿತ್ರ

# ಕಸ್ತೂರಿರಂಗನ್ ವರದಿಗೆ ವಿರೋಧ: ಬೇಟೋಳಿ ಗ್ರಾ. ಪಂ. ನಿರ್ಣಯ

• ಉದಯವಾಹಿನಿ, ವಿರಾಜಪೇಟೆ

ಸಮೀಪದ ಬೇಟೋಳಿಯ ಸಹಕಾರ ಸಂಘದ ಸಭಾಂಗಣದಲ್ಲಿ ಈಚೆಗೆ ನಡೆದ ಬೇಟೋಳಿ ಗ್ರಾಮ ಪಂಚಾಯಿತಿಯ ವಿಶೇಷ ಗ್ರಾಮ ಸಭೆಯಲ್ಲಿ ಕಸ್ತೂರಿರಂಗನ್ ವರದಿಯನ್ನು ವಿರೋಧಿಸಿ ನಿರ್ಣಯ ಕೈಗೊಳ್ಳಲಾಯಿತು. ಈ ಕುರಿತ ನಡಾವಳಿಗಳನ್ನು ಸರ್ಕಾರಕ್ಕೆ ಕಳುಹಿಸಿಕೊಡಲು ನಿರ್ಧರಿಸಲಾಯಿತು.ಗ್ರಾಮ ಪಂಚಾಯಿತಿಯ ಆಡಳಿತ ಅಧಿಕಾರಿಯಾಗಿರುವ ಕ್ಷೇತ್ರ ಶಿಕ್ಷಣಾಧಿಕಾರಿ ಕೆ. ಮಹೇಶ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ, ವರದಿಯ ಸಾಧಕ-ಬಾಧಕಗಳು, ಕೊಡಗಿನ ವಿಶಿಷ್ಟ ಭೌಗೋಳಿಕ ಪರಿಸ್ಥಿತಿಯ ಕುರಿತು ಗಂಭೀರ ಚರ್ಚೆ ನಡೆಯಿತು.-ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಅಚ್ಚಪಂಡ ಮಹೇಶ್ ಗಣಪತಿ ಮಾತನಾಡಿ, 'ದೇವರ ಕಾಡುಗಳನ್ನು ಸ್ಥಳೀಯರೇ ಸ್ವಂತ ಮಕ್ಕಳಂತೆ ಪ್ರೀತಿಯಿಂದ ಕಾಪಾಡಿಕೊಂಡು ಬರುತ್ತಿದ್ದಾರೆ. ಕಸ್ತೂರಿರಂಗನ್ ವರದಿ ಜಾರಿಯಾದರೆ ಪರಿಸರ ಸೂಕ್ಷ್ಮ -ವಲಯದ ನಿಯಮಗಳ ನೆಪದಲ್ಲಿ ನಮ್ಮ ಊರಿನ ದೇವಸ್ಥಾನಗಳಿಗೆ ತೆರಳಲು, ಪೂಜೆ ನೆರವೇರಿಸಲು ಹಾಗೂ ಆರೂಢಿಸಿಕೊಂಡು ಬಂದಿರುವ ಸಾಂಪ್ರದಾಯಿಕ ಆಚರಣೆಗಳನ್ನು ನಡೆಸಲು ಕಾನೂನು ತೊಡಕುಗಳು ಎದುರಾಗಲಿವೆ' ಎಂದರು.ಜನಜೀವನಕ್ಕೂ ಪ್ರಕೃತಿಗೂ ಅನಾದಿ ಕಾಲದಿಂದಲೂ ಅವಿನಾಭಾವ ಸಂಬಂಧವಿದ್ದು, ಈ ವರದಿ ನಮ್ಮ ಧಾರ್ಮಿಕ ಮತ್ತು ಸಾಂಸ್ಕೃತಿಕ ಅಸ್ತಿತ್ವಕ್ಕೇ ಕುತ್ತು ತರಲಿದೆ. ದೂರದ ಬೆಂಗಳೂರಿನಲ್ಲೋ, ಹವಾನಿಯಂತ್ರಿತ ಕೊಠಡಿಗಳಲ್ಲಿ ಕುಳಿತು ವರದಿ ಪರವಾಗಿ ವಾದಿಸುವವರಿಗೆ ಇಲ್ಲಿನ ಪರಿಸ್ಥಿತಿ ತಿಳಿಯುವುದಿಲ್ಲ. ದಿನನಿತ್ಯ ಇಲ್ಲಿನ ಮಣ್ಣಿನಲ್ಲಿ ಬದುಕು ಕಟ್ಟಿಕೊಂಡಿರುವ ಹಳ್ಳಿಯ ಜನ, ರೈತರು, ಕಾಫಿ ಬೆಳೆಗಾರರು ಅತಂತ್ರರಾಗಲಿದ್ದಾರೆ. ಸರ್ಕಾರದ ಉಪಗ್ರಹ ಆಧಾರಿತ ಮ್ಯಾಪಿಂಗ್ ಸಂಪೂರ್ಣ ಅವೈಜ್ಞಾನಿಕವಾಗಿದ್ದು ಎಂದರು.

# ನೀರಿನ ತಗಾದೆ ಕೊಲೆಯಲ್ಲಿ ಅಂತ್ಯ, ಗೂಡ್ಸ್ ವಾಹನ ಹರಿಸಿ ವ್ಯಕ್ತಿಯ ಹತ್ಯೆ!

• ಉದಯವಾಹಿನಿ, ತುಮಕೂರು

ನೀರಿನ ವಿಚಾರಕ್ಕೆ ನಡೆದ ಜಗಳ ವ್ಯಕ್ತಿಯ ಕೊಲೆಯಲ್ಲಿ ಅಂತ್ಯವಾದ ಘಟನೆ ತುಮಕೂರು ಜಿಲ್ಲೆಯಲ್ಲಿ ನಡೆದಿದೆ. ತುಮಕೂರು ಜಿಲ್ಲೆಯ ಮದುವೆ ತಾಲ್ಲೂಕಿನ ಕೊಡಿಗೇನಹಳ್ಳಿ ಹೋಬಳಿಯ ಪೊಲೇನಳ್ಳಿಯಲ್ಲಿ ಗೂಡ್ಸ್ ವಾಹನ ಹರಿಸಿ ಆನಂದ್ ಎನ್ನುವ ವ್ಯಕ್ತಿಯನ್ನು ನಾಗೇಶ್ ಎಂಬಾತ ಭೀಕರವಾಗಿ ಕೊಲೆ ಮಾಡಿದ್ದಾನೆ. ಘಟನೆ ಬಳಿಕ ತಾನೇ ಪೊಲೀಸ್ ಠಾಣೆಗೆ ಬಂದು ಶರಣಾಗಿದ್ದಾನೆ. ಪೊಲೀಸರು ಆರೋಪಿಯನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿದ್ದಾರೆ.ಕೊಡಿಗೇನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ನಿನ್ನೆ ನೀರಿನ ವಿಚಾರವಾಗಿ ಎರಡು ಕುಟುಂಬಗಳ ನಡುವೆ ಗಲಾಟೆ ನಡೆದಿತ್ತು. ಆನಂದನ ಮನೆಯ ಟ್ಯಾಂಕ್ ತುಂಬಿ ನೀರು ಪೋಲಾಗುತ್ತಿತ್ತು. ಈ ವೇಳೆ ಸ್ಥಳಕ್ಕೆ ಬಂದ ನಾಗೇಶ್ ತಂದೆ ರಾಮಕೃಷ್ಣ ನೀರು ಪೋಲಾಗುತ್ತಿದ್ದುದನ್ನು ಆಕ್ಷೇಪಿಸಿದ್ದಾರೆ. ಈ ವೇಳೆ ಆನಂದನ ಕುಟುಂಬ ಮತ್ತು ನಾಗೇಶನ ಕುಟುಂಬದ ಮಧ್ಯೆ ಗಲಾಟೆ ಆಗಿದೆ.ಈ ಸಂದರ್ಭದಲ್ಲಿ ನಾಗೇಶ್ ತಾಯಿಯ ಮೇಲೆ ಆನಂದ್ ಹಲ್ಲೆ ಮಾಡಿದ್ದಾನೆ. ತಾಯಿಯ ಮೇಲಿನ ಹಲ್ಲೆಯ ವಿಚಾರ ತಿಳಿದು ಹೊರಗಡೆ ಕೆಲಸಕ್ಕೆ ಹೋಗಿದ್ದ ನಾಗೇಶ್ ಗ್ರಾಮಕ್ಕೆ ಬಂದಿದ್ದಾನೆ.

# ಅಣ್ಣನನ್ನು ಮನೆಗೆ ಕರೆತರಲು ಹೋಗಿದ್ದ ಪುಟ್ಟ ಬಾಲಕಿ ಮೇಲೆ ಹರಿದ ಶಾಲಾ ಬಸ್

• ಉದಯವಾಹಿನಿ, ಮೈಸೂರು

ಜಿಲ್ಲೆಯ ಶಾಸ್ತ್ರಿ ಪಬ್ಲಿಕ್ ಶಾಲೆಯ ವಾಹನವೊಂದು ಹರಿದು ಲತೀಕ್ಷಾ ಎಂಬ 19 ತಿಂಗಳ ಬಾಲಕಿ ಅದರಡಿ ಸಿಲುಕಿ ಸ್ಥಳದಲ್ಲೇ ಮೃತಪಟ್ಟಿದ್ದಾಳೆ.ನಾಲ್ಕು ವರ್ಷದ ಬಾಲಕ ಶಾಲೆಯಿಂದ ಮನೆಗೆ ಬಿಡಲು ಬಂದಿದ್ದ ಶಾಸ್ತ್ರಿ ಪಬ್ಲಿಕ್ ಸ್ಕೂಲ್‌ಗೆ ಸೇರಿದ ವಾಹನ ಹರಿದ ಪರಿಣಾಮ ಈ ಘಟನೆ ನಡೆದಿದೆ. ಬಾಲಕನ ತಾಯಿ ಬಸ್‌ನಿಂದ ಮಗುವನ್ನು ಕೆಳಗಿಳಿಸುತ್ತಿದ್ದಾಗ, ಶಾಲಾ ವಾಹನ ಇದ್ದಕ್ಕಿದ್ದಂತೆ ಮುಂದಕ್ಕೆ ಚಲಿಸಿದೆ. ಆಗ ಹತ್ತಿರದಲ್ಲೇ ನಿಂತಿದ್ದ ಲತೀಕ್ಷಾ ಎಂಬ ಬಾಲಕಿಗೆ ಡಿಕ್ಕಿ ಹೊಡೆದಿದೆ.ವಾಹನದ ಚಕ್ರವು ಮಗುವಿನ ಮೇಲೆ ಹರಿದ ಪರಿಣಾಮ, ಆಕೆ ಸ್ಥಳದಲ್ಲೇ ಮೃತಪಟ್ಟಿದ್ದಾಳೆ.

42 ವರ್ಷದ ಸಿದ್ದರಾಜು ಎಂದು ಗುರುತಿಸಲಾದ ಚಾಲಕನ ವಿರುದ್ಧ ದೂರು ದಾಖಲಿಸಲಾಗಿದೆ. ಅಜಾಗರೂಕತೆ ಮತ್ತು ನಿರ್ಲಕ್ಷ್ಯದ ಚಾಲನೆಯೇ ಈ ಅಪಘಾತಕ್ಕೆ ಕಾರಣವೆಂದು ಮಗುವಿನ ಕುಟುಂಬ ಆರೋಪಿಸಿದ್ದು, ಚಾಲಕನ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಕೋರಿದೆ.

# ಗೃಹ ಸಚಿವ ಪ್ರಿಯಾಂಕ್ ಖರ್ಗೆ ಮೋಸ್ಟ್ ಕರೆಪ್ಟ್ ಪರ್ಸನ್

## ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅತ್ಯಂತ ಭ್ರಷ್ಟ ಕಲ್ಯಾಣ ಕರ್ನಾಟಕದಲ್ಲಿ ದಲಿತರ ಮೇಲಿನ ದೌರ್ಜನ್ಯ ತಡೆಯಲು ವಿಫಲ

• ಉದಯವಾಹಿನಿ, ಮೈಸೂರು

ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅತ್ಯಂತ ಭ್ರಷ್ಟ ಎಂದಿರುವ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಕಲ್ಯಾಣ ಕರ್ನಾಟಕದಲ್ಲಿ ದಲಿತರ ಮೇಲಿನ ದೌರ್ಜನ್ಯ ತಡೆಯಲು ವಿಫಲರಾದ ಅವರು ತಕ್ಷಣ ರಾಜೀನಾಮೆ ನೀಡಬೇಕೆಂದು ಮೈಸೂರಿನಲ್ಲಿ ಆಗ್ರಹಿಸಿದ್ದಾರೆ. ಮತದಾರರ ಪಟ್ಟಿ ಪರಿಷ್ಕರಣೆ ವಿವಾದ ವಿಚಾರ ಸಂಬಂಧವಾಗಿಯೂ ಪ್ರತಿಕ್ರಿಯಿಸಿದ ಅವರು, ಎಸ್‌ಐಆರ್ ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷಕ್ಕೆ ಸಂಬಂಧ ಪಟ್ಟಿದ್ದಲ್ಲ ಎಂದಿದ್ದಾರೆ.

1 ಖರ್ಗೆ ಮೋಸ್ಟ್ ಕರೆಪ್ಟ್ ಪರ್ಸನ್
2 ಖರ್ಗೆ ರಾಜೀನಾಮೆ ಕೊಟ್ಟು ಹೋಗಲಿ
3 RSS ಮುಗಿಸಲು ಅಪ್ಪನಿಂದಲೂ ಆಗಿಲ್ಲ

ಗೃಹ ಸಚಿವ ಪ್ರಿಯಾಂಕ್ ಖರ್ಗೆ ಮೋಸ್ಟ್ ಕರೆಪ್ಟ್ ಪರ್ಸನ್ ಎಂದು ಮೈಸೂರಿನಲ್ಲಿ ಪರಿಷತ್ ವಿಪಕ್ಷ ನಾಯಕ ನಾರಾಯಣಸ್ವಾಮಿ ಗಂಭೀರ ಆರೋಪ ಮಾಡಿದ್ದಾರೆ. ಕಲ್ಯಾಣ ಕರ್ನಾಟಕದಲ್ಲಿ ದಲಿತರ ಮಾರಣ ಹೋಮ ಆಗುತ್ತಿದೆ. ಈ ಬಗ್ಗೆ ಗೃಹ ಸಚಿವರು ಒಂದೇ ಒಂದು ಸ್ಟೇಟ್‌ಮೆಂಟ್ ಕೊಟ್ಟಿಲ್ಲ. ಇಂತಹ ಗೃಹ ಸಚಿವರು ನಮಗೆ ಬೇಕಾ ಎಂದು ಪ್ರಶ್ನಿಸಿರುವ ಅವರು, ಪ್ರಿಯಾಂಕ್ ಖರ್ಗೆ ರಾಜೀನಾಮೆ ಕೊಟ್ಟು ಹೋಗಲಿ ಎಂದು



ಉದಯವಾಹಿನಿ ಚಿತ್ರ

ಆಗ್ರಹಿಸಿದ್ದಾರೆ. ಸೋಲಿನ ಭಯದಿಂದ ಲೂಟಿ ಮಾಡುವುದಕ್ಕೆ ಕಾಂಗ್ರೆಸ್ ಇಳಿದಿದ್ದು, ಈ ಸರ್ಕಾರದ ಎಲ್ಲಾ ಇಲಾಖೆಗಳಲ್ಲೂ ಭ್ರಷ್ಟಾಚಾರ ನಡೆಯುತ್ತಿದೆ. SCSP-TSP ಹಣ ದುರ್ಬಳಕೆ ಮಾಡಲಾಗಿದೆ ಎಂದವರು ದೂರಿದ್ದಾರೆ.

ಆರ್‌ಎಸ್‌ಎಸ್‌ಮುಗಿಸಲು ಪ್ರಿಯಾಂಕ್ ಖರ್ಗೆ ಅಪ್ಪನಿಂದಲೂ ಆಗಿಲ್ಲ' ಗೃಹ ಸಚಿವ ಪ್ರಿಯಾಂಕ್ ಖರ್ಗೆ ಗೃಹ ಬಿಟ್ಟು ಆಚೆ ಬರುತ್ತಿಲ್ಲ. ಬರೀ ಆರ್‌ಎಸ್‌ಎಸ್ ಬಗ್ಗೆ ಅವರು ಮಾತಾಡ್ತಿದ್ದಾರೆ. ಬೇರೆಯವರ ಚಡ್ಡಿ ಯಾಕೆ ನೋಡ್ತೀರಿ, ನಿಮ್ದು ನೋಡ್ಕೊಳ್ಳಿ.

ಆರ್‌ಎಸ್‌ಎಸ್‌ನವರು ಯಾರನ್ನಾದ್ದರೂ ಥಳಿಸಲಿಕ್ಕೆ ಲಾಠಿ ಬಳಸಿದ್ದಾರಾ? ಆರ್‌ಎಸ್‌ಎಸ್‌ಮುಗಿಸಲು ಪ್ರಿಯಾಂಕ್ ಖರ್ಗೆ ಅಪ್ಪನಿಂದಲೂ ಆಗಿಲ್ಲ. ಆರ್‌ಎಸ್‌ಎಸ್‌ಮೇಲೆ ಕ್ರಿಮಿನಲ್ ಕೇಸ್ ಇಲ್ಲ ಅಂತ ನೀವೇ ಹೇಳಿದ್ದೀರಿ. ರಾಜ್ಯದ ಕಾನೂನು ಸುವ್ಯವಸ್ಥೆ ಬಗ್ಗೆ ನೀವೆಲ್ಲೂ ಮಾತಾಡಿಲ್ಲ. ಆದರೆ ರಾಜ್ಯದ ಗೃಹ ಸಚಿವರಿಗೆ ಬರೀ ಆರ್‌ಎಸ್‌ಎಸ್ ಚಿಂತೆ. ಮತದಾರರ ಪಟ್ಟಿ ಪರಿಷ್ಕರಣೆ ವಿವಾದ ವಿಚಾರ ಸಂಬಂಧವಾಗಿಯೂ ಪ್ರತಿಕ್ರಿಯಿಸಿದ ಅವರು, ಎಸ್‌ಐಆರ್ ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷಕ್ಕೆ ಸಂಬಂಧ ಪಟ್ಟಿದ್ದಲ್ಲ. ಅದು ಚುನಾವಣಾ ಆಯೋಗದ ಕೆಲಸ.

ಹೀಗಿದ್ದರೂ ಆರ್‌ಎಸ್‌ಎಸ್‌ವಿಚಾರವಾಗಿ ಕಾಂಗ್ರೆಸ್ ಸಮಸ್ಯೆ ಉಂಟು ಮಾಡಲು ಹೊರಟಿದೆ. ಕಾಂಗ್ರೆಸ್ ಅಧಿಕಾರದಲ್ಲಿದ್ದಾಗಆರ್‌ಎಸ್ ಎಸ್ ನಡೆದಿದೆ, ಆಗ ವಿವಾದ ಆಗಿರಲಿಲ್ಲ ಎಂದವರು ಹೇಳಿದ್ದಾರೆ.

> ಪ್ರಧಾನಿ ಆಗಬೇಕು ಅಂತಾ ರಾಹುಲ್ ಗಾಂಧಿ ಅಭಿಜಿತ್ ದಿಪ್ಕೆ ಫಾಲೋವರ್ ಆಗಿದ್ದಾರೆ. ಬಾಂಗ್ಲಾದೇಶ, ಪಾಕಿಸ್ತಾನ, ಶ್ರೀಲಂಕಾದವರನ್ನು ನಾವು ಹಾಗೆ ಬಿಡಬೇಕಾ? ಕಾಂಗ್ರೆಸ್ ಗೆಲ್ಲಲು ಸಾಧ್ಯವಾಗದ ಕಡೆ ವೋಟ್ ಚೋರಿ ಅಂತಾರೆ. ಮತ ಕಳ್ಳತನ ಆಗ್ತಿಲ್ಲ, ಆಗೋದು ಇಲ್ಲ ಎಂದು ತಿಳಿಸಿದ್ದಾರೆ.-
> ಛಲವಾದಿ ನಾರಾಯಣಸ್ವಾಮಿ



### ಕಿಂಚಿತ್ತೂ ಕಾಳಜಿ ಇಲ್ಲ.

ದಲಿತರ ಉದ್ಧಾರ ಬಗ್ಗೆ ಇವರಿಗೆ ಕಿಂಚಿತ್ತೂ ಕಾಳಜಿ ಇಲ್ಲ. ದಲಿತರ ಹೆಸರು ಬಳಸಿಕೊಂಡು ಆಸ್ತಿ ಮಾಡಿದ್ದಾರೆ ಅಷ್ಟೇ. ಗೃಹ ಸಚಿವರ ಭಾಗದಲ್ಲೇ 13 ಅಟ್ರಾಸಿಟಿ ಕೇಸ್ ದಾಖಲಾಗಿವೆ ಎಂದು ಛಲವಾದಿ ನಾರಾಯಣಸ್ವಾಮಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

# ಒಕ್ಕಲಿಗ ಯುವ ಬ್ರಿಗೇಡ್ ಸೇವೆ ಯುವಜನರಿಗೆ ದಾರಿ ದೀಪ



• ಉದಯವಾಹಿನಿ, ರಾಮನಗರ

ಒಕ್ಕಲಿಗ ಯುವ ಬ್ರಿಗೇಡ್‌ನ ವತಿಯಿಂದ ಪಿರಿಯಾಪಟ್ಟಣ ತಾಲ್ಲೂಕಿನ ಮಾನಸ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ರಾಜ್ಯ ಮಟ್ಟದ ಉದ್ಯೋಗ ಮೇಳ, ಪ್ರಗತಿಪರ ರೈತರಿಗೆ ಉಚಿತ ಮಲೆನಾಡು ಗಿಡ್ಡಗಳ ವಿತರಣೆ ಮತ್ತು ಕಾಯಕಯೋಗಿಗಳಿಗೆ ''ನಮ್ಮೂರ ಹೆಮ್ಮೆ ಪ್ರಶಸ್ತಿ'' ಪ್ರದಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಸುತ್ತೂರು ಮಠದ ಶ್ರೀ ಜಯರಾಜೇಂದ್ರ ದೇಶಿಕೇಂದ್ರ ಸ್ವಾಮೀಜಿ ಅವರು ಮಾತನಾಡಿ, ಒಕ್ಕಲಿಗ ಯುವ ಬ್ರಿಗೇಡ್‌ನ ಸೇವೆಗಳು ಯುವ ಜನರಿಗೆ ದಾರಿದೀಪವಾಗಿವೆ. ನಿಸ್ವಾರ್ಥವಾಗಿ ನಿರಂತರವಾಗಿ ಸೇವೆ ಸಲ್ಲಿಸುತ್ತಿರುವ ನಂಜೇಗೌಡ ನಂಜುಂಡ ಅವರನ್ನು ಮುಕ್ತಕಂಠದಿಂದ ಶ್ಲ್ಯಾಘಿಸಿದರು. ಉದ್ಯೋಗಮೇಳದಲ್ಲಿ 25ಕ್ಕೂ ಹೆಚ್ಚು ಕಂಪನಿಗಳು ಭಾಗವಹಿಸಿ, 573 ಜನರಿಗೆ ಸ್ಥಳದಲ್ಲೇ ಉದ್ಯೋಗ ನೀಡಲಾಯಿತು.

ಕಾರ್ಯಕ್ರಮದಲ್ಲಿ ಪ್ರಗತಿಪರ ರೈತರಿಗೆ ಉಚಿತವಾಗಿ ಮಲೆನಾಡು ಗಿಡ್ಡಗಳನ್ನು ವಿತರಿಸಲಾಯಿತು ಮತ್ತು ಕಾಯಕಯೋಗಿಗಳಿಗೆ ''ನಮ್ಮೂರ ಹೆಮ್ಮೆ ಪ್ರಶಸ್ತಿ'' ಪ್ರದಾನ ಮಾಡಲಾಯಿತು. ಈ ಸಂದರ್ಭದಲ್ಲಿ ನಿವೃತ್ತ ನ್ಯಾಯಮೂರ್ತಿ ಟಿ.ಜಿ. ಶಿವಶಂಕರೇಗೌಡ, ಕನ್ನಡ ಮಠದ ಪೂಜ್ಯ ಶ್ರೀ ಚನ್ನಬಸವ ದೇಶಿಕೇಂದ್ರ ಸ್ವಾಮೀಜಿ, ಆಲಮಟ್ಟಿ ಮಠದ ಶರತ್ ಚಂದ್ರ ಸ್ವಾಮೀಜಿ, ಇಟಲಿ ಕನ್ನಡ ಸಂಘದ ಮಂಜುನಾಥ್, ಡಾ. ರಂಗಸ್ವಾಮಿ ಮತ್ತು ಇತರ ಗಣ್ಯರು ಉಪಸ್ಥಿತರಿದ್ದರು.

ಅಂತರಾಳದಿಂದ...
EDITORIAL

# ಅಪೌಷ್ಟಿಕ ಮಕ್ಕಳ ಸಂಖ್ಯೆ ಇಳಿಕೆ: ಇನ್ನೂ ಸಾಗಬೇಕಿದೆ ಬಹುದೂರ



ಮಕ್ಕಳ ಅಪೌಷ್ಟಿಕಾಂಶ ಸಮಸ್ಯೆಯಿಂದ ಭಾರತವು ನಿರಂತರವಾಗಿ ಬಳಲುತ್ತಿದೆ. ಮಕ್ಕಳಲ್ಲಿ ಪೌಷ್ಟಿಕತೆ ಹೆಚ್ಚಿಸಲು ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರಗಳ ನಿರಂತರ ಪ್ರಯತ್ನದ ಫಲವಾಗಿ ಒಂಚೂರು ಸಕಾರಾತ್ಮಕ ಬದಲಾವಣೆ ಕಾಣುವಂತಾಗಿದೆ. ಇದಕ್ಕೆ ಪುಷ್ಟಿ ನೀಡುವಂತೆ ಕರ್ನಾಟಕದಲ್ಲಿ ಒಟ್ಟಾರೆ ಅಪೌಷ್ಟಿಕ ಮಕ್ಕಳ ಸಂಖ್ಯೆಯಲ್ಲಿ ಇಳಿಕೆಯಾಗಿದೆ. ಇದೊಂದು ಸಕಾರಾತ್ಮಕ ಬೆಳವಣಿಗೆ. ಹಾಗಿದ್ದೂ ಕಲ್ಯಾಣ ಕರ್ನಾಟಕ ಸೇರಿ ಕೆಲವೆಡೆ ಇನ್ನೂ ಪರಿಸ್ಥಿತಿ ಗಂಭೀರವಾಗಿದೆ ಎಂಬುದೂ ಅಷ್ಟೇ ಸತ್ಯ. ಅಂಕಿ–ಅಂಶಗಳ ಪ್ರಕಾರ ರಾಜ್ಯಾದ್ಯಂತ 2023–24ರಲ್ಲಿ 77,482 ಮಕ್ಕಳಲ್ಲಿ ತೀವ್ರ ಅಪೌಷ್ಟಿಕತೆ ಕಾಡುತ್ತಿತ್ತು. ಅದೀಗ 2025–26ರಲ್ಲಿ 6,455ಕ್ಕೆ ಇಳಿಕೆಯಾಗಿದೆ. ಅದೇ ರೀತಿ ಸಾಧಾರಣ ಅಪೌಷ್ಟಿಕತೆ ಮಕ್ಕಳ ಪ್ರಕರಣಗಳಲ್ಲೂ ಗಣನೀಯ ಇಳಿಕೆಯಾಗಿದೆ. 2023–24ರಲ್ಲಿ 1.55 ಲಕ್ಷ(ಶೇ.5.27) ಇದ್ದದ್ದು 2025–26ರಲ್ಲಿ ಸುಮಾರು 72,000ಕ್ಕೆ ಇಳಿಕೆಯಾಗಿದೆ. ಈ ಮೂಲಕ ಶೇ.50ರಷ್ಟು ಸಾಧನೆಯನ್ನು ಮಾಡಲಾಗಿದೆ. ಅಪೌಷ್ಟಿಕತೆ ಕಡಿಮೆ ಇರುವ ಜಿಲ್ಲೆಗಳ ಪೈಕಿ ಉಡುಪಿ, ಚಿಕ್ಕಮಗಳೂರು ಮುಂಚೂಣಿಯಲ್ಲಿವೆ. ಜತೆಗೆ, ಶಿವಮೊಗ್ಗ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳು ಕೂಡ ಅತ್ಯುತ್ತಮ ಸಾಧನೆಯನ್ನು ಮಾಡಿರುವುದನ್ನು ಅಂಕಿ–ಅಂಶಗಳು ಸಾದರಪಡಿಸಿವೆ. ರಾಜ್ಯದ ಒಟ್ಟಾರೆ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಂಡರೆ ಅಪೌಷ್ಟಿಕತೆ ನಿಯಂತ್ರಣದಲ್ಲಿ ಬದಲಾವಣೆಯಾಗಿದ್ದರೂ ಕಲ್ಯಾಣ ಕರ್ನಾಟಕದ ಪರಿಸ್ಥಿತಿ ಮಾತ್ರ ಹಾಗೆಯೇ ಇದೆ. 2023–24ರ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ ಪ್ರಕಾರ, 5 ವರ್ಷದೊಳಗಿನ ಮಕ್ಕಳ ಲೆಕ್ಕಾಚಾರದಲ್ಲಿ ಕಲಬುರಗಿ (ಶೇ.44.6), ಕೊಪ್ಪಳ (ಶೇ.44.1), ಯಾದಗಿರಿ(ಶೇ.43.1), ರಾಯಚೂರು(ಶೇ.49.5) ಈಗಲೂ ಅಪೌಷ್ಟಿಕತೆಯಲ್ಲಿ ಮುಂಚೂಣಿಯಲ್ಲಿವೆ. ಕಲ್ಯಾಣ ಕರ್ನಾಟಕದ ರಾಯಚೂರಲ್ಲಿ ಅಪೌಷ್ಟಿಕಾಂಶ ಸಮಸ್ಯೆ ಇನ್ನೂ ಬಗೆಹರಿಯುವಂತೆ ಕಾಣುತ್ತಿಲ್ಲ. ಇಡೀ ರಾಜ್ಯದಲ್ಲಿ ಅತೀ ಹೆಚ್ಚು ಬಾಧಿತ ಜಿಲ್ಲೆ ಇದಾಗಿದೆ. ರಾಜ್ಯ ಸರಕಾರವು ತನ್ನ ಮಾತೃಪೂರ್ಣ, ಕ್ಷೀರ ಭಾಗ್ಯ, ಅನಿಮಿಯ ಮುಕ್ತ ಪೌಷ್ಟಿಕ ಕರ್ನಾಟಕ, ಚಿಗುರು, ಕರ್ನಾಟಕ ಪೌಷ್ಟಿಕಾಂಶ ಮಿಷನ್, ಬಿಸಿಯೂಟ ಕಾರ್ಯಕ್ರಮಗಳ ಜತೆಗೆ, ಕೇಂದ್ರ ಸರಕಾರದ ಪೋಷಣ್ ಅಭಿಯಾನ್, ಸಮಗ್ರ ಶಿಶು ಅಭಿವೃದ್ಧಿ ಸೇವೆಗಳು, ಪ್ರಧಾನಮಂತ್ರಿ ಮಾತೃ ವಂದನಾ ಯೋಜನೆಗಳನ್ನು ಈ ಭಾಗದಲ್ಲಿ ಇನ್ನಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು ಅತ್ಯಗತ್ಯವಾಗಿದೆ.

> **ರಾಜ್ಯದಲ್ಲಿ ಮಕ್ಕಳಿಗೆ ಏಕರೀತಿಯ ಪೂರಕ ಪೌಷ್ಟಿಕ ಆಹಾರ ವಿತರಣೆ ಮತ್ತು ಡಿಜಿಟಲ್ ತಂತ್ರಜ್ಞಾನ ಪೋಷಣ್ ಟ್ರ್ಯಾಕರ್ ಮೂಲಕ ಪರಿಣಾಮಕಾರಿ ಮೇಲ್ವಿಚಾರಣೆಯಿಂದಾಗಿ ರಾಜ್ಯದಲ್ಲಿ ಕಳೆದ 2 ವರ್ಷದಲ್ಲಿ ಒಟ್ಟಾರೆ ಅಪೌಷ್ಟಿಕತೆಯುಳ್ಳ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿರುವುದು ಒಳ್ಳೆಯ ಬೆಳವಣಿಗೆಯಾಗಿದೆ. ಅಂಗನವಾಡಿ ಕಾರ್ಯಕರ್ತೆಯರು ಮಕ್ಕಳ ಎತ್ತರ, ತೂಕವನ್ನು ನಿಯಮಿತವಾಗಿ ಪೋಷಣ್ ಟ್ರ್ಯಾಕರ್ ದಾಖಲಿಸುತ್ತಿರುತ್ತಾರೆ. ಇದರಿಂದ ಹೆಚ್ಚು ಅಪೌಷ್ಟಿಕತೆಯುಳ್ಳ ಮಕ್ಕಳನ್ನು ಗುರುತಿಸಲು ಮತ್ತು ಅಂಥ ಮಕ್ಕಳನ್ನು ಪೌಷ್ಟಿಕಾಂಶ ಪುನಶ್ಚೇತನ ಕೇಂದ್ರಗಳಿಗೆ ದಾಖಲಿಸಿ ವಿಶೇಷ ಉಪಚಾರ ಮಾಡುತ್ತಿರುವುದರಿಂದ ಈ ಸಾಧನೆ ಸಾಧ್ಯವಾಗುತ್ತಿದೆ ಎಂಬುದು ಅಧಿಕಾರಿಗಳ ಅಂಬೋಣ.**

ಆ ಮೂಲಕ ಕಲ್ಯಾಣದ ಕರ್ನಾಟಕಕ್ಕೆ ಅಂಟಿರುವ ಅಪೌಷ್ಟಿಕಾಂಶ ಬಾಧೆಯನ್ನು ಸಂಪೂರ್ಣ ತೊಡೆದು ಹಾಕಲು ಮುಂದಾಗಬೇಕು. ಜತೆಗೆ, ಸರಕಾರಗಳು ಸಾರ್ವಜನಿಕ ಆರೋಗ್ಯಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಹಣವನ್ನು ಮೀಸಲಿಡುವ ಮೂಲಕ ಈ ಕಾರ್ಯಕ್ಕೆ ವೇಗವನ್ನು ನೀಡಬೇಕಾಗಿದೆ. ಪೌಷ್ಟಿಕಾಂಶ ಕೊರತೆಯನ್ನು ನೀಗಿಸಬೇಕಾಗಿರುವುದು ಈ ಕ್ಷಣದ ತುರ್ತು ಅಗತ್ಯವಾಗಿದೆ. ಯಾಕೆಂದರೆ, ಆರೋಗ್ಯಯುತ ಮಕ್ಕಳಿಂದ ಸದೃಢ ದೇಶವನ್ನು ನಿರ್ಮಾಣ ಮಾಡಲು ಸಾಧ್ಯ ಎಂಬುದನ್ನು ಮರೆಯಬಾರದು.



# ರಾಮಾಯಣ

16. ಅಂಗದನ ರಾಯಭಾರ

• ಹಿಂದಿನ ಸಂಚಿಕೆಯಿಂದ **121ನೆಯ ಅಧ್ಯಾಯ**

ಪಶ್ಚಿಮದಲ್ಲಿ ಪ್ರಮಾಥಿಪ್ರಘಸರಿರುವುದನ್ನು ನೋಡಿ ಅಲ್ಲಿ ಮಾರುತಿಯು ಸುಗ್ರೀವನ ರಕ್ಷಣೆಗೆ ಮಧ್ಯದಲ್ಲಿ ನಿಂತ. ಒಂದೊಂದು ಬಾಗಿಲಲ್ಲಿಯೂ ನೂರು ಕೋಟಿಯಂತೆ ಕಪಿನಾಯಕರು ರಘುವೀರನಿಗಾಗಿ ಪ್ರಾಣವನ್ನೇ ಕೊಡಲು ಸಿದ್ಧರಾಗಿ ಸಾಹಸ–ಕ್ರೋಧಗಳಿಂದ ಕೂಡಿ ಸೆಟೆದು ನಿಂತರು. ಕೂಗಿಡುತ್ತ ಮರಗಳನ್ನೂ ಮರಡಿಗಳನ್ನೂ ಬೆಟ್ಟಗಳನ್ನೂ ಹಿಡಿದು ಕಾಳಿಂಗಸರ್ಪಗಳಂತೆ ಬುಸುಗುಡುತ್ತ ರಕ್ಕಸರನ್ನು ಕೂಗಿ ಕರೆಯುತ್ತ ಉಗುರು ಹಲ್ಲುಗಳೊಡನೆ ಶಸ್ತ್ರಗಳನ್ನು ಹಿಡಿದು ಸಿದ್ಧವಾದರು. ಹೀಗೆ ಎಲ್ಲಾ ದಿಕ್ಕುಗಳಲ್ಲಿಯೂ ವಾನರಸೇನೆಯು ಪ್ರಳಯಕಾಲದ ಭೂರವನ ಬಳಗದಂತೆ ಭೋರ್ಮೊರೆದು ನಿಂತರು. ಮಹಾಸತ್ವರು ಇಡಿಕಿರಿದಿದ್ದ ಕಲ್ಪಾಂತದ ಮೃಡನಂತೆ ನಿಂತ ಅವರೊಡನೆ ಸೆಣಸುವವರು ಯಾರು? ಹತ್ತು ಆನೆಗಳ ಬಲವುಳ್ಳ ಕಪಿವೀರರು ಕೆಲವರು, ಉತ್ತರೋತ್ತರ ವೃದ್ಧಿಕರ ವೀರ್ಯವಂತರು ಕೆಲವರು, ಅಪ್ರಮೇಯಬಲರು ಕೆಲವರು; ಮೃತ್ಯು ಬಂದರೆ ಹಿಡಿದು ತುತ್ತುಗೈಯುವರಲ್ಲದೆ ಹಟ ಬಿಡದ ಅಲಘುಬಲರು ಅವರು. ಅಮಿತ ಸಂಖ್ಯೆಯ ಅವರೆಲ್ಲರೂ ಲಂಕೆಯನ್ನು ಮುತ್ತಿ ಬರಸಿಡಿಲ ಬಳಗವು ತ್ರಿಕೂಟಾದ್ರಿಯನ್ನು ಬಳಸಿ ನಿಂತರು. ಆ ಪಟುಭಟರ ಆರ್ಭಟಕ್ಕೆ ಪೊಡವಿ ತಲ್ಲಣಿಸಿತು, ಕಡಲು ಕಂಪಿಸಿತು, ಆಗಸದಿಂದ ತಾರೆಗಳು ಕಳಚಿಕೊಂಡು ಉದುರಿದುವು, ಬಿರುಗಾಳಿಯು ತನಗಿಚ್ಛೆ ಬಂದಂತೆ ಬೀಸಿತು. ಬರಬರುತ್ತ ಹೆಚ್ಚಾಗುತ್ತಿದ್ದ ಕಪಿಗಳ ಬೊಬ್ಬಿರಿತವನ್ನು ಕೇಳಿದ ರಕ್ಕಸಪಡೆಯು ರೋಷದಿಂದ ಕುದಿಯುತ್ತ ಘುಡುಘುಡಿಸಿ ಪ್ರಾಕಾರದ ರಕ್ಷಣೆಗಾಗಿ ಬಳಸಿ ನಿಂತರು. ಯುದ್ಧಸನ್ನದ್ಧರಾಗಿ ಸೇರಿದ್ದ ಕಪಿಭಟರ ಕ್ರುದ್ಧತೆಯನ್ನು ನೋಡಿ ರಘುವೀರನು ಪ್ರಬುದ್ಧರಾದ ಜಾಂಬವಂತ ವಿಭೀಷಣ ಸೂರ್ಯಸುತ ಮುಂತಾದವರನ್ನು ಪ್ರೀತಿಯಿಂದ ಕರೆದು, ''ನಮ್ಮಲ್ಲೀಗ ರಕ್ಕಸ ಪಡೆಯ ವಿರುದ್ಧ ಬದ್ಧವೈರವುಂಟಾಗಿದೆ, ಖಂಡಿತವಾಗಿಯೂ ನಾವು ಲಂಕೆಯನ್ನು ಗೆಲ್ಲುವುದು ಖಚಿತ; ನೋಡಿ ನಮ್ಮ ಸೈನಿಕರು ಹೇಗೆ ಉತ್ಸಾಹ ಪರಾಕ್ರಮದಿಂದ ತುಂಬಿ ತುಳುಕುತ್ತಿದ್ದಾರೆ! ಮುಂದೆ ಕೈಗೊಳ್ಳಬೇಕಾದ ಕ್ರಮವಾವುದು ನಮ್ಮ ಬಲದೊಡನೆ ಈಗಲೇ ಲಂಕಾಪುರಿಯೊಳಗೆ ನುಗ್ಗುವುದೋ, ಅಥವಾ ಮತ್ತೆ ಯಾರಾದರೂ ಹೋಗಿ ದಾನವರಿರುವ ಬಗೆಯನ್ನರಿತು ತಿಳಿದು ಬರಬೇಕೋ?'' ಎಂದು ರಾಮಪುರದರಸನು ಮಾನವರ ರೀತಿಯಲ್ಲಿ ಆ ಆಪ್ತಸಂದೋಹದೊಂದಿಗೆ ಸಮಾಲೋಚಿಸಿದ ಅಗಜಾತನೆಯೆ, ಮುತ್ತಿಗೆಯನ್ನು ಹಾಕಿದರೂ ರಘುನಾಥನು ರಾಜನೀತಿಯನ್ನು ಮರೆಯದೆ ರವಿತನಯನೇ ಮುಖ್ಯರಾದ ನಾಯಕರನ್ನು ಕರೆಯಲು, ಸುತ್ತಲೂ ಮುರುಡಿಗಳನ್ನೆತ್ತಿ ದಿಕ್ಕರಿಗಳಂತೆ ನಿಂತ ಬಲಿಮುಖಸೈನಿಕರು ರಾಮನು ಏನು ಹೇಳುವನೋ ಎಂದು ಇತ್ತ ಗಮನ ಕೊಟ್ಟರು. ''ಗುರುದೇವತಾದ್ರೋಹವನ್ನು ಮಾಡಿದ ರಾವಣನ ಸಿರಿಯು ಬಿಸಿಲ ತೊರೆಯಂತೆ ಕಣ್ಮರೆಯಾಗದೆ ಶಾಶ್ವತವಾಗಿ ಉಳಿಯುತ್ತದೆಯೇ? ಯಶಸ್ಕರವೆಂಬ ಸಿರಿಯು ನಮಗೆ ದೊರೆಯದೆ ಹೋಗುತ್ತದೆಯೇ?'' ಎಂದು ಪರಿಪರಿಯಲ್ಲಿ ಆ ಯೋಧರೆಲ್ಲರೂ ಬಿನ್ನವಿಸಲು ರಘುನಾಥನು, ''ಇನ್ನೊಮ್ಮೆ ಆ ದಾನವರಾಜನ ಬಳಿಗೆ ಧೀಮಂತನಾದವನೊಬ್ಬನನ್ನು ಕಳಿಸಿ, ಬೇಗ ಅವನಿಜೆಯನ್ನೊಪ್ಪಿಸಿ ಯುದ್ಧವನ್ನು ನಿವಾರಿಸಿಕೊಂಡು ತನ್ನ ಜೀವವನ್ನೂ ಜೀವಸಂಕುಲವನ್ನೂ ಉಳಿಸಿಕೊಂಡು ಸಂಪತ್ತನ್ನು ಅನುಭವಿಸಲು ಹೇಳುವುದು ಉತ್ತಮವಾಗಿ ತೋರುತ್ತಿದೆ. ಅವನು ಅದಕ್ಕೆ ಒಪ್ಪದಿದ್ದರೆ ಹೋರಾಡಿ ದುರ್ಗವನ್ನು ವಶಪಡಿಸಿಕೊಳ್ಳೋಣ. ನೀವು ಸಂಕೋಚವಿಲ್ಲದೆ ನಿಮ್ಮ ನಿಮ್ಮ ಮನಸ್ಸಿನಲ್ಲಿರುವುದನ್ನು ಹೇಳಿ'' ಎಂದು ಸೂಚಿಸಿದ. ಆಗ ಅಲ್ಲಿ ಸೇರಿದ್ದ ವಿಭೀಷಣನಲ್ಲದೆ ಕಪಿವೀರರೆಲ್ಲರೂ ಸಂತಸಗೊಂಡು, ''ಎಲೆ ದೇವ, ಈ ಭೂತಳದಲ್ಲಿ ಅರಸಿನ ರೂಪದಿಂದ ಸಕಲ ಜೀವಿಗಳನ್ನೂ ಪೊರೆಯುವ ಪರಬೊಮ್ಮನಾದ ನಿನ್ನ ಸಿರಿಚರಣಗಳಿಗೆ ಅರಿಕೆ ಮಾಡಿಕೊಳ್ಳುವುದು ಏನಿದೆ? ನೀನು ಹೇಳಿದುದು ರಾಜನೀತಿ; ಆದುದರಿಂದ ಅವರನೊಬ್ಬನನ್ನು ರಾಯಭಾರಕ್ಕೆ ಕಳಿಸಿಕೊಡಬಹುದು'' ಎಂದು ಒಪ್ಪಿಗೆಯನ್ನಿತ್ತರು. ಅವರ ಮಾತನ್ನು ಒಪ್ಪಿದ ರಘುರಾಮನು, ''ಬುದ್ಧಿವಂತರಲ್ಲಿ ಮುಖ್ಯನೂ, ಮಾಯಾವಿಗಳಲ್ಲಿ ಅಧಿಕನೂ, ಕುಟಿಲತೆಗಳಲ್ಲಿ ಪಳಗಿದವನೂ ಆದ ಆ ದೈತ್ಯನಾಯಕನೊಡನೆ ಮಾತನಾಡಿ ಅವನಿಗೆ ಸೂಕ್ತ ಉತ್ತರಗಳನ್ನು ಕೊಟ್ಟು, ಅವನ ಮನಸಿನ ಇಂಗಿತವನ್ನು ಅರಿತು ಬರುವವನು ಯಾರು ಎಂಬುದನ್ನು ನಿಧಾನವಾಗಿ ಆಲೋಚಿಸಿ ಹೇಳಿದರೆ ಅವನನ್ನು ಕಳುಹಿಸಿಕೊಡೋಣ''' ಎಂದು ಹೇಳಲು ಸುಗ್ರೀವ ಜಾಂಬವ ವಿಭೀಷಣರು ಈ ರೀತಿ ಬಿನ್ನವಿಸಿಕೊಂಡರು: ''ದೇವ, ನೀನು ಸಕಲ ಜೀವಿಗಳ ಬುದ್ಧಿವಂತಿಕೆಗೆ ಸಾಕ್ಷಿಕನಾಗಿರುವವನು, ಬೋಧಕನಾಗಿರುವವನು; ಆದರೂ ಕೇಳುತ್ತಿದ್ದೀಯೆ. ನಿನ್ನ ಪಾವನಪದಾಬ್ಜಗಳಿಗೆ ಅರಿಯದುದೇನಿದೆ? ನೀನೇ ಸೂಕ್ತನಾದವನನ್ನು ಆಯ್ಕೆಮಾಡಿಕೊಂಡು ಕಳಿಸಬೇಕು ಎಂದು ಬಿನ್ನವಿಸಿಕೊಳ್ಳುತ್ತೇವೆ ಎಂದು ಉತ್ತರವನ್ನಿತ್ತರು.

ಮುಂದುವರೆಯುವುದು



ವಿದ್ಯಾರ್ಥಿ ವಿಜಯ

ಡಾ.ಸುಧಾಕರ್ . ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು

95

# ಮನದ ಮಳೆಬಿಲ್ಲು

ಬದುಕು ಸದಾ ಪುಷ್ಪಪಥವಲ್ಲ, ಕೆಲವೊಮ್ಮೆ ಕಂಟಕದ ಕಾಲುದಾರಿಯೂ ಹೌದು. ಆಗ ಅಗತ್ಯವಾಗುವುದು ಭಾವನಾತ್ಮಕ ಸ್ಥಿತಿಸ್ಥಾಪಕತ್ವ, ಬಾಗುವ ಆದರೆ ಮುರಿಯದ ಮನದ ಲವಚಿಕೆ. ಭಾವನೆಗಳನ್ನು ದಮಿಸದೆ ಗ್ರಹಿಸಿ ಸಾಗುವವರಲ್ಲಿ ಪ್ರಿಫ್ರಂಟಲ್ ಕಾರ್ಟೆಕ್ಸ್ ದೃಢಗೊಳ್ಳುತ್ತದೆ ಎಂದು ಮನಶ್ಶಾಸ್ತ್ರ ನುಡಿಯುತ್ತದೆ. ಆಗ ವಿಷಾದ ಬಂದರೂ ವಿಚಲಿತರಾಗದೆ, ನೋವನ್ನೇ ನಾಳಿನ ನಾವೆಯಾಗಿಸುವ ಜಾಣ್ಮೆ ಮೂಡುತ್ತದೆ.

ಕಲಿಕಾರ್ಥಿ ಇದನ್ನು ಹೇಗೆ ಅಂತರಂಗಗೊಳಿಸಬೇಕು? ಪ್ರಥಮತಃ, ಭಾವನೆಗೆ ನಾಮಕರಣ. ಕ್ರೋಧ, ಭೀತಿ, ಭಗ್ನತೆಯನ್ನು ಗುರುತಿಸಿದೊಡನೆಯೇ ಅದರ ಮೇಲಿನ ನಿಯಂತ್ರಣ ಕೈಗೆ ಸಿಗುತ್ತದೆ. ಪದದಲ್ಲಿ ಸ್ಪಷ್ಟತೆ ಮೂಡಿದರೆ ಮನದಲ್ಲಿ ಸಮಚಿತ್ತ ಮೂಡುತ್ತದೆ. ಇದು ಆತ್ಮಾವಲೋಕನದ ಮೊದಲ ಹೆಜ್ಜೆ. ನೋವನ್ನು ಏಕಾಂಗಿಯಾಗಿ ನುಂಗದೆ, ಆಪ್ತ ಮಿತ್ರ, ಪಾಲಕ, ಗುರುಗಳೊಂದಿಗೆ ಹಂಚಿಕೊಳ್ಳಿ.

ಮಾತು ಮನದ ಭಾರ ಇಳಿಸುತ್ತದೆ, ಭಾವಕ್ಕೆ ದಾರಿ ತೋರಿಸುತ್ತದೆ. ಅಧ್ಯಯನಗಳ ಪ್ರಕಾರ, ಸ್ಥಿತಿಸ್ಥಾಪಕತ್ವ ರೂಢಿಸಿದವರಲ್ಲಿ ಪರೀಕ್ಷಾ ತಳಮಳ ಮುಕ್ಕಾಲು ಪಾಲು ಕರಗಿ, ಗುರಿಯ ಛಲ ಎರಡರಷ್ಟು ಹೆಚ್ಚುತ್ತದೆ. ಆದ್ದರಿಂದ ಸೋಲು ಬಂದಾಗ ಕುಗ್ಗದೆ ಭಾವನೆಯನ್ನು ಅಪ್ಪಿ ನಡೆಯಿರಿ. ಗಾಳಿಗೆ ಬಾಗುವ ನಾಣಲು ಬಿರುಗಾಳಿಯಲ್ಲೂ ಉಳಿಯುತ್ತದೆ, ನೆಟ್ಟಗೆ ನಿಂತ ವೃಕ್ಷವೇ ಮುರಿಯುತ್ತದೆ.

> **ದ್ವಿತೀಯತಃ, ಉಸಿರಿನ ಸೇತುವೆ. ಆತಂಕ ಉಕ್ಕಿದಾಗ ಮೂರು ಗಂಭೀರ ಉಸಿರೆಳೆಯಿರಿ. ಇದು ಹೃದಯದ ಲಯವನ್ನು ತಹಬಂದಿಗೆ ತಂದು, ಚಿತ್ತಕ್ಕೆ ಸ್ಥೈರ್ಯ ನೀಡುತ್ತದೆ ಎಂಬುದು ವೈಜ್ಞಾನಿಕ ಸತ್ಯ. ತೃತೀಯತಃ, ಸಂಬಂಧದ ಆಸರೆ.**





ಕಲಾ ಸಾಹಿತ್ಯ
ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

**ಪ್ರಾಣಿ ಪಕ್ಷಿಗಳಿಗೆ ಅಲ್ಪಾಯಸ್ಸು ಆದರೂ ಸಹ ಬಹಳ ಅರ್ಥಪೂರ್ಣವಾಗಿ ಗೂಡು ಕಟ್ಟಿ ಸಂತತಿ ಬೆಳೆಸಿಕೊಂಡು ತನ್ನ ಜವಾಬ್ದಾರಿ ಮುಗಿಸಿ ಇಲ್ಲಿಗೆ ನನ್ನ ಅವಧಿ ಮತ್ತು ಆಯಸ್ಸು ಮುಗಿಯಿತು ಎಂದು ಅಂದುಕೊಂಡು ಯಾವುದಕ್ಕೂ ಸಂಬಂಧ ಹಾಗೂ ಮೋಹವಿಲ್ಲದೇ ಈ ಭೂಮಿಯಿಂದ ಶಾಶ್ವತವಾಗಿ ನಿರ್ಗಮಿಸುತ್ತವೆ.**

# ಪ್ರಾಣಿ ಪಕ್ಷಿಗಳು ಬದುಕಿರುವಷ್ಟು ದಿನ ನೀಲಾಜಾಲವಾಗಿ ಬದುಕುತ್ತವೆ ಆದರೆ ಮನುಷ್ಯ ಏಕೆ ಬದುಕಲು ಮೀನಾ ಮೇಷ



ಈ ಪ್ರಶ್ನೆಗೆ ಮನುಷ್ಯನಲ್ಲಿ ಉತ್ತರವಿಲ್ಲ ಉತ್ತರ ಕೊಡುವವರು ಮುಂದೆ ಯಾರೂ ಬರುವುದಿಲ್ಲ. ಅಕಸ್ಮಾತ್ ಒಂದು ವೇಳೆ ಉತ್ತರ ಕೊಡಲು ಮುಂದೆ ಬಂದರೆ ಅವರನ್ನ ಹುಚ್ಚರೆಂದು ಅವಮಾನಿಸಿ ಬಿಂಬಿಸುತ್ತಾರೆ ಹಾಗೂ ಆತನ ಜೀವಕ್ಕೂ ಸಹ ಕುತ್ತು ಬರುತ್ತದೆ ಎಂತಹ ವಿಪರ್ಯಾಸ. ಮನುಷ್ಯನು ಪ್ರಾಣಿ ಪಕ್ಷಿಗಳ ತರಹ ಬದುಕುವ ಕಲೆಯನ್ನು ಕಲಿತರೆ ಮನುಷ್ಯ ಮತ್ತು ಮನುಷ್ಯ ನಡುವೆ ಯಾವುದೇ ಭಿನ್ನಾಭಿಪ್ರಾಯ, ಗೊಂದಲ,ತಾರತಮ್ಯ, ಅಸಮಾನತೆ,ವೈಷಮ್ಯ ಇರುವುದಿಲ್ಲ. ಪ್ರಾಣಿ ಪಕ್ಷಿಗಳು ಭೂತಕಾಲದ ಬಗ್ಗೆ ಮತ್ತು ಭವಿಷ್ಯತ್ಕಾಲದ ಬಗ್ಗೆ ಎಂದಿಗೂ ಚಿಂತಿಸದೇ ವರ್ತಮಾನ ಕಾಲದಲ್ಲಿ ಭೂಮಿ ಮತ್ತು ಆಕಾಶ ನಡುವಿನ ನಂಟಿನೊಂದಿಗೆ ಪ್ರಕೃತಿಯ ಜೊತೆ ಸಂಬಂಧ ಬೆಳೆಸಿಕೊಂಡು ಬಹಳ ಸಂತೋಷವಾಗಿ ನೀಲಾಜಾಲವಾಗಿ ಬದುಕುತ್ತವೆ. ಆದರೆ ಮನುಷ್ಯ ಮಾತ್ರ ಸಂತೋಷವಾಗಿ ಬದುಕಲು ಸಾಧ್ಯವಾಗದೇ ಮೀನಾ ಮೇಷ ಎಣಿಸುತ್ತಾ ತಡೆವರಿಸುತ್ತಾನೆ ಕಾರಣ ಹಲವು ರೀತಿಯಲ್ಲಿ ವಿವರಿಸಲು ಅಗತ್ಯ ಇಲ್ಲ ಸಾಮಾನ್ಯವಾಗಿ ಎಲ್ಲರಿಗೂ ಗೊತ್ತು. ನಿಕೃಷ್ಟವಾದ ಪ್ರಶ್ನೆಗಳನ್ನು ಕೇಳುವ ವ್ಯಕ್ತಿಗೆ ಉತ್ತರಿಸಬಾರದು, ಅದೇ ನಿಕೃಷ್ಟವಾದ ಉತ್ತರಗಳನ್ನು ಕೊಡುವ ವ್ಯಕ್ತಿಯನ್ನ ಪ್ರಶ್ನಿಸಲು ಹೋಗಬಾರದು. ಆದರೆ ಮನುಷ್ಯ ಮಾತ್ರ ಭೂಮಿಯಿಂದ ಶಾಶ್ವತವಾಗಿ ನಿರ್ಗಮಿಸಲು ಇಷ್ಟಪಡುವುದಿಲ್ಲ. ಇಲ್ಲಿ ಜಾಗ ಇಲ್ಲದಿದ್ದರೆ ಮಂಗಳ ಗ್ರಹ ಹಾಗೂ ಚಂದ್ರಲೋಕದಲ್ಲಿ ವಾಸಿಸಲು ಯೋಚಿಸುತ್ತಾನೆ. ಒಂದು ವೇಳೆ ದೇವರು ಅಥವಾ ಯಮಧರ್ಮರಾಯ ಲಂಚ ಕೇಳುವುದಾಗಿದ್ದರೆ ಅಲ್ಲೂ ಕೂಡ ಸಂಬಂಧ ಬೆಳೆಸಿ ಆಯಸ್ಸನ್ನ ಮುಂದುವರಿಸಲು ಬೇಡಿಕೆ ಇಡುತ್ತಿದ್ದನು. ಆದರೇನು ಬಂತು ಎಲ್ಲವೂ ಪ್ರಕೃತಿಯ ನಿಯಮ.

ಪ್ರಕೃತಿಯ ಸಹಜ ಪ್ರಕ್ರಿಯೆ ಸದಾ ನಿರಂತರ. ಇದನ್ನು ಯಾರಿಂದಲೂ ತಪ್ಪಿಸಲು ಸಾಧ್ಯವಿಲ್ಲ ಕರೆ ಬಂದಾಗ ಹೋಗಲೇಬೇಕು ಹೋಗದಿದ್ದರೆ ಬಿಡುವರಿಲ್ಲ. ಆದ್ದರಿಂದ ಜೀವಂತ ಇದ್ದಾಗ ಯಾವುದೇ ಆಸೆಗಳು ಯಾವುದೇ ಮೋಹಗಳು ಇಲ್ಲದಂತೆ ಬದುಕಿ ಅದೇ ಬದುಕಿನ ಸಾರ್ಥಕ.

**ಉದಾಹರಣೆಗೆ:** ನಮಗೆ ಹುಟ್ಟೂ ಗೊತ್ತಿಲ್ಲ ಸಾವೂ ಗೊತ್ತಿಲ್ಲ ನಾವು ಬಂದಿರುವುದು ಹೋಗುವುದಕ್ಕೇ ಹೊರತು ಇರುವುದಕ್ಕಲ್ಲ. ಒಂದು ನಿದರ್ಶನ ಅಂದರೆ ನಾರದ ಕೃಷ್ಣನಿಗೆ ಕೇಳಿದ ಪ್ರಶ್ನೆ ಅದೇನೆಂದರೆ, ಮರಣಕ್ಕೂ ಮತ್ತು ಮೋಕ್ಷಕ್ಕೂ ಏನು ವ್ಯತ್ಯಾಸ ಅದಕ್ಕೆ ಕೃಷ್ಣನಿಂದ ದೊರೆತ ಉತ್ತರ ಆಸೆಗಳು ಉಳಿಸಿಕೊಂಡು ಉಸಿರು ನಿಂತರೆ ಅದೇ ಮರಣ ಅದೇ ಉಸಿರು ಇದ್ದಾಗಲೂ ಆಸೆಗಳು ಇಲ್ಲವಾದರೆ ಅದೇ ಮೋಕ್ಷ. ಇಂದು ನಾವು ಪಕ್ಷಿಗಳಂತೆ ಆಕಾಶದಲ್ಲಿ ಹಾರುವುದನ್ನು ಕಲಿತಿದ್ದೇವೆ, ನೀರಿನೊಳಗೆ ಮೀನಿನಂತೆ ಈಜುವುದನ್ನು ಕಲಿತಿದ್ದೇವೆ ಆದರೆ ಮನುಷ್ಯ ಜೀವಿಗಳಾಗಿ ಭೂಮಿಯಲ್ಲಿ ಬದುಕುವುದನ್ನು ಮಾತ್ರ ಕಲಿತಿಲ್ಲ ಎಂತಹ ವಿಪರ್ಯಾಸ. ಆದ್ದರಿಂದ ತಲೆಯ ಮೇಲೆ ಮೆರೆಯುವ ಜನಸಮೂಹ ಇದನ್ನ ಅರ್ಥಮಾಡಿಕೊಡು ಪ್ರಾಣಿ ಪಕ್ಷಿಗಳ ತರಹ ಬದುಕನ್ನ ಕಟ್ಟಿಕೊಂಡರೆ ಬದುಕು ಸಾರ್ಥಕ. ಪ್ರಾಣಿ ಪಕ್ಷಿಗಳ ತರಹ ಬದುಕುತ್ತಿರುವ ಬಡವರು,ತೀರಾ ಬಡವರು, ನಿರ್ಗತಿಕರು,ಅನಾಥರು ಅವರುಗಳನ್ನು ನೋಡಿ ನಾವು ಕಲಿಯಬೇಕಾಗಿದೆ. ಕರುಣೆ, ಪ್ರೀತಿ, ಸಹಾನುಭೂತಿ ಮಿಗಿಲಾಗಿ ಮಾನವೀಯತೆ ಉಳ್ಳವರು ಅಂಥವರ ಬಾಳಿಗೆ ಬೆಳಕಾಗಿ. ಒಟ್ಟಾರೆ ಯಾವುದೇ ಕಾರಣಕ್ಕೂ ಸಹ ಬದುಕಲು ಮೀನಾ ಮೇಷ ಎಣಿಸಿ ತಡವರಿಸದೇ ಪ್ರಾಣಿ ಪಕ್ಷಿಗಳ ತರಹ ನೀಲಾಜಾಲವಾಗಿ ಬದುಕಿ ಬದುಕನ್ನು ಸಾರ್ಥಕ ಮಾಡಿಕೊಳ್ಳುವುದೇ ನಿಜವಾದ ಬದುಕು.

# ತ್ರಿಪಿಂಡಿ ಶ್ರಾದ್ಧ ಮಾಡುವ ಉದ್ದೇಶ, ವಿಧಿ ಮತ್ತು ಪದ್ಧತಿ – ಪಿತೃಪಕ್ಷದ ನಿಮಿತ್ತ ಸನಾತನ ಸಂಸ್ಥೆಯ ವಿಶೇಷ ಲೇಖನ

ತೀರ್ಥಕ್ಷೇತ್ರಗಳಲ್ಲಿ ಪಿತೃಗಳನ್ನು ಉದ್ದೇಶಿಸಿ ಮಾಡುವ ಶ್ರಾದ್ಧಕ್ಕೆ ತ್ರಿಪಿಂಡಿ ಶ್ರಾದ್ಧ ಎಂದು ಹೇಳುತ್ತಾರೆ. ನಮಗೆ ತಿಳಿಯದೇ ಇರುವ, ನಮ್ಮ ವಂಶದಲ್ಲಿ ಸದ್ಗತಿ ಸಿಗದಿರುವವರ ಅಥವಾ ದುರ್ಗತಿಗೆ ಹೋಗಿರುವವರ ಮತ್ತು ನಮ್ಮ ಕುಲದವರನ್ನು ಪೀಡಿಸುವ ಪಿತೃಗಳಿಗೆ, ಅವರ ಪ್ರೇತತ್ವವು ದೂರವಾಗಿ ಸದ್ಗತಿಯು ಸಿಗಲು ಅಂದರೆ ಭೂಮಿ, ಅಂತರಿಕ್ಷ ಮತ್ತು ಆಕಾಶ ಈ ಮೂರು ಕಡೆಗಳಲ್ಲಿರುವ ಆತ್ಮಗಳಿಗೆ ಮುಕ್ತಿಯು ಸಿಗಲು ತ್ರಿಪಿಂಡಿ ಶ್ರಾದ್ಧವನ್ನು ಮಾಡುವ ಪದ್ಧತಿಯಿದೆ. ಎಂದಿನಂತೆ ಮಾಡುವ ಶ್ರಾದ್ಧಗಳು ಒಬ್ಬರನ್ನು ಉದ್ದೇಶಿಸಿ ಅಥವಾ ವಸು–ರುದ್ರ– ಆದಿತ್ಯ ಈ ಶ್ರಾದ್ಧ ದೇವತೆಗಳ ಪಿತೃಗಣದಲ್ಲಿನ ತಂದೆ, ತಾತ, ಮುತ್ತಾತ ಈ ತ್ರಯಿಗಳನ್ನು ಉದ್ದೇಶಿಸಿ ಮಾಡಿದ ಶ್ರಾದ್ಧಗಳು 3 ಪೀಳಿಗೆಗಳಿಗೆ ಸೀಮಿತವಾಗಿರುತ್ತವೆ. ಆದರೆ ತ್ರಿಪಿಂಡಿ ಶ್ರಾದ್ಧದಿಂದ ಅದಕ್ಕೂ ಮೊದಲಿನ ಪೀಳಿಗೆಗಳಲ್ಲಿನ ಪಿತೃಗಳಿಗೂ ತೃಪ್ತಿ ಸಿಗುತ್ತದೆ. ಪ್ರತಿಯೊಂದು ಕುಟುಂಬದಲ್ಲಿ ಈ ವಿಧಿಯನ್ನು ಪ್ರತಿ 12 ವರ್ಷಗಳಿಗೊಮ್ಮೆ ಮಾಡಬೇಕು ಅಥವಾ ಪಿತೃಗಳಿಂದ ತೊಂದರೆಯಾಗುತ್ತಿರುವ ಕುಟುಂಬಗಳು ಈ ವಿಧಿಯನ್ನು ದೋಷ ನಿವಾರಣೆಗಾಗಿ ಮಾಡಬೇಕು.

**ವಿಧಿಯನ್ನು ಮಾಡಲು ಯೋಗ್ಯ ಕಾಲ :** ತ್ರಿಪಿಂಡಿ ಶ್ರಾದ್ಧಕ್ಕಾಗಿ ಅಷ್ಟಮಿ, ಏಕಾದಶಿ, ಚತುರ್ದಶಿ, ಅಮಾವಾಸ್ಯೆ, ಹುಣ್ಣಿಮೆ ಈ ತಿಥಿಗಳು ಮತ್ತು ಸಂಪೂರ್ಣ ಪಿತೃಪಕ್ಷವು ಯೋಗ್ಯವಾಗಿರುತ್ತದೆ. ಗುರು ಶುಕ್ರಾಸ್ತ, ಗಣೇಶೋತ್ಸವ ಮತ್ತು ಶಾರದಾ ನವರಾತ್ರಿಯಲ್ಲಿ (ಶರನ್ನವರಾತ್ರಿ) ಈ ವಿಧಿಯನ್ನು ಮಾಡಬಾರದು. ಹಾಗೆಯೇ ಕುಟುಂಬದಲ್ಲಿ ಮಂಗಲಕಾರ್ಯವಾದ ಮೇಲೆ ಮತ್ತು ಅಶುಭ ಘಟನೆಗಳಾದ ಮೇಲೆ ಒಂದು ವರ್ಷದವರೆಗೆ ತ್ರಿಪಿಂಡಿಶ್ರಾದ್ಧವನ್ನು ಮಾಡಬಾರದು. ಅನಿವಾರ್ಯವಾಗಿದ್ದರೆ ಉದಾ. ಒಂದು ಮಂಗಲಕಾರ್ಯ ಆದ ಕೆಲವು ತಿಂಗಳುಗಳ ನಂತರ ಇನ್ನೊಂದು ಮಂಗಲಕಾರ್ಯವಿದ್ದರೆ ಇವೆರಡರ ಮಧ್ಯಕಾಲದಲ್ಲಿ ತ್ರಿಪಿಂಡಿ ಶ್ರಾದ್ಧವನ್ನು ಮಾಡಬೇಕು. **ವಿಧಿಯನ್ನು ಮಾಡಲು ಯೋಗ್ಯ ಸ್ಥಳ :** ತ್ರ್ಯಂಬಕೇಶ್ವರ, ಗೋಕರ್ಣ ಮಹಾಬಲೇಶ್ವರ, ಗರುಡೇಶ್ವರ, ಹರಿಹರೇಶ್ವರ (ದಕ್ಷಿಣ ಕಾಶಿ), ಕಾಶಿ ಈ ಸ್ಥಳಗಳು ತ್ರಿಪಿಂಡಿಶ್ರಾದ್ಧವನ್ನು ಮಾಡಲು ಯೋಗ್ಯ ಸ್ಥಳಗಳಾಗಿವೆ. **ಪದ್ಧತಿ :** 'ಮೊದಲು ತೀರ್ಥಕ್ಷೇತ್ರದಲ್ಲಿ ಸ್ನಾನ ಮಾಡಿ ಶ್ರಾದ್ಧದ ಸಂಕಲ್ಪವನ್ನು ಮಾಡಬೇಕು. ನಂತರ ಮಹಾವಿಷ್ಣುವಿನ ಮತ್ತು ಶ್ರಾದ್ಧಕ್ಕಾಗಿ ಕರೆದಿರುವ ಬ್ರಾಹ್ಮಣರಿಗೆ ಶ್ರಾದ್ಧವಿಧಿಯ ಪ್ರಕಾರ ಪೂಜೆ ಮಾಡಬೇಕು. ನಂತರ ಜವೆಗೋಧಿ, ಅಕ್ಕಿ ಮತ್ತು ಎಳ್ಳು ಇವುಗಳ ಹಿಟ್ಟಿನ ಪ್ರತಿಯೊಂದರ ಒಂದೊಂದು ಪಿಂಡವನ್ನು ತಯಾರು ಮಾಡಬೇಕು. ದರ್ಭೆಯನ್ನು ಹಾಸಿ ಅದರ ಮೇಲೆ ತಿಲೋದಕವನ್ನು ಸಿಂಪಡಿಸಿ ಪಿಂಡದಾನ ಮಾಡಬೇಕು.



**ಜವೆಗೋಧಿಯ ಪಿಂಡ (ಧರ್ಮಪಿಂಡ) :** ತಾಯಿಯ ವಂಶದಲ್ಲಿನ ಮತ್ತು ತಂದೆಯ ವಂಶದಲ್ಲಿನ ಉತ್ತರಕ್ರಿಯೆ ಆಗದಿರುವವರು, ಸಂತಾನ ಇಲ್ಲವೆಂದು ಯಾರ ಪಿಂಡದಾನವಾಗಿಲ್ಲವೋ ಅವರು ಅಥವಾ ಜನ್ಮತಃ ಅಂಗವಿಕಲರು (ಅಂಗವಿಕಲರಾಗಿರುವುದರಿಂದ ಮದುವೆ ಆಗಿರದೇ ಸಂತಾನರಹಿತವಾಗಿದ್ದವರು), ಇಂತಹ ಪಿತೃಗಳ ಪ್ರೇತತ್ವವು ನಾಶವಾಗಿ ಸದ್ಗತಿ ಸಿಗಲೆಂದು ಜವೆಗೋಧಿಯ ಪಿಂಡವನ್ನು ಕೊಡುತ್ತಾರೆ. ಇದಕ್ಕೆ ಧರ್ಮ ಪಿಂಡ ಎಂಬ ಹೆಸರು ಇದೆ.

**ಮಧುರತ್ರಯಯುಕ್ತ ಅನ್ನದ ಪಿಂಡ :** ಪಿಂಡದ ಮೇಲೆ ಸಕ್ಕರೆ, ಜೇನುತುಪ್ಪ ಮತ್ತು ತುಪ್ಪ ಇವುಗಳ ಮಿಶ್ರಣವನ್ನು ಹಾಕುವುದಕ್ಕೆ ಮಧುರತ್ರಯೀ ಎನ್ನುತ್ತಾರೆ. ಇದನ್ನು ಕೊಡುವುದರಿಂದ ಅಂತರಿಕ್ಷದಲ್ಲಿರುವ ಪಿತೃಗಳಿಗೆ ಸದ್ಗತಿ ಸಿಗುತ್ತದೆ.

**ಎಳ್ಳು ಪಿಂಡ :** ಭೂಮಿಯ ಮೇಲೆ ಕ್ಷುದ್ರಯೋನಿಯಲ್ಲಿದ್ದು ಇತರರಿಗೆ ತೊಂದರೆ ಕೊಡುವ ಪಿತೃಗಳಿಗೆ ಎಳ್ಳು ಪಿಂಡದಿಂದ ಸದ್ಗತಿಯು ಪ್ರಾಪ್ತವಾಗುತ್ತದೆ. ಈ ಮೂರು ಪಿಂಡಗಳಿಗೆ ತ್ರಿಲೋದಕ ಕೊಡಬೇಕು. ನಂತರ ಪಿಂಡಗಳ ಪೂಜೆಯನ್ನು ಮಾಡಿ ಅರ್ಘ್ಯವನ್ನು ಅರ್ಪಿಸಬೇಕು. ಶ್ರೀವಿಷ್ಣುವಿಗೆ ತರ್ಪಣ ಕೊಡಬೇಕು. ಬ್ರಾಹ್ಮಣರಿಗೆ ಭೋಜನವನ್ನು ನೀಡಿ ದಕ್ಷಿಣೆಯೆಂದು ವಸ್ತ್ರ, ಪಾತ್ರೆ, ಬೀಸಣಿಗೆ, ಪಾದರಕ್ಷೆಗಳನ್ನು ಕೊಡಬೇಕು. **ಪಿತೃದೋಷವಿದ್ದರೆ ತಾಯಿ–ತಂದೆ ಜೀವಂತವಿರುವಾಗಲೇ ಮಗನು ವಿಧಿಯನ್ನು ಮಾಡುವುದು ಯೋಗ್ಯವಾಗಿದೆ :** ಶ್ರಾದ್ಧಕರ್ತನ ಜಾತಕದಲ್ಲಿ ಪಿತೃದೋಷವಿದ್ದರೆ ಅದರ ನಿವಾರಣೆಗಾಗಿ ತಾಯಿ–ತಂದೆ ಜೀವಂತ ಇರುವಾಗಲೇ ಈ ವಿಧಿಯನ್ನು ಮಾಡಬೇಕು.

ಶ್ರಾದ್ಧ ಕರ್ತನ ತಂದೆಯು ಜೀವಂತವಿಲ್ಲದಿದ್ದರೆ ಅವನು ವಿಧಿಯನ್ನು ಮಾಡುವಾಗ ಕೂದಲುಗಳನ್ನು ತೆಗೆಯಬೇಕು. ತಂದೆಯು ಜೀವಂತವಿರುವ ಶ್ರಾದ್ಧಕರ್ತನಿಗೆ ಕೂದಲುಗಳನ್ನು ತೆಗೆಯುವ ಆವಶ್ಯಕತೆ ಇರುವುದಿಲ್ಲ. ತ್ರಿಪಿಂಡಿ ಶ್ರಾದ್ಧದಲ್ಲಿ ಶ್ರಾದ್ಧಕರ್ತನಿಗೆ ಮಾತ್ರ ಅಶೌಚವಿರುತ್ತದೆ. ಮನೆಯಲ್ಲಿನ ಇತರರಿಗೆ ಇರುವುದಿಲ್ಲ. ಆದುದರಿಂದ ಮನೆಯಲ್ಲಿನ ಒಬ್ಬರು ವಿಧಿಯನ್ನು ಮಾಡುವಾಗ ಇತರರು ಪೂಜೆ ವಗೈರೆಗಳನ್ನು ನಿಲ್ಲಿಸುವ ಆವಶ್ಯಕತೆಯಿಲ್ಲ.

ಶ್ರೀ. ವಿನೋದ ಕಾಮತ್,
ರಾಜ್ಯ ವಕ್ತಾರರು, ಸನಾತನ ಸಂಸ್ಥೆ

# ಟೊಮೆಟೊ ಬೀಜಗಳನ್ನು ಸೇವಿಸುವುದರಿಂದ ಕಿಡ್ನಿ ಸ್ಟೋನ್ಸ್‌ಗೆ ಕಾರಣವಾಗುತ್ತದೆಯೇ? ತಿನ್ನಬೇಕಾ ಅಥವಾ ಬೇಡವಾ?

ಹಲವು ಜನರಲ್ಲಿ ಆಹಾರ ಹಾಗೂ ಆರೋಗ್ಯಕ್ಕೆ ಸಂಬಂಧಿಸಿದಂತೆ ವಿವಿಧ ತಪ್ಪು ಕಲ್ಪನೆಗಳಿವೆ. ಇಂತಹ ತಪ್ಪು ಕಲ್ಪನೆಗಳಲ್ಲಿ ಟೊಮೆಟೊ ಸೇವನೆಯು ಕಿಡ್ನಿ ಸ್ಟೋನ್ಸ್‌ಗೆ ಕಾರಣವಾಗುತ್ತದೆ ಎನ್ನುವುದು ಕೂಡ ಒಂದಾಗಿದೆ. ಕಿಡ್ನಿ ಸ್ಟೋನ್ಸ್ ಬಳಲುತ್ತಿರುವವರು ಹಾಗೂ ಈ ಸಮಸ್ಯೆಯನ್ನು ತಡೆಗಟ್ಟಲು ಬಯಸುವವರು ಸಾಮಾನ್ಯವಾಗಿ ತಮ್ಮ ಆಹಾರಕ್ರಮದಿಂದ ಟೊಮೆಟೊ ಸಂಪೂರ್ಣವಾಗಿ ಹೊರಗಿಡುತ್ತಾರೆ. ಟೊಮೆಟೊದಲ್ಲಿರುವ ಆಕ್ಸಲೇಟ್ ಅಂಶ, ಅದರ ಬೀಜಗಳು, ಕಿಡ್ನಿ ಸ್ಟೋನ್ಸ್ ರೂಪಗೊಳ್ಳಲು ಕಾರಣವಾಗುತ್ತದೆ ಎಂಬುದು ಹಲವು ಜನರ ನಂಬಿಕೆಯಾಗಿದೆ.

ಟೊಮೆಟೊದಲ್ಲಿ ಆಕ್ಸಲೇಟ್ ಇದೆ ಎಂಬ ಕಾರಣಕ್ಕಾಗಿಯೇ ಹೆಚ್ಚಿನ ಜನರು ಅದನ್ನು ತಿನ್ನುವುದನ್ನು ಸಂಪೂರ್ಣವಾಗಿ ನಿಲ್ಲಿಸುವ ಅಗತ್ಯವಿಲ್ಲ. ಕಿಡ್ನಿ ಸ್ಟೋನ್ಸ್ ರಚನೆಯು ಒಂದೇ ಅಂಶ ಮಾತ್ರ ಕಾರಣವಾಗುವುದಿಲ್ಲ. ವಿವಿಧ ದೈಹಿಕ ಹಾಗೂ ಆಹಾರಕ್ರಮದ ಅಂಶಗಳ ಸಂಯೋಜನೆಯಿಂದ ಉಂಟಾಗುತ್ತದೆ. ವ್ಯಕ್ತಿಯ ದ್ರವ ಸೇವನೆ, ಮೂತ್ರದಲ್ಲಿನ ಕ್ಯಾಲ್ಸಿಯಂ, ಆಕ್ಸಲೇಟ್ ಮಟ್ಟಗಳು, ಆಹಾರದಲ್ಲಿನ ಉಪ್ಪಿನ ಪ್ರಮಾಣ, ಕಿಡ್ನಿ ಸ್ಟೋನ್ಸ್ ನಿರ್ದಿಷ್ಟ ವಿಧ, ಕುಟುಂಬದ ಆರೋಗ್ಯ ಇತಿಹಾಸ, ಇತರ ವೈದ್ಯಕೀಯ ಸ್ಥಿತಿಗಳು ಸೇರಿವೆ. ಇತರ ಅಂಶಗಳನ್ನು ನಿರ್ಲಕ್ಷಿಸಿ ಕೇವಲ ಒಂದು ಆಹಾರ ಪದಾರ್ಥವನ್ನು ಮಾತ್ರ ದೂಷಿಸುವುದು ಕಿಡ್ನಿ ಸ್ಟೋನ್ಸ್‌ಗೆ ಮೂಲ ಕಾರಣಗಳ ಕುರಿತು ದಾರಿ ತಪ್ಪಿಸುವ ಚಿತ್ರಣ ನೀಡುವುದು ಸರಿಯಲ್ಲ. ಟೊಮೆಟೊ 'ಆಕ್ಸಲೇಟ್‌ಗಳು' ಎಂಬ ನೈಸರ್ಗಿಕ ಸಂಯುಕ್ತಗಳನ್ನು ಹೊಂದಿರುತ್ತವೆ. ಇವು ಅನೇಕ ಸಸ್ಯ ಆಧಾರಿತ ಆಹಾರಗಳಲ್ಲಿ ಕಂಡುಬರುತ್ತವೆ. 'ಕ್ಯಾಲ್ಸಿಯಂ ಆಕ್ಸಲೇಟ್' ಕಿಡ್ನಿ ಸ್ಟೋನ್ಸ್ ಉಂಟಾಗುವ ಸಾಧ್ಯತೆ ಇರುವ ವ್ಯಕ್ತಿಗಳಲ್ಲಿ ಆಹಾರದ ಮೂಲಕ ಅತಿಯಾದ ಆಕ್ಸಲೇಟ್ ಸೇವನೆಯು ಮೂತ್ರದಲ್ಲಿ ಆಕ್ಸಲೇಟ್ ಮಟ್ಟ ಹೆಚ್ಚಿಸಲು ಕಾರಣವಾಗಬಹುದು. ಆಕ್ಸಲೇಟ್ ಹೊಂದಿರುವ ಪ್ರತಿಯೊಂದು ಆಹಾರವನ್ನೂ ಆಹಾರಕ್ರಮದಿಂದ ಹೊರಗಿಡಬೇಕು ಎನ್ನುವುದಲ್ಲ, ಸಾಮಾನ್ಯವಾಗಿ ಸೇವಿಸುವ ಇತರ ಅನೇಕ ಆಹಾರಗಳಿಗೆ ಹೋಲಿಸಿದರೆ, ಟೊಮೆಟೊದಲ್ಲಿರುವ ಆಕ್ಸಲೇಟ್ ಅಂಶವು ತುಂಬಾ ಕಡಿಮೆಯಿರುತ್ತದೆ.



ಹೆಚ್ಚಿನ ಜನರಿಗೆ, ಸಮತೋಲಿತ ಆಹಾರದ ಭಾಗವಾಗಿ ಸಾಮಾನ್ಯ ಪ್ರಮಾಣದಲ್ಲಿ ತಾಜಾ ಟೊಮೆಟೊವನ್ನು ಸೇವಿಸುವುದರಿಂದ ಮೂತ್ರಪಿಂಡದ ಕಲ್ಲುಗಳು ಉಂಟಾಗುವ ಸಾಧ್ಯತೆ ಕಡಿಮೆ; ಇದು ಕಲ್ಲುಗಳಿಗೆ ನಿರ್ಣಾಯಕ ಅಥವಾ ಪ್ರಾಥಮಿಕ ಕಾರಣವಾಗುವ ಸಾಧ್ಯತೆಯಿಲ್ಲ. ಕೇವಲ ಟೊಮೆಟೊ ಸೇವನೆಗಿಂತ ವ್ಯಕ್ತಿಯ ಒಟ್ಟಾರೆ ಆಹಾರಕ್ರಮವು ಹೆಚ್ಚು ಮುಖ್ಯವಾಗಿದೆ. ಉದಾಹರಣೆಗೆ, ನಿಯಮಿತವಾಗಿ ಟೊಮೆಟೊ ಸೇವಿಸುವ ಸರಾಸರಿ ವ್ಯಕ್ತಿಗೆ ಹೋಲಿಸಿದರೆ, ಬಹಳ ಕಡಿಮೆ ನೀರು ಕುಡಿಯುವ, ಹೆಚ್ಚು ಉಪ್ಪಿರುವ ಆಹಾರ ಮತ್ತು ಸಂಸ್ಕರಿಸಿದ ಆಹಾರಗಳನ್ನು ಹೆಚ್ಚಾಗಿ ಸೇವಿಸುವ ವ್ಯಕ್ತಿಯಲ್ಲಿ ಕಿಡ್ನಿ ಸ್ಟೋನ್ಸ್ ಅಪಾಯವು ಗಮನಾರ್ಹವಾಗಿ ಹೆಚ್ಚಿರುತ್ತದೆ. ಎಲ್ಲಾ ಕಿಡ್ನಿ ಸ್ಟೋನ್ಸ್ ಒಂದೇ ರೀತಿಯಾಗಿರುವುದಿಲ್ಲ.ಕ್ಯಾಲ್ಸಿಯಂ ಆಕ್ಸಲೇಟ್?ನಿಂದ ಸ್ಟೋನ್ಸ್ ನಿರ್ಮಾಣವಾಗುವುದು ಅತ್ಯಂತ ಸಾಮಾನ್ಯವಾಗಿದ್ದರೂ, ಯೂರಿಕ್ ಆಮ್ಲ, ಸ್ಟ್ರುವೈಟ್‌ನಂತಹ ಇತರ ಪ್ರಕಾರದ ಸ್ಟೋನ್ಸ್ ಉಂಟಾಗಬಹುದು. ವ್ಯಕ್ತಿಯು ಹೊಂದಿರುವ ನಿರ್ದಿಷ್ಟ ರೀತಿಯ ಕಿಡ್ನಿ ಸ್ಟೋನ್ಸ್ ಅನುಗುಣವಾಗಿ ಆಹಾರ ಕ್ರಮವನ್ನು ಅನುಸರಿಸುವುದು ತುಂಬಾ ಮುಖ್ಯವಾಗುತ್ತದೆ. ಸ್ಟೋನ್‌ಕಾರಣ. ಇದರಿಂದ ಬೀಜಗಳನ್ನು ತೆಗೆದುಹಾಕುವುದರಿಂದ ಕಿಡ್ನಿ ಸ್ಟೋನ್ ರಚನೆಯನ್ನು ತಡೆಯಬಹುದು ಎಂದು ಹಲವರು ಭಾವಿಸುತ್ತಾರೆ. ಹೆಚ್ಚಿನ ಜನರು ಇಂತಹ ಕ್ರಮಗಳನ್ನು ತೆಗೆದುಕೊಳ್ಳುವ ಅಗತ್ಯವಿಲ್ಲ. ಟೊಮೆಟೊ ಬೀಜಗಳಲ್ಲಿ ಆಕ್ಸಲೇಟ್‌ಗಳು ಇರುವುದು ನಿಜವಾದರೂ ಇವುಗಳನ್ನು ತೆಗೆದುಹಾಕಿದ ಮಾತ್ರಕ್ಕೆ ಉಳಿದ ಟೊಮೆಟೊ ಭಾಗವು 'ಸ್ಟೋನ್ಸ್ ಮುಕ್ತ'ವಾಗುವುದಿಲ್ಲ. ಒಬ್ಬ ವ್ಯಕ್ತಿಯು ಪದೇ ಪದೇ ಕ್ಯಾಲ್ಸಿಯಂ ಆಕ್ಸಲೇಟ್ ಸ್ಟೋನ್ಸ್ ಸಮಸ್ಯೆಯಿಂದ ಬಳಲುತ್ತಿದ್ದರೆ, ವೈದ್ಯರು ಆಹಾರ ತಜ್ಞರು ಅವರಿಗೆ ಆಕ್ಸಲೇಟ್ ಸೇವನೆ ಕಡಿಮೆ ಮಾಡಲು ನಿರ್ದಿಷ್ಟವಾಗಿ ತಿಳಿಸುತ್ತಾರೆ. ತಮ್ಮ ಒಟ್ಟಾರೆ ಆಕ್ಸಲೇಟ್ ಸೇವನೆಯ ಕುರಿತು ವೈದ್ಯರೊಂದಿಗೆ ಚರ್ಚಿಸಬೇಕು. ಪ್ರತಿಯೊಬ್ಬರೂ ಪ್ರತಿ ಟೊಮೆಟೊದಿಂದಲೂ ಬೀಜಗಳನ್ನು ತೆಗೆಯುವ ಅಗತ್ಯವಿಲ್ಲ. ಪ್ರತ್ಯೇಕ ಬೀಜಗಳ ಬಗ್ಗೆ ಚಿಂತಿಸುವ ಬದಲು, ಆಹಾರ ಕ್ರಮದತ್ತ ಗಮನಹರಿಸುವುದು ತುಂಬಾ ಪ್ರಯೋಜನಕಾರಿ. ಟೊಮೆಟೊವನ್ನು ಬೇಯಿಸುವುದು, ವಿವಿಧ ರೂಪಗಳಲ್ಲಿ ಸೇವಿಸುವುದು ಕಿಡ್ನಿ ಸ್ಟೋನ್ಸ್ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳುವುದು ತುಂಬಾ ಮುಖ್ಯವಾಗುತ್ತದೆ. ಅಡುಗೆಯು ಆಹಾರದಲ್ಲಿನ ಪೋಷಕಾಂಶಗಳ ಸಂಯೋಜನೆಯನ್ನು ಬದಲಾಯಿಸುತ್ತದೆ.

ಟೊಮೆಟೊ ಬೇಯಿಸುವುದು ಕಿಡ್ನಿ ಸ್ಟೋನ್ಸ್ ಅಪಾಯವನ್ನು ಸಂಪೂರ್ಣವಾಗಿ ನಿವಾರಿಸುವ ಖಚಿತವಾದ ಮಾರ್ಗವಲ್ಲ. ತಾಜಾ ಟೊಮೆಟೊ, ಬೇಯಿಸಿದ ಟೊಮೆಟೊ ಅಥವಾ ಮನೆಯಲ್ಲಿ ತಯಾರಿಸಿದ ಟೊಮೆಟೊ ಖಾದ್ಯಗಳನ್ನು ಮಿತವಾಗಿ ಆಹಾರದಲ್ಲಿ ಸೇರಿಸಿಕೊಳ್ಳಬಹುದು. ಮನೆಯಲ್ಲಿ ತಯಾರಿಸಿದ ಸರಳ ಟೊಮೆಟೊ ಪಲ್ಯ, ಸಾರು, ಪ್ಯಾಕ್ ಮಾಡಿದ ಸಾಸ್‌ಗಳು, ಇನ್‌ಸ್ಟಂಟ್ ಸೂಪ್‌ಗಳು, ಸಂಸ್ಕರಿಸಿದ ಆಹಾರಗಳಿಗಿಂತ ಬಹಳ ಭಿನ್ನವಾಗಿರುತ್ತದೆ. ಇವುಗಳಲ್ಲಿ ಸೋಡಿಯಂ ಹೆಚ್ಚಿನ ಪ್ರಮಾಣದಲ್ಲಿರುತ್ತದೆ. ಅತಿಯಾದ ಸೋಡಿಯಂ ಸೇವನೆಯು ಮೂತ್ರದ ಮೂಲಕ ಕ್ಯಾಲ್ಸಿಯಂ ಹೊರಹೋಗುವಿಕೆ ಹೆಚ್ಚಿಸುತ್ತದೆ.

ಕ್ಯಾಲ್ಸಿಯಂ ಕಿಡ್ನಿ ಸ್ಟೋನ್ಸ್‌ಗಳಿಗೆ ನೇರ ಕಾರಣವಾಗಿದೆ. ಟೊಮೆಟೊ ಬೇಯಿಸಿದೆಯೇ, ಹಸಿಯಾಗಿದೆಯೇ ಎಂದು ಚಿಂತಿಸುವ ಬದಲು, ಅದರಲ್ಲಿರುವ ಉಪ್ಪಿನಂಶದ ಬಗ್ಗೆ ಗಮನ ಹರಿಸಬೇಕು.

# ಕಿಟೋ ಡಯಟ್ ಅನುಸರಿಸುವುದರಿಂದ ಕ್ಯಾನ್ಸರ್ ಬರದಂತೆ ತಡೆಯಲು ಸಾಧ್ಯವಿದೆಯೇ?

ಪ್ರಸ್ತುತ ದೇಹದ ತೂಕ ಇಳಿಕೆ, ರಕ್ತದಲ್ಲಿನ ಸಕ್ಕರೆ ನಿಯಂತ್ರಣ ಹಾಗೂ ಆರೋಗ್ಯಕ್ಕೆ ಸಂಬಂಧಿಸಿದ ವಿವಿಧ ಆರೋಗ್ಯದ ಸಮಸ್ಯೆಗಳಿಗೆ ಪರಿಹಾರವಾಗಿ ಕೀಟೋ ಡಯಟ್ ಕುರಿತು ವ್ಯಾಪಕವಾಗಿ ಚರ್ಚೆ ನಡೆಯುತ್ತಿದೆ. ಈ ಆಹಾರ ಪದ್ಧತಿಯು ಕಾರ್ಬೋಹೈಡ್ರೇಟ್ ಸೇವನೆಯನ್ನು ತೀವ್ರವಾಗಿ ಕಡಿಮೆ ಮಾಡುವುದನ್ನು ಒಳಗೊಂಡಿರುತ್ತದೆ. ದೇಹವು ಶಕ್ತಿಗಾಗಿ ಮುಖ್ಯವಾಗಿ ಕೊಬ್ಬನ್ನು ಬಳಸಲು ಆರಂಭಿಸುತ್ತದೆ. ದೇಹದ ತೂಕ ಇಳಿಕೆಗೆ ಸಹಾಯ ಮಾಡುತ್ತದೆ.

ಕಿಟೋ ಡಯಟ್‌ನ ಪ್ರಯೋಜನಗಳು ಹಾಗೂ ಸಂಭಾವ್ಯ ಅಪಾಯಗಳು ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗಬಹುದು. ವಿಶೇಷವಾಗಿ ಕ್ಯಾನ್ಸರ್‌ನಂತಹ ಗಂಭೀರ ಕಾಯಿಲೆಗಳಿಗೆ ಈ ವಿಧಾನವು ಚಿಕಿತ್ಸಾ ಆಯ್ಕೆಯಾಗಿ ಕಾರ್ಯ ನಿರ್ವಹಿಸುತ್ತದೆಯೇ ಎಂಬುದರ ಬಗ್ಗೆ ಹಲವು ತಪ್ಪು ಕಲ್ಪನೆಗಳಿವೆ. ಕಿಟೋ ಡಯಟ್ ನಿಖರವಾಗಿ ಹೇಗೆ ಕೆಲಸ ಮಾಡುತ್ತದೆ. ಕ್ಯಾನ್ಸರ್ ಕೋಶಗಳ ಮೇಲೆ ತುಂಬಾ ಪರಿಣಾಮ ಬೀರುತ್ತದೆಯೇ ಹಾಗೂ ವೈದ್ಯಕೀಯ ಸಂಶೋಧನೆಗಳು ತಿಳಿಸುವುದೇನು ಎಂಬುದನ್ನು ತಿಳಿಯೋಣ. ವಾಸ್ತವವಾಗಿ ಆಹಾರ ಪದ್ಧತಿಯು ಏನನ್ನು ಒಳಗೊಂಡಿದೆ, ಕ್ಯಾನ್ಸರ್ ತಡೆಗಟ್ಟುವಲ್ಲಿ ಇದು ನಿಜವಾಗಿಯೂ ಪ್ರಯೋಜನವನ್ನು ನೀಡುತ್ತದೆಯೇ? ಈ ಕುರಿತು ತಜ್ಞರು ತಿಳಿಸುವುದೇನು? ಕಿಟೋ ಅಥವಾ ಕಿಟೋಜೆನಿಕ್ ಡಯಟ್ ಎಂಬುದು ಅತ್ಯಂತ ಕಡಿಮೆ ಕಾರ್ಬೋಹೈಡ್ರೇಟ್ ಹಾಗೂ ಹೆಚ್ಚಿನ ಕೊಬ್ಬಿನ ಸೇವನೆ ಒಳಗೊಂಡಿರುವ ಒಂದು ಆಹಾರ ಪದ್ಧತಿಯಾಗಿದೆ. ಸಾಮಾನ್ಯವಾಗಿ ನಮ್ಮ ದೇಹವು ದೈನಂದಿನ ಶಕ್ತಿಗಾಗಿ ಗ್ಲೂಕೋಸ್ ಬಳಸುತ್ತದೆ. ಈ ಆಹಾರ ಪದ್ಧತಿಯು ಕಾರ್ಬೋಹೈಡ್ರೇಟ್ ಸೇವನೆಯನ್ನು ಕಡಿಮೆ ಮಾಡುವುದರಿಂದ ದೇಹವು ಗ್ಲೂಕೋಸ್ ಬದಲಿಗೆ ಸಂಗ್ರಹವಾಗಿರುವ ಕೊಬ್ಬು, 'ಕಿಟೋನ್'ಗಳನ್ನು ತನ್ನ ಪ್ರಾಥಮಿಕ ಶಕ್ತಿಯ ಮೂಲವಾಗಿ ಬಳಸಲು ಪ್ರಾರಂಭಿಸುತ್ತದೆ. ಕಿಟೋ ಡಯಟ್ ಅನುಸರಿಸಲು ಯಾವೆಲ್ಲಾ ಪ್ಲಾನ್ ಮಾಡಬೇಕು, ನಿರ್ದಿಷ್ಟ ಆಹಾರಗಳನ್ನು ಸೇರಿಸಲಾಗುತ್ತದೆ ಹಾಗೂ ಇತರ ಕೆಲವು ಆಹಾರಗಳನ್ನು ಕಟ್ಟುನಿಟ್ಟಾಗಿ ನಿರ್ಬಂಧಿಸಲಾಗುತ್ತದೆ. ಮೊಟ್ಟೆ, ಮೀನು, ಚಿಕನ್, ಮಾಂಸ, ಆವಕಾಡೊ, ನಟ್ಸ್, ಡ್ರೈಫ್ರೂಟ್ಸ್, ವಿವಿಧ ನಟ್ಸ್, ಆಲಿವ್ ಎಣ್ಣೆ, ಚೀಸ್ ಹಾಗೂ ಪಿಷ್ಟರಹಿತ ಸೊಪ್ಪುಗಳು, ತರಕಾರಿಗಳು (ಪಾಲಕ್, ಬ್ರೊಕೊಲಿ, ಹೂಕೋಸು) ಸೇರಿವೆ. ವೈದ್ಯರ ಮಾರ್ಗದರ್ಶನದಲ್ಲಿ ಕೀಟೋ ಡಯಟ್ ಅನ್ನು ಎಚ್ಚರಿಕೆಯಿಂದ ಪ್ಲಾನ್ ಮಾಡಬೇಕಾಗುತ್ತದೆ. ಇದು ಸಂಸ್ಕರಿಸಿದ ಕಾರ್ಬೋಹೈಡ್ರೇಟ್‌ಗಳ ಬದಲಿಗೆ ಆರೋಗ್ಯಕರ ಪರ್ಯಾಯಗಳನ್ನು ಒಳಗೊಂಡಿರುತ್ತದೆ. ಕೆಲವು ವ್ಯಕ್ತಿಗಳಲ್ಲಿ ತಾತ್ಕಾಲಿಕ ದೇಹದ ತೂಕ ನಷ್ಟ, ರಕ್ತದಲ್ಲಿನ ಸಕ್ಕರೆ ಮಟ್ಟದ ಉತ್ತಮ ನಿಯಂತ್ರಣದಂತಹ ಪ್ರಯೋಜನಗಳಿಗೆ ಕಾರಣವಾಗಬಹುದು. ಈ ಆಹಾರ ಪದ್ಧತಿಯು ಎಲ್ಲರ ಮೇಲೂ ಒಂದೇ ರೀತಿಯ ಪರಿಣಾಮ ಬೀರುವುದಿಲ್ಲ, ಪ್ರತಿಯೊಬ್ಬರಿಗೂ ಒಂದೇ ರೀತಿಯ ಪ್ರಯೋಜನಗಳು ಲಭಿಸುವುದಿಲ್ಲ ಎನ್ನುವುದನ್ನು ಗಮನಿಸಬೇಕಾಗುತ್ತದೆ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 12:00 ರಿಂದ 01:30 |
| ಗುಳಿಕ ಕಾಲ | ಬೆಳಗ್ಗೆ | 10:30 ರಿಂದ 12:00 |
| ಯಮಗಂಡ ಕಾಲ | ಬೆಳಗ್ಗೆ | 09:00 ರಿಂದ 10:30 |

**ಮೇಷ**
ನಿಮ್ಮ ಹಠಾತ್ ಪ್ರವೃತ್ತಿ ನಿಮಗೆ ಗಂಭೀರವಾದ ಆರೋಗ್ಯದ ಸಮಸ್ಯೆಗಳನ್ನು ಉಂಟುಮಾಡಬಹುದು. ನಿಮ್ಮ ಜೀವನದ ಕಳಪೆ ಆರೋಗ್ಯದಿಂದಾಗಿ, ನಿಮ್ಮ ಹಣವನ್ನು ಇಂದು ಖರ್ಚು ಮಾಡಬಹುದು.

**ವೃಷಭ**
ಇಂದು ಯಾವುದೇ ವಿರುದ್ಧ ಲಿಂಗದ ಸಹಾಯದಿಂದ ನೀವು ವ್ಯಾಪರ ಅಥವಾ ಉದ್ಯೋಗದಲ್ಲಿ ಆರ್ಥಿಕ ಲಾಭವನ್ನು ಪಡೆಯುವ ಸಾಧ್ಯತೆ ಇದೆ. ಕುಟುಂಬದ ಸದಸ್ಯರೊಂದಿಗೆ ಶಾಂತ ದಿನವನ್ನು ಆನಂದಿಸಿ

**ಮಿಥುನ**
ಕೆಲವರು ನಿಮಗೆ ಏನನ್ನಾದರೂ ಕಲಿಯಲು ಬಹಳ ವಯಸ್ಸಾಗಿದೆ ಎಂದು ಭಾವಿಸಬಹುದು. ಆದರೆ ಅದು ನಿಜವಲ್ಲ, ಸಕ್ರಿಯ ಮನಸ್ಸಿನಿಂದ ನೀವು ಹೊಸ ವಿಷಯ ಸುಲಭವಾಗಿ ಕಲಿಯುವಿರಿ.

**ಕರ್ಕಾಟಕ**
ಅಶಕ್ತ ದೇಹ ಮನಸ್ಸನ್ನು ದುರ್ಬಲಗೊಳಿಸುವುದರಿಂದ ನಿಮ್ಮ ಶಕ್ತಿಯನ್ನು ಮರಳಿ ಪಡೆಯಲು ಸಂಪೂರ್ಣ ವಿಶ್ರಾಂತಿ ತೆಗೆದುಕೊಳ್ಳಿ. ಇಂದು ನೀವು ನಿಮ್ಮ ಮಕ್ಕಳ ಕಾರಣದಿಂದ ಆರ್ಥಿಕ ಲಾಭ ಪಡೆಯುವ ಸಾಧ್ಯತೆ ಇದೆ.

**ಸಿಂಹ**
ಇಂದು ಆರೋಗ್ಯ ಪರಿಪೂರ್ಣವಾಗಿರುತ್ತದೆ. ಹೊಸ ಆರ್ಥಿಕ ಒಪ್ಪಂದ ಕುದುರಿ್ತ ಹೊಸ ಹಣ ಬರುತ್ತದೆ. ನಿಮ್ಮ ಸಂಗಾತಿಯೊಡನೆ ಒಂದು ಉತ್ತಮ ತಿಳುವಳಿಕೆ ಮನೆಯಲ್ಲಿ ಸುಖ, ಸಂತೋಷ ಸಮೃದ್ಧಿ ತರುತ್ತದೆ.

**ಕನ್ಯಾ**
ನೀವು ಯಾರನ್ನಾದರೂ ಮರಳಿ ಎರವಲು ಕೇಳುತ್ತಿದ್ದರೆ ಮತ್ತು ಇಲ್ಲಿಯವರೆಗೆ ಅವರು ನಿಮ್ಮ ಮಾತನ್ನು ತಪ್ಪಿಸುತ್ತಿದ್ದರೆ, ಇಂದು ಅವರು ಮಾತನಾಡದೆ ಹಣವನ್ನು ನಿಮಗೆ ಹಿಂದಿರುಗಿಸಬಹುದು.

**ತುಲಾ**
ಧ್ಯಾನ ಮತ್ತು ಯೋಗವನ್ನು ಆಧ್ಯಾತ್ಮಿಕ ಹಾಗೂ ಭೌತಿಕ ಲಾಭಗಳಿಗಾಗಿ ಆಚರಿಸಬೇಕು. ಎಲ್ಲಾ ಬದ್ಧತೆಗಳು ಮತ್ತು ಆರ್ಥಿಕ ವ್ಯವಹಾರಗಳನ್ನು ಎಚ್ಚರಿಕೆಯಿಂದ ನಿರ್ವಹಿಸಬೇಕು.

**ವೃಶ್ಚಿಕ**
ನಿಮ್ಮ ಅಧಿಕ ಚೈತನ್ಯದ ಹೊರತಾಗಿಯೂ ನೀವು ಇಂದು ನಿಮ್ಮೊಡನೆ ಇರಲಾರದ ಯಾರನ್ನಾದರೂ ನೆನಪಿಸಿಕೊಳ್ಳುತ್ತಿದ್ದೀರಿ. ಇತರರ ಮೇಲೆ ಪ್ರಭಾವ ಬೀರಲು ತುಂಬಾ ವೆಚ್ಚ ಮಾಡಬೇಡಿ.

**ಧನಸ್ಸು**
ವಿಜಯ ನಿಮಗೆ ಪ್ರಚಂಡ ಸಂತೋಷ ನೀಡುತ್ತದೆ. ನಿಮ್ಮ ಸಂತೋಷ ಅನುಭವಿಸಲು ನಿನಿಮ್ಮ ಸ್ನೇಹಿತರ ಜೊತೆ ಹಂಚಿಕೊಳ್ಳಬಹುದು. ವಿಪರೀತವಾಗಿ ಖರ್ಚು ನಿಲ್ಲಿಸಿ, ನಿಮ್ಮ ಹಣವು ನಿಮ್ಮ ಕೆಲಸಕ್ಕೆ ಬರುತ್ತದೆ.

**ಮಕರ**
ನಿಮ್ಮ ಅಪಾರ ವಿಶ್ವಾಸ ಮತ್ತು ಸುಲಭದ ಕೆಲಸದ ವೇಳಾಪಟ್ಟಿ ಇಂದು ವಿಶ್ರಾಂತಿಗೆ ಸಾಕಷ್ಟು ಸಮಯ ನೀಡುತ್ತದೆ. ಹೊಸ ಆರ್ಥಿಕ ಒಪ್ಪಂದ ಕುದುರಿಸಲಾಗುತ್ತದೆ ಮತ್ತು ಹೊಸ ಹಣ ಬರುತ್ತದೆ.

**ಕುಂಭ**
ವಯಸ್ಸಾದವರು ತಮ್ಮ ಆರೋಗ್ಯವನ್ನು ನೋಡಿಕೊಳ್ಳಬೇಕು. ನಿಮ್ಮ ಖರ್ಚುಗಳನ್ನು ನಿಯಂತ್ರಿಸಲು ಮತ್ತು ಕೇವಲ ಅಗತ್ಯವಾದ ವಸ್ತುಗಳ ಮಾತ್ರ ಇಂದು ಖರೀದಿಸಲು ಪ್ರಯತ್ನಿಸಿ.

**ಮೀನ**
ನಿಮ್ಮ ಶಕ್ತಿಯ ಮಟ್ಟ ಹೆಚ್ಚಿರುತ್ತದೆ. ತಮ್ಮ ವ್ಯಾಪರಕ್ಕಾಗಿ ಮನೆಯಿಂದ ಹೊರಗೆ ಹೋಗಿರುವ ವ್ಯಾಪಾರಿಗಳು, ತನ್ನ ಹಣವನ್ನು ಜಾಗರೂಕವಾಗಿಡಿ, ಹಣದ ಕಳ್ಳತನವಾಗುವ ಸಾಧ್ಯತೆ ಇದೆ.


ಉದಯವಾಹಿನಿ ಚಿತ್ರ

## ವಾಲಿಬಾಲ್‌ನಲ್ಲಿ ವಿಭಾಗ ಮಟ್ಟಕ್ಕೆ ಆಯ್ಕೆ

**ಉದಯವಾಹಿನಿ, ಮಸ್ಕಿ**

ಜಿಲ್ಲಾ ಮಟ್ಟದ 17 ವರ್ಷ ವಯೋಮಿತಿಯ ಬಾಲಕರ ವಾಲಿಬಾಲ್ ಟೂರ್ನಿಯಲ್ಲಿ ಮಸ್ಕಿ ತಾಲ್ಲೂಕನ್ನು ಪ್ರತಿನಿಧಿಸಿದ ನರಸನಗೌಡ ಪಾಟೀಲ್ ಸ್ಮಾರಕ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ವಿದ್ಯಾರ್ಥಿಗಳು ಜಿಲ್ಲಾ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದು ಗುಲ್ಬರ್ಗ ವಿಭಾಗ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರ ಕಚೇರಿ ರಾಯಚೂರು , ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ ರಾಯಚೂರು, ಸೋಮವಾರ ಮಹಾತ್ಮ ಗಾಂಧಿ ಕ್ರೀಡಾಂಗಣ ರಾಯಚೂರು ನಡೆದಿತ್ತು. ಸಂಸ್ಥೆಯ ದೈಹಿಕ ಶಿಕ್ಷಣ ಶಿಕ್ಷಕ ಮರಿಬಸವ ಕೊಳಬಾಳ, ಕುಮಾರ ಪ್ರಶಾಂತ್ ನಾಯಕ ತರಬೇತಿ ನೀಡಿದ್ದರು ಎಂದು ಮುಖ್ಯ ಗುರುಗಳಾದ ಮಂಜುನಾಥ್ ವಡ್ಡೆ ತಿಳಿಸಿದ್ದಾರೆ. ಈ ವಿದ್ಯಾರ್ಥಿಗಳಿಗೆ ಮತ್ತು ತರಬೇತಿಗೊಳಿಸಿದ ದೈಹಿಕಶಿಕ್ಷಣ ಶಿಕ್ಷಕರಿಗೆ ಶಾಲೆಯ ಅಧ್ಯಕ್ಷರಾದ ಪ್ರತಾಪ್ ಗೌಡ ಪಾಟೀಲ್, ಉಪಾಧ್ಯಕ್ಷರಾದ ಪ್ರಕಾಶ್ ಧಾರಿವಾಲ್ ಹಾಗೂ ಆಡಳಿತ ಮಂಡಳಿಯ ಸದಸ್ಯರು, ಮುಖ್ಯೋಪಾಧ್ಯಾಯರು, ಶಿಕ್ಷಕ ವೃಂದ, ಮಸ್ಕಿ ನಗರದ ದೈಹಿಕ ಶಿಕ್ಷಣ ಶಿಕ್ಷಕರು, ಸಂಪನ್ಮೂಲ ಅಧಿಕಾರಿಗಳು, ಕ್ರೀಡಾಭಿಮಾನಿಗಳು ಅಭಿನಂದನೆ ಸಲ್ಲಿಸಿದ್ದಾರೆ.

## ಕೃಷಿ ಇಲಾಖೆಯಿಂದ ಬಿತ್ತನೆ ಬೀಜ ವಿತರಣೆ

**ಉದಯವಾಹಿನಿ, ಚಿತ್ತಾಪುರ**

ಪಟ್ಟಣದ ರೈತ ಸಂಪರ್ಕ ಕೇಂದ್ರದ ಆವರಣದಲ್ಲಿ ಕೃಷಿ ಇಲಾಖೆ ಸಹಯೋಗದಲ್ಲಿ ಹಿಂಗಾರು ಹಂಗಾಮಿನ ಬಿತ್ತನೆ ಬೀಜ ವಿತರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.



ನಂತರ ಕೃಷಿಕ ಸಮಾಜದ ತಾಲ್ಲೂಕು ಅಧ್ಯಕ್ಷ ನಾಗರೆಡ್ಡಿ ಗೋಪಸೇನ್ ಮಾತನಾಡಿ, ರೈತರು ರಿಯಾಯಿತಿ ಬೀಜ ಪಡೆದು ತೇವಾಂಶ ನೋಡಿಕೊಂಡು ಬಿತ್ತನೆ ಮಾಡಬೇಕು. ಹನಿ ನೀರಾವರಿ ಯೋಜನೆಗಳ ಸದುಪಯೋಗ ಮಾಡಿಕೊಳ್ಳಬೇಕು ಎಂದು ಅವರು ಕರೆ ನೀಡಿದರು. ಕಾರ್ಯಕ್ರಮದಲ್ಲಿ ರೈತರಿಗೆ ಅಗತ್ಯವಿರುವ ಬಿತ್ತನೆ ಬೀಜದ ಚೀಲಗಳನ್ನು ವಿತರಿಸಲಾಯಿತು. ಕೃಷಿ ಇಲಾಖೆಯ ಅಧಿಕಾರಿಗಳು ಹಾಗೂ ರೈತ ಮುಖಂಡರು ಕಾರ್ಯಕ್ರಮದಲ್ಲಿ ಭಾಗವಹಿಸಿ, ರೈತರಿಗೆ ಗುಣಮಟ್ಟದ ಬೀಜ ಹಾಗೂ ಕೃಷಿಗೆ ಸಂಬಂಧಿಸಿದ ಅಗತ್ಯ ಮಾಹಿತಿ ಒದಗಿಸುವ ಕುರಿತು ಮಾತನಾಡಿದರು. ಕೃಷಿ ಚಟುವಟಿಕೆಗಳಿಗೆ ಸಮಯೋಚಿತವಾಗಿ ಬೀಜ ಸೇರಿದಂತೆ ಅಗತ್ಯ ಕೃಷಿ ಪರಿಕರಗಳು ದೊರೆಯುವುದರಿಂದ ರೈತರಿಗೆ ಅನುಕೂಲವಾಗಲಿದೆ. ರೈತರು ಇಲಾಖೆಯ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಂಡು ವೈಜ್ಞಾನಿಕ ಪದ್ಧತಿಯಲ್ಲಿ ಕೃಷಿ ಕೈಗೊಳ್ಳುವಂತೆ ಅಧಿಕಾರಿಗಳು ತಿಳಿಸಿದರು.

### ಹುಬ್ಬಳ್ಳಿಯಲ್ಲಿ ಕಬ್ಬು ಬೆಳೆಗಾರರು ಹಾಗೂ ರೈತರ ಬೃಹತ್ ಪ್ರತಿಭಟನೆ ನಡೆಯುತ್ತಿರುವ ಬೆನ್ನಲ್ಲೇ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಪ್ರತಿಕ್ರಿಯಿಸಿದ್ದಾರೆ

# ಕಬ್ಬು ಬೆಳೆಗಾರರ ಹಿತಾಸಕ್ತಿ ಕಾಯ್ದುಕೊಳ್ಳಲು ಮೋದಿ ಸರ್ಕಾರ ಬದ್ಧ

**ಉದಯವಾಹಿನಿ, ಹುಬ್ಬಳ್ಳಿ**

ಕಬ್ಬು ಬೆಳೆಗಾರರ ಹಿತಾಸಕ್ತಿ ಕಾಯ್ದುಕೊಳ್ಳಲು ಕೇಂದ್ರ ಸರ್ಕಾರ ಬದ್ಧವಾಗಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಹೇಳಿದ್ದಾರೆ. ಹುಬ್ಬಳ್ಳಿಯಲ್ಲಿ ಕಬ್ಬು ಬೆಳೆಗಾರರು ಹಾಗೂ ರೈತರು ನಡೆಸುತ್ತಿರುವ ಬೃಹತ್ ಪ್ರತಿಭಟನೆ ಹಿನ್ನೆಲೆಯಲ್ಲಿ ಎಕ್ಸ್‌ನಲ್ಲಿ ಸಂದೇಶ ಹಂಚಿಕೊಂಡಿರುವ ಅವರು, ರೈತರ ಸಮಸ್ಯೆ, ಗೊಂದಲ ಹಾಗೂ ಬೇಡಿಕೆಗಳ ಕುರಿತು ಸುದೀರ್ಘ ಚರ್ಚೆಗೆ ರೈತ ಮುಖಂಡರು ಮತ್ತು ಹೋರಾಟಗಾರರಿಗೆ ಮುಕ್ತ ಆಹ್ವಾನ ನೀಡಿದ್ದಾರೆ. 2026ರ ಫೆಬ್ರವರಿಯಲ್ಲಿ ರೈತ ಮುಖಂಡರು ತಮ್ಮನ್ನು ಭೇಟಿಯಾಗಿ ಕಬ್ಬಿನ ಎಫ್‌ಆರ್‌ಪಿ (ನ್ಯಾಯಯುತ ಮತ್ತು ಲಾಭದಾಯಕ ಬೆಲೆ) ಹೆಚ್ಚಿಸುವಂತೆ ಮನವಿ ಮಾಡಿದ್ದರು.

> 1. ರೈತರನ್ನು ದೆಹಲಿಗೆ ಆಹ್ವಾನಿಸಿದ ಜೋಶಿ
> 2. ರೈತರ ಹಿತಾಸಕ್ತಿ ಕಾಪಾಡುವುದೇ ಆದ್ಯತೆ
> 3. ಎಂಎಸ್‌ಪಿ ಹೆಚ್ಚಿಸಲು ರೈತರ ಆಗ್ರಹ

ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಪ್ರತಿ ವರ್ಷ ಎಫ್‌ಆರ್‌ಪಿ ಹೆಚ್ಚಿಸುತ್ತಿದ್ದು, ಮೇ ತಿಂಗಳಲ್ಲಿ ಅದನ್ನು 365 ರೂ.ಗೆ ಹೆಚ್ಚಿಸಲಾಗಿದೆ ಎಂದು ಪ್ರಲ್ಹಾದ್ ಜೋಶಿ ಹೇಳಿದ್ದಾರೆ.

ಎಫ್‌ಆರ್‌ಪಿ ನಿಗದಿ ಮಾಡುವಾಗ ಬೆಲೆ ನಿಗದಿ ಸಮಿತಿ ಹಾಗೂ ರಾಜ್ಯ ಸರ್ಕಾರದ ಕಬ್ಬು ಆಯುಕ್ತರ ವರದಿ ಮತ್ತು ಶಿಫಾರಸುಗಳನ್ನು ಪರಿಗಣಿಸಲಾಗುತ್ತದೆ ಎಂದು ಅವರು ತಿಳಿಸಿದ್ದಾರೆ. ಮೇ ತಿಂಗಳ ಬಳಿಕ ರೈತರಿಂದ ತಮ್ಮನ್ನು ಭೇಟಿಯಾಗುವಂತೆ ಯಾವುದೇ ಮನವಿ ಬಂದಿಲ್ಲ ಎಂದಿರುವ ಜೋಶಿ, ರೈತರ ಮನವಿಯನ್ನು ಸರ್ಕಾರ ಕಡೆಗಣಿಸಿದೆ


ಉದಯವಾಹಿನಿ ಚಿತ್ರ

ಎಂಬ ಭಾವನೆ ಇದ್ದರೆ ಅದಕ್ಕೆ ಸ್ಪಷ್ಟನೆ ನೀಡುವುದಾಗಿ ಹೇಳಿದ್ದಾರೆ.

ಹುಬ್ಬಳ್ಳಿಯ ಚನ್ನಮ್ಮ ವೃತ್ತದಲ್ಲಿ ಕಬ್ಬು ಬೆಳೆಗಾರರು ಹಾಗೂ ರೈತರು ಬೃಹತ್ ಪ್ರತಿಭಟನೆ ನಡೆಸುತ್ತಿದ್ದಾರೆ. ರಾಜ್ಯದ ವಿವಿಧ ಭಾಗಗಳಷ್ಟೇ ಅಲ್ಲದೆ ದೇಶದ ವಿವಿಧೆಡೆಯಿಂದಲೂ ರೈತರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದಾರೆ. ಸಕ್ಕರೆಯ ಎಂಎಸ್‌ಪಿಯನ್ನು ಪ್ರತಿ ಕೆಜಿಗೆ 60ಕ್ಕೆ ಹೆಚ್ಚಿಸಬೇಕು. ಕಬ್ಬಿನ ಎಫ್‌ಆರ್‌ಪಿಯನ್ನು 5,500ಕ್ಕೆ ನಿಗದಿ ಮಾಡಬೇಕು. ಸ್ವಾಮಿನಾಥನ್ ವರದಿ ಜಾರಿ ಸೇರಿದಂತೆ ಹಲವು ಬೇಡಿಕೆಗಳನ್ನು ಈಡೇರಿಸಬೇಕು ಎಂದು ರೈತರು ಆಗ್ರಹಿಸಿದ್ದಾರೆ.

ರೈತ ಮುಖಂಡ ಚೂನಪ್ಪ ಪೂಜಾರಿ ಮಾತನಾಡಿ, ಸಕ್ಕರೆಯ ಎಂಎಸ್‌ಪಿ ಹೆಚ್ಚಿಸಬೇಕು ಎಂದು ಆಗ್ರಹಿಸಿದ್ದಾರೆ. ಸಕ್ಕರೆಯ ಎಂಎಸ್‌ಪಿ ಹೆಚ್ಚಾದರೆ ಕಬ್ಬಿನ ಬೆಲೆಯೂ ಹೆಚ್ಚಾಗುತ್ತದೆ. ಕೇಂದ್ರ ಸರ್ಕಾರ ಈ ಬಗ್ಗೆ ಶೀಘ್ರ ಕ್ರಮ ಕೈಗೊಳ್ಳಬೇಕು ಎಂದು ಹೇಳಿದ್ದಾರೆ. ಸರ್ಕಾರ ನಿರ್ಧಾರ ಕೈಗೊಳ್ಳುವವರೆಗೆ ಹುಬ್ಬಳ್ಳಿ ಬಿಟ್ಟು ಹೋಗುವುದಿಲ್ಲ ಎಂದು ಅವರು ಹೇಳಿದ್ದಾರೆ. ದೆಹಲಿಗೆ ತೆರಳಿ ಸಭೆ ನಡೆಸುವುದಕ್ಕಿಂತ ಪ್ರಧಾನಿ ನರೇಂದ್ರ ಮೋದಿ ಚಿವ ಸಂಪುಟ ಸಭೆ ನಡೆಸಿ ರೈತರ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಒತ್ತಾಯಿಸಿದ್ದಾರೆ.

ಹುಬ್ಬಳ್ಳಿ–ಧಾರವಾಡ ನಗರ ಪೊಲೀಸ್ ಆಯುಕ್ತ ಭೂಷಣ್ ಬೋರಸೆ ಅವರು ರೈತ ಮುಖಂಡರಾದ ಶಶಿಕಾಂತ ಗುರೂಜಿ ಮತ್ತು ಚೂನಪ್ಪ ಪೂಜಾರಿ ಅವರನ್ನು ಭೇಟಿಯಾಗಿ ಪ್ರತಿಭಟನೆ ಕೈಬಿಡುವಂತೆ ಮನವೊಲಿಸಲು ಪ್ರಯತ್ನಿಸಿದ್ದಾರೆ. ಆದರೆ ಬೇಡಿಕೆಗಳು ಈಡೇರುವವರೆಗೆ ಪ್ರತಿಭಟನೆ ಕೈಬಿಡುವುದಿಲ್ಲ ಎಂದು ರೈತ ಮುಖಂಡರು ಸ್ಪಷ್ಟಪಡಿಸಿದ್ದಾರೆ. ಕೇಂದ್ರ ಸರ್ಕಾರ ತಮ್ಮ ಬೇಡಿಕೆಗಳ ಕುರಿತು ನಿರ್ಧಾರ ಕೈಗೊಳ್ಳಬೇಕು. ಇಲ್ಲದಿದ್ದರೆ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸುವುದಾಗಿ ರೈತರು ಎಚ್ಚರಿಕೆ ನೀಡಿದ್ದಾರೆ.

> ಕಬ್ಬು ಬೆಳೆಗಾರರ ಹಿತಾಸಕ್ತಿ ಕಾಯ್ದುಕೊಳ್ಳಲು ಕೇಂದ್ರ ಸರ್ಕಾರ ಹಲವು ಬದಲಾವಣೆಗಳನ್ನು ತಂದಿದೆ. ಇದೀಗ ಕಬ್ಬು ಬೆಳೆಗಾರರಲ್ಲಿ ಉಂಟಾಗಿರುವ ಗೊಂದಲ, ಸಮಸ್ಯೆಗಳು ಹಾಗೂ ಇತರ ವಿಷಯಗಳ ಕುರಿತು ಸುದೀರ್ಘವಾಗಿ ಚರ್ಚಿಸಲು ಸರ್ಕಾರ ಸಿದ್ಧವಿದೆ.
> – ಪ್ರಲ್ಹಾದ್ ಜೋಶಿ, ಕೇಂದ್ರ ಸಚಿವ

### ಸಮಸ್ಯೆ ಬಗೆಹರಿಸಲಾಗುವುದು

**ಪ್ರತಿ ವರ್ಷದಂತೆ ಈ ಬಾರಿಯೂ ಸೂಕ್ತ ಬೆಲೆ ನೀಡಲಾಗುವುದು ಎಂದು ತಿಳಿಸಿರುವ ಅವರು, ರೈತ ಮುಖಂಡರು ಮತ್ತು ಹೋರಾಟಗಾರರು ನವದೆಹಲಿಗೆ ಬಂದರೆ ಗೌರವದಿಂದ ಸ್ವಾಗತಿಸಿ, ಸಂಬಂಧಪಟ್ಟವರೊಂದಿಗೆ ಸಭೆ ನಡೆಸಿ ಸಮಸ್ಯೆಗಳನ್ನು ಆಲಿಸಲಾಗುವುದು ಎಂದು ಹೇಳಿದ್ದಾರೆ.**

## ಅಣೆಕಟ್ಟೆಗಳ ನೀರು ಮಿತವಾಗಿ ಬಳಸಿ: ಸಚಿವ ಸತೀಶ ಜಾರಕಿಹೊಳಿ


ಉದಯವಾಹಿನಿ ಚಿತ್ರ

**ಉದಯವಾಹಿನಿ, ಬೆಳಗಾವಿ**

ಪ್ರಸಕ್ತ ಬರ ಪರಿಸ್ಥಿತಿ ಗಮನದಲ್ಲಿ ಇಟ್ಟುಕೊಂಡು ಜಿಲ್ಲೆಯ ಆಣೆಕಟ್ಟುಗಳಲ್ಲಿ ಲಭ್ಯವಿರುವ ನೀರನ್ನು ಕುಡಿಯುವ ನೀರಿನ ಅಗತ್ಯತೆಗಳಿಗೆ ಸಮರ್ಪಕವಾಗಿ ಬಳಸಿಕೊಳ್ಳಬೇಕು. ಜನ–ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು' ಎಂದು ಲೋಕೋಪಯೋಗಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಅಧಿಕಾರಿಗಳಿಗೆ ಸೂಚಿಸಿದರು.ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ನಡೆದ ಘಟಪ್ರಭಾ ನೀರಾವರಿ ಸಲಹಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, 'ನೀರಿನ ಲಭ್ಯತೆ ಹಾಗೂ ಬಳಕೆಯ ಕುರಿತು ಅಧಿಕಾರಿಗಳು ನಿರಂತರವಾಗಿ ನಿಗಾ ವಹಿಸಬೇಕು. ನೀರಾವರಿ ಹಾಗೂ ಕುಡಿಯುವ ನೀರಿನ ಅಗತ್ಯಗಳನ್ನು ಸಮನ್ವಯಗೊಳಿಸಿ, ಲಭ್ಯವಿರುವ ನೀರಿನ ಸಮರ್ಪಕ ನಿರ್ವಹಣೆಗೆ ಆದ್ಯತೆ ನೀಡಬೇಕು' ಎಂದರು.

**ಶಾಸಕರೊಂದಿಗೆ ನಿಯಮಿತ ಸಭೆ ನಡೆಸಿ:** 'ಹೆಸ್ಕಾಂ ಹಾಗೂ ನೀರಾವರಿ ಇಲಾಖೆಯ ಅಧಿಕಾರಿಗಳು ಸಂಬಂಧಿಸಿದ ಶಾಸಕರೊಂದಿಗೆ ನಿಯಮಿತವಾಗಿ ಸಭೆ ನಡೆಸಿ, ಆಯಾ ಪ್ರದೇಶಗಳಲ್ಲಿನ ನೀರಿನ ಲಭ್ಯತೆ, ನೀರಾವರಿ ವ್ಯವಸ್ಥೆ ಹಾಗೂ ವಿದ್ಯುತ್ ಪೂರೈಕೆ ಪರಿಸ್ಥಿತಿಯ ಕುರಿತು ಸಮಗ್ರ ಮಾಹಿತಿ ನೀಡಬೇಕು' ಎಂದು ಸಚಿವರು ಸೂಚಿಸಿದರು. "ನೀರಿನ ಹಂಚಿಕೆ, ಕಾಲುವೆಗಳಿಗೆ ನೀರು ಹರಿಸುವಿಕೆ ಹಾಗೂ ರೈತರಿಗೆ ಎದುರಾಗುವ ಸಮಸ್ಯೆಗಳ ಕುರಿತು ಸ್ಥಳೀಯ ಜನಪ್ರತಿನಿಧಿಗಳೊಂದಿಗೆ ಸಮನ್ವಯದಿಂದ ಕಾರ್ಯ ನಿರ್ವಹಿಸಬೇಕು. ಯಾವುದೇ ಸಮಸ್ಯೆ ಎದುರಾದಾಗ ತ್ವರಿತವಾಗಿ ಪರಿಹಾರ ಕಂಡುಕೊಳ್ಳುವಂತೆ' ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಬೀಳಗಿ ಶಾಸಕ ಜೆ.ಟಿ ಪಾಟೀಲ ಮಾತನಾಡಿ, 'ಕಾಲುವೆಗಳಿಗೆ ನೀರು ಹರಿಸುವ ಸಂದರ್ಭದಲ್ಲಿ ಕಾಲುವೆ ಮಾರ್ಗದಲ್ಲಿನ ಅನಧಿಕೃತ ಅಥವಾ ಅಡ್ಡಿಪಡಿಸುವ ರೀತಿಯ ವಿದ್ಯುತ್ ಬಳಕೆಯಿಂದ ನೀರಿನ ಹರಿವಿಗೆ ತೊಂದರೆ ಆಗದಂತೆ ಕ್ರಮ ವಹಿಸಬೇಕು.

## ಚುನಾವಣಾ ಆಯೋಗ ಜನತೆಗೆ ಉತ್ತರಿಸಲಿ

**ಉದಯವಾಹಿನಿ, ಕಲಬುರಗಿ**

ಚುನಾವಣಾ ಆಯೋಗದ ಕಾರ್ಯನಿರ್ವಹಣೆ ಮತ್ತು ನಿರ್ಧಾರ ಪ್ರಕ್ರಿಯೆ ಕುರಿತು ಸಾರ್ವಜನಿಕ ವಲಯದಲ್ಲಿ ಗಂಭೀರ ಪ್ರಶ್ನೆಗಳು ಎದ್ದಿರುವ ಹಿನ್ನೆಲೆಯಲ್ಲಿ, ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರು ಜನತೆಗೆ ಸ್ಪಷ್ಟ ಉತ್ತರ ನೀಡಬೇಕು ಎಂದು ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ. ಅಜಯ್ ಧರ್ಮಸಿಂಗ್ ಆಗ್ರಹಿಸಿದರು.



ಸೋಮವಾರ ಬೆಂಗಳೂರಿನಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ಚುನಾವಣಾ ಆಯೋಗದಂತಹ ಸಂವಿಧಾನಾತ್ಮಕ ಸಂಸ್ಥೆಯ ಕಾರ್ಯನಿರ್ವಹಣೆಯಲ್ಲಿ ಪಾರದರ್ಶಕತೆ, ಒಮ್ಮತ ಮತ್ತು ಸಾರ್ವಜನಿಕ ವಿಶ್ವಾಸ ಅತ್ಯಂತ ಮುಖ್ಯ ಎಂದು ಹೇಳಿದರು. "ಇದು ಯಾವುದೋ ಒಂದು ಪಕ್ಷದ ಪ್ರಶ್ನೆಯಾಗಿ ಉಳಿದಿಲ್ಲ. ಚುನಾವಣಾ ಪ್ರಕ್ರಿಯೆಯ ಮೇಲಿನ ವಿಶ್ವಾಸಕ್ಕೆ ಸಂಬಂಧಿಸಿದ ವಿಷಯವಾಗಿದೆ. ಆಯೋಗದೊಳಗಿನ ನಿರ್ಧಾರ ಪ್ರಕ್ರಿಯೆಯ ಕುರಿತು ಪ್ರಶ್ನೆಗಳು ಎದ್ದಿರುವಾಗ, ಜನತೆಗೆ ಸ್ಪಷ್ಟನೆ ನೀಡುವುದು ಮುಖ್ಯ ಚುನಾವಣಾ ಆಯುಕ್ತರ ಜವಾಬ್ದಾರಿ," ಎಂದು ಡಾ. ಅಜಯ್ ಧರ್ಮಸಿಂಗ್ ಹೇಳಿದರು. ಇತ್ತೀಚಿನ ಮಾಧ್ಯಮ ವರದಿಗಳು, ಚುನಾವಣಾ ಆಯೋಗದ ಇಬ್ಬರು ಸದಸ್ಯರು ಕೆಲವು ಕ್ರಮಗಳ ಕುರಿತು ಆಕ್ಷೇಪ ದಾಖಲಿಸಿದ್ದರೆಂದು ಹೇಳಿವೆ. ಆದರೆ ಚುನಾವಣಾ ಆಯೋಗವು ಅಂತಿಮ ನಿರ್ಧಾರಗಳು ಪೂರ್ಣ ಆಯೋಗದ ಏಕಮತದ ತೀರ್ಮಾನಗಳಾಗಿವೆ ಮತ್ತು ಆಂತರಿಕ ಭಿನ್ನಾಭಿಪ್ರಾಯಗಳು ಚರ್ಚಾ ಪ್ರಕ್ರಿಯೆಯ ಭಾಗವೆಂದು ಸ್ಪಷ್ಟಪಡಿಸಿದೆ. ಈ ಹಿನ್ನೆಲೆಯಲ್ಲಿ ಡಾ. ಅಜಯ್ ಧರ್ಮಸಿಂಗ್, "ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾವುದೇ ಸಂಸ್ಥೆಯೂ ಪ್ರಶ್ನೆಗಳಿಗೆ ಮೀರಿದುದಲ್ಲ. ಜನರು ಕೇಳುತ್ತಿರುವ ಪ್ರಶ್ನೆಗಳಿಗೆ ಉತ್ತರ ಸಿಗಬೇಕು ಮತ್ತು ಚುನಾವಣಾ ಪ್ರಕ್ರಿಯೆಯ ಮೇಲಿನ ವಿಶ್ವಾಸಕ್ಕೆ ಧಕ್ಕೆಯಾಗದಂತೆ ಆಯೋಗ ನಡೆದುಕೊಳ್ಳಬೇಕು" ಎಂದರು.


ಉದಯವಾಹಿನಿ ಚಿತ್ರ

## ನಗರಸಭೆ ಕಚೇರಿಗೆ ಮುತ್ತಿಗೆ ಯತ್ನ

**ಉದಯವಾಹಿನಿ, ಗದಗ**

ಗದಗ–ಬೆಟಗೇರಿ ಅವಳಿ ನಗರಕ್ಕೆ ಸಮರ್ಪಕವಾಗಿ ನೀರು ಪೂರೈಕೆ ಮಾಡುವಂತೆ ಆಗ್ರಹಿಸಿ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಗದಗ–ಬೆಟಗೇರಿ ನಗರಸಭೆ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದರು. ಮಹಾತ್ಮ ಗಾಂಧಿ ವೃತ್ತದಲ್ಲಿ ಎರಡು ತಾಸು ಪ್ರತಿಭಟನೆ ನಡೆಸಿದ ಬಳಿಕ ನಗರಸಭೆ ಕಚೇರಿಯತ್ತ ನುಗ್ಗಿದರು. ಮುಂಜಾಗ್ರತಾ ಕ್ರಮವಾಗಿ ಪೊಲೀಸರು, ಕಚೇರಿಯ ಗೇಟ್ ಬಂದ್ ಮಾಡಿ, ಬ್ಯಾರಿಕೇಡ್ ಅಳವಡಿಸಿದ್ದರು. ಪೊಲೀಸರನ್ನೂ ನೂಕಿ, ಬ್ಯಾರಿಕೇಡ್ ಉರುಳಿಸಿದ ಬಿಜೆಪಿಗರು ನಗರಸಭೆ ಕಚೇರಿಯ ಗೇಟ್ ಹತ್ತಿ ಒಳನುಗ್ಗಲು ಯತ್ನಿಸಿದರು. ಈ ವೇಳೆ ವಾಗ್ವಾದ, ನೂಕಾಟ ಉಂಟಾಯಿತು. ಬಳಿಕ, ಪಕ್ಷದ ಮುಖಂಡರ ಸೂಚನೆ ಮೇರೆಗೆ ಹಿಂದೆ ಸರಿದರು. ಜಿಲ್ಲಾಧಿಕಾರಿ ಅವರು ಪ್ರತಿಭಟನಕಾರರು ಇದ್ದ ಕಡೆ ಬಂದು ಮನವಿ ಸ್ವೀಕರಿಸಿದರು. ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವ ಕಾರಣ, ಯಾವುದೇ ಭರವಸೆ ನೀಡಲಾಗದು ಎಂದು ತಿಳಿಸಿದರು. ಒಂದು ವಾರದಲ್ಲಿ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸದಿದ್ದಲ್ಲಿ ಹೋರಾಟ ಮುಂದುವರಿಸಲಾಗುವುದು ಎಂಬ ಎಚ್ಚರಿಕೆ ನೀಡಲಾಯಿತು.

## ಪೌರಕಾರ್ಮಿಕರು ಸ್ವಚ್ಛ ನಗರದ ರೂವಾರಿಗಳು

**ಉದಯವಾಹಿನಿ, ಚಿಕ್ಕಮಗಳೂರು**

ಪೌರ ಕಾರ್ಮಿಕರು ಸ್ವಚ್ಛ ನಗರದ ರೂವಾರಿಗಳು. ಪ್ರತಿ ನಗರಗಳ ಸ್ವಚ್ಛತೆಗೆ ಪೌರ ಕಾರ್ಮಿಕರ ಶ್ರಮ ಮಹತ್ವವಾದುದು. ಸ್ವಚ್ಛತಾ ಕಾರ್ಯದಲ್ಲಿ ನಿರಂತರವಾಗಿ ತೊಡಗಿಕೊಂಡಿರುವ ಪೌರ ಕಾರ್ಮಿಕರನ್ನು ಪ್ರತಿಯೊಬ್ಬರೂ ಗೌರವದಿಂದ ಕಾಣಬೇಕು ಎಂದು ಶಾಸಕ ಎಚ್.ಡಿ.ತಮ್ಮಯ್ಯ ಹೇಳಿದರು.ನಗರಸಭೆ ಆವರಣದಲ್ಲಿ ನಡೆದ ಪೌರ ಕಾರ್ಮಿಕರ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವಿಧಾನ ಪರಿಷತ್ ಸದಸ್ಯ ಎಸ್.ಎಲ್.ಭೋಜೇಗೌಡ ಮಾತನಾಡಿ, ಪೌರ ಕಾರ್ಮಿಕರು ತಮ್ಮ ಮಕ್ಕಳ ಶಿಕ್ಷಣದ ಕುರಿತು ಹೆಚ್ಚು ಗಮನಹರಿಸಬೇಕು. ಯಾವುದೇ ವ್ಯಸನಗಳಿಗೆ ದಾಸರಾಗದೆ ಆರ್ಥಿಕವಾಗಿ ಸಧೃಡರಾಗಬೇಕು ಎಂದರು.

ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಮಾತನಾಡಿ, ನಗರ ಹಾಗೂ ಗ್ರಾಮೀಣ ಪ್ರದೇಶಗಳ ಸ್ವಚ್ಛತೆ ಮತ್ತು ನೈರ್ಮಲ್ಯ ಕಾಪಾಡುವಲ್ಲಿ ಪೌರ ಕಾರ್ಮಿಕರ ಪಾತ್ರ ಬಹುಮುಖ್ಯ. ಸ್ವಚ್ಛತಾ ಕಾರ್ಯವನ್ನು ಮಾತೃ ಹೃದಯದಿಂದ ನಿರ್ವಹಿಸುವ ಪೌರ ಕಾರ್ಮಿಕರ ಕೆಲಸವನ್ನು ಪ್ರತಿಯೊಬ್ಬರೂ ಗೌರವಿಸಬೇಕು ಎಂದು ಹೇಳಿದರು.

ವಿಧಾನ ಪರಿಷತ್ ಸದಸ್ಯೆ ಗಾಯತ್ರಿ ಶಾಂತೇಗೌಡ ಮಾತನಾಡಿ, 'ನಮ್ಮ ಸುತ್ತಲಿನ ಪರಿಸರವನ್ನು ಸ್ವಚ್ಛವಾಗಿ ಇರಿಸಿಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯ ಎಂದರು.


ಉದಯವಾಹಿನಿ ಚಿತ್ರ


ಉದಯವಾಹಿನಿ ಚಿತ್ರ

## ಹಣಕ್ಕೆ ಬೇಡಿಕೆ ಇಡುತ್ತಿದ್ದ 10 ಆರೋಪಿಗಳ ಬಂಧನ

**ಉದಯವಾಹಿನಿ, ದಾವಣಗೆರೆ**

ಬಟ್ಟೆ ವ್ಯಾಪಾರಿಯೊಬ್ಬನನ್ನು ಕಿಡ್ನ್ಯಾಪ್ ಮಾಡಿ ಹಲ್ಲೆ ನಡೆಸಿ ಹಣಕ್ಕೆ ಬೇಡಿಕೆ ಇಟ್ಟಿದ್ದ ಆರೋಪದ ಮೇಲೆ 10 ಮಂದಿಯನ್ನು ಬಂಧಿಸಿರುವುದಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶೇಖರ್ ಹೆಚ್.ಟಿ ತಿಳಿಸಿದ್ದಾರೆ. ಶ್ರೀಮಂತ ಯುವಕರನ್ನು ಟಾರ್ಗೆಟ್ ಮಾಡಿ ಅಪಹರಿಸಿ, ಹಲ್ಲೆ ನಡೆಸಿ ಹಣಕ್ಕೆ ಬೇಡಿಕೆ ಇಡುತ್ತಿದ್ದ ಆರೋಪದ ಹಿನ್ನೆಲೆಯಲ್ಲಿ 10 ಜನರಿದ್ದ ಖತರ್ನಾಕ್ ತಂಡವೊಂದನ್ನು ವಿದ್ಯಾನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಸೆ. 9ರಂದು ದಾವಣಗೆರೆಯ 26 ವರ್ಷದ ಬಟ್ಟೆ ವ್ಯಾಪಾರಿಯೊಬ್ಬನನ್ನು ಕಿಡ್ನ್ಯಾಪ್ ಮಾಡಿದ್ದ ಈ ಗ್ಯಾಂಗ್, ಹಣ ತರಿಸಿಕೊಡುವಂತೆ ಆತನ ಮೇಲೆ ಬಾಸುಂಡೆ ಬರುವ ರೀತಿ ಹಲ್ಲೆ ನಡೆಸಿತ್ತು. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡ ವಿದ್ಯಾನಗರ ಠಾಣೆಯ ಪೊಲೀಸರು, ತನಿಖೆ ನಡೆಸಿ ಒಟ್ಟು 10 ಜನ ಆರೋಪಿಗಳು ಹಾಗೂ ಒಂದು ಕಾರನ್ನು ವಶಪಡಿಸಿಕೊಂಡಿದ್ದಾರೆ. ವ್ಯಾಸಂಗಕ್ಕಾಗಿ ದಾವಣಗೆರೆಗೆ ಬಂದಿದ್ದ ವಿವಿಧ ಕಾಲೇಜಿನ 10 ವಿದ್ಯಾರ್ಥಿಗಳ ಗ್ಯಾಂಗ್ ಅಂದರ್ ಆಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶೇಖರ್ ಹೆಚ್.ಟಿ ತಿಳಿಸಿದ್ದಾರೆ. ಹಣಕಾಸಿನ ವ್ಯವಹಾರದ ಬಗ್ಗೆ ಮಾತನಾಡುವುದಿದೆ ಎಂದು ಸ್ನೇಹಿತ ಅಬ್ಬಾಸ್ ಎಂಬಾತ ವ್ಯಾಪಾರಿಯನ್ನು ಪುಸಲಾಯಿಸಿ ನಗರದ ಶಾಮನೂರು ಸಮುದಾಯ ಭವನ ಬಳಿ ಕರೆದುಕೊಂಡು ಹೋಗಿದ್ದ. ಈ ವೇಳೆ ಸಮುದಾಯ ಭವನ ಬಳಿ ಕಾರಿನಲ್ಲಿ ಬಂದಿದ್ದ ನಾಲ್ವರು ಆರೋಪಿಗಳು ಯುವಕನನ್ನು ಬಲವಂತವಾಗಿ ಕಾರಿನಲ್ಲಿ ಕರೆದೊಯ್ದು ಆಂಜನೇಯ ಬಡಾವಣೆಯ ಮನೆಯೊಂದರಲ್ಲಿ ಕೂಡಿ ಹಾಕಿ ಹಲ್ಲೆ ಮಾಡಿದ್ದಾರೆ.

### ಡಿ.ಕೆ.ಶಿವಕುಮಾರ್ ಬಂದರಿಗೆ ಭೇಟಿ ನೀಡಿ, ವಾಸ್ತವ ಸ್ಥಿತಿಗತಿ ಖುದ್ದು ಪರಿಶೀಲನೆ ನಡೆಸಿ, ಸಮಸ್ಯೆಗಳನ್ನು ಶೀಘ್ರವೇ ಬಗೆಹರಿಸುವುದಾಗಿ ಭರವಸೆ ನೀಡಿದ್ದರು.

# ಮಂಗಳೂರು ಬಂದರಿನಲ್ಲಿ ಬೋಟ್ ಲಂಗರಿಗೆ ಸ್ಥಳಾವಕಾಶ ಕೊರತೆ

**ಉದಯವಾಹಿನಿ, ಮಂಗಳೂರು**

ಕರಾವಳಿ ಕರ್ನಾಟಕದ ಪ್ರಮುಖ ವಾಣಿಜ್ಯ ಹಾಗೂ ಸಾಂಪ್ರದಾಯಿಕ ಮೀನುಗಾರಿಕಾ ಕೇಂದ್ರವಾಗಿರುವ ಮಂಗಳೂರು ಧಕ್ಕೆ (ಹಳೆ ಬಂದರು) ವ್ಯಾಪ್ತಿಯಲ್ಲಿ ಮೀನುಗಾರರು ಎದುರಿಸುತ್ತಿರುವ ಎರಡು ದೀರ್ಘಕಾಲದ ಜ್ವಲಂತ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಲ್ಪಿಸುವಂತೆ ಸ್ಥಳೀಯ ಟ್ರಾಲ್‌ಬೋಟ್ ಹಾಗೂ ಮೀನುಗಾರ ಮುಖಂಡರು ಸರ್ಕಾರವನ್ನು ಬಲವಾಗಿ ಆಗ್ರಹಿಸಿದ್ದಾರೆ.

> 1. ಸ್ಥಳಾವಕಾಶದ ತೀವ್ರ ಕೊರತೆ
> 2. ಬೋಟುಗಳ ಸಂಖ್ಯೆ ಹೆಚ್ಚಳ
> 3. ಅರ್ಧಕ್ಕೆ 3 ಹಂತದ ಜೆಟ್ಟಿ


ಉದಯವಾಹಿನಿ ಚಿತ್ರ

ಅಳಿವೆ ಬಾಗಿಲಿನಲ್ಲಿ ಹೂಳೆತ್ತುವ (ಡ್ರೆಡ್ಜಿಂಗ್) ಕಾಮಗಾರಿ ಸಮರ್ಪಕವಾಗಿ ನಡೆಯದಿರುವುದು ಹಾಗೂ ಸುಮಾರು 1400ಕ್ಕೂ ಅಧಿಕ ಬೋಟುಗಳಿಗೆ ಕೇವಲ 250 ರಿಂದ 300 ಬೋಟುಗಳನ್ನು ಮಾತ್ರ ನಿಲ್ಲಿಸಲು ಸ್ಥಳಾವಕಾಶ ಇರುವುದು ಮೀನುಗಾರಿಕಾ ರಂಗವನ್ನು ತೀವ್ರ ಸಂಕಷ್ಟಕ್ಕೆ ಸಿಲುಕಿಸಿದೆ.

ಇತ್ತೀಚೆಗೆ ಮಂಗಳೂರಿನಲ್ಲಿ ನಡೆದ ಐತಿಹಾಸಿಕ ರಾಜ್ಯ ಸಚಿವ ಸಂಪುಟ (ಕ್ಯಾಬಿನೆಟ್) ಸಭೆಯ ಸಂದರ್ಭದಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬಂದರಿಗೆ ಭೇಟಿ ನೀಡಿ, ಕಡಲ ಕಡೆ ತೆರಳಿ ವಾಸ್ತವ ಸ್ಥಿತಿಗತಿಗಳನ್ನು ಖುದ್ದು ಪರಿಶೀಲನೆ ನಡೆಸಿದ್ದರು. ಈ ವೇಳೆ, ಸಮಸ್ಯೆಗಳನ್ನು ಶೀಘ್ರವೇ ಬಗೆಹರಿಸುವುದಾಗಿ ಅವರು ಭರವಸೆ ನೀಡಿದ್ದು, ಆ ಭರವಸೆಗಳು ಕೇವಲ ಮಾತಿಗೆ ಸೀಮಿತವಾಗದೆ ತಕ್ಷಣವೇ ಅನುಷ್ಠಾನಕ್ಕೆ ಬರಬೇಕೆಂದು ಮೀನುಗಾರ ಮುಖಂಡರು ಒತ್ತಾಯಿಸಿದ್ದಾರೆ.

ಮಂಗಳೂರು ಬಂದರಿನಲ್ಲಿ ಪ್ರಸ್ತುತ ಲೈಸೆನ್ಸ್ ಹೊಂದಿರುವ ಸುಮಾರು 900 ಸ್ಟೀಲ್ ಬೋಟುಗಳು ಹಾಗೂ ನಾಡದೋಣಿ, ಮರದ ಬೋಟ್ ಸೇರಿ ಒಟ್ಟು 1400ಕ್ಕೂ ಅಧಿಕ ಬೋಟುಗಳು ಸಕ್ರಿಯವಾಗಿವೆ. ಆದರೆ, ಪ್ರಸ್ತುತ ಬಂದರಿನಲ್ಲಿ ಬೋಟುಗಳನ್ನು ಕಟ್ಟಲು ಲಭ್ಯವಿರುವ ಸ್ಥಳಾವಕಾಶ ಕೇವಲ 250 ರಿಂದ 300 ಬೋಟುಗಳಿಗೆ ಮಾತ್ರ ಸೀಮಿತವಾಗಿದೆ.

ಸದ್ಯ 3ನೇ ಜೆಟ್ಟಿಯಲ್ಲಿ ಶೇ. 60ರಷ್ಟು ಕಾಮಗಾರಿ ಮುಗಿದು ಶೇ. 40ರಷ್ಟು ಬಾಕಿ ಇದ್ದರೆ, ಮೊದಲನೇ ಜೆಟ್ಟಿಯನ್ನು ಡೆಮಾಲಿಷ್ (ಒಡೆದು ಹಾಕಿ) ಮಾಡಲಾಗಿದ್ದು, ಎರಡನೇ ಜೆಟ್ಟಿಯ ಡಾಕ್ ಕಾಮಗಾರಿ ಅರ್ಧಕ್ಕೆ ನಿಂತಿದೆ. ಪರಿಣಾಮವಾಗಿ ಮೀನುಗಾರಿಕಾ ಋತು ಆರಂಭವಾಗಿ ಮೂರು ತಿಂಗಳು ಕಳೆದರೂ ಬೋಟುಗಳನ್ನು ನಿಲ್ಲಿಸಲು, ಮೀನು ಇಳಿಸಲು ಸ್ಥಳವಿಲ್ಲದೇ ಮೀನುಗಾರರು ಪರದಾಡುವಂತಾಗಿದೆ.

ನೇತ್ರಾವತಿ ಹಾಗೂ ಫಲ್ಗುಣಿ (ಗುರುಪುರ) ನದಿಗಳು ಸಮುದ್ರ ಸೇರುವ ಅಳಿವೆ ಬಾಗಿಲು ಪ್ರದೇಶದಲ್ಲಿ ಮಳೆಗಾಲದ ನೆರೆ ಹಾಗೂ ನದಿ ನೀರಿನ ಹರಿವಿನಿಂದಾಗಿ ಅಪಾರ ಪ್ರಮಾಣದ ಮರಳು ಮತ್ತು ಮಣ್ಣು ಸಂಗ್ರಹವಾಗುತ್ತದೆ. ಹೂಳು ತುಂಬಿರುವುದರಿಂದ ನೀರಿನ ಆಳ ಕಡಿಮೆಯಾಗಿ ಮೀನುಗಾರಿಕೆಗೆ ತೆರಳುವ ಮತ್ತು ಮರಳುವ ಬೋಟುಗಳು ಅಳಿವೆ ಬಾಗಿಲಿನ ಮರಳು ದಿಬ್ಬಕ್ಕೆ ಅಪ್ಪಳಿಸಿ ಒಡೆಯುವುದು, ತಳಭಾಗದಲ್ಲಿ ರಂಧ್ರವಾಗಿ ನೀರು ನುಗ್ಗಿ ಮುಳುಗಡೆಯಾಗುವ ದುರಂತಗಳು ನಿರಂತರವಾಗಿ ಸಂಭವಿಸುತ್ತಿವೆ. ಕಳೆದ 30 ವರ್ಷಗಳಿಂದ ಮಂಗಳೂರಿನಲ್ಲಿ ಸಮರ್ಪಕ ಡ್ರೆಡ್ಜಿಂಗ್ ನಡೆದಿಲ್ಲ. ಸಾಗರಮಾಲಾ ಯೋಜನೆಯಡಿ ಮೀಸಲಿರಿಸಲಾಗಿದ್ದ ಕೋಟ್ಯಂತರ ರೂಪಾಯಿ ಕ್ಯಾಪಿಟಲ್ ಡ್ರೆಡ್ಜಿಂಗ್ ಯೋಜನೆಗಳು ರದ್ದಾಗಿ ಹಿನ್ನಡೆಯಾಗಿದೆ. ಈಗಿರುವ ಸಾಮಾನ್ಯ ಡ್ರೆಜ್ಜಿಂಗ್ ಮೆಷಿನ್‌ಗಳಿಂದ ಹೂಳೆತ್ತಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಸರ್ಕಾರವೇ ಸ್ವತಃ ಅತ್ಯಾಧುನಿಕ 'ಕಟ್ಟಿಂಗ್ ಡ್ರೆಜ್ಜರ್' ಯಂತ್ರವನ್ನು ಖರೀದಿಸಿ, ಸ್ಥಳೀಯ ಮೀನುಗಾರರಿಗೆ ನಿರ್ವಹಣೆಗೆ ನೀಡುವ ಮೂಲಕ ಶಾಶ್ವತ ಪರಿಹಾರ ರೂಪಿಸಬೇಕು ಎಂದು ಮುಖಂಡರು ಒತ್ತಾಯಿಸಿದ್ದಾರೆ.

### ಅರ್ಧಕ್ಕೆ ನಿಂತ 3 ಹಂತದ ಜೆಟ್ಟಿ ಕಾಮಗಾರಿಗಳು

**200 ಹೆಚ್ಚುವರಿ ಬೋಟುಗಳ ಲಂಗರಿಗೆ ಅನುಕೂಲವಾಗುವಂತೆ ಮೂರನೇ ಹಂತದ ಯೋಜನೆಯಡಿ ಕೈಗೆತ್ತಿಕೊಳ್ಳಲಾದ 1,2 ಹಾಗೂ 3ನೇ ಜೆಟ್ಟಿಗಳ ಕಾಮಗಾರಿಗಳು ಗುತ್ತಿಗೆದಾರರ ವಿಳಂಬ ಧೋರಣೆ ಹಾಗೂ ಅನುದಾನ ಬಿಡುಗಡೆ ಸಮಸ್ಯೆಯಿಂದಾಗಿ ಕುಂಠಿತಗೊಂಡಿವೆ.**

> ಕೇವಲ ಬಾಯಿಮಾತಿನ ಭರವಸೆಯಾಗದೇ, ಜೆಟ್ಟಿ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಿ ಮೀನುಗಾರರ ಸಂಕಷ್ಟಕ್ಕೆ ಸ್ಪಂದಿಸಬೇಕು
> –ಸಲೀಂ, ಕಾರ್ಯದರ್ಶಿ

> ಸಿಎಂ ಬರುವ ಮುನ್ನ ಒಂದೇ ದಿನ ಮೂರು ಬೋಟುಗಳು ಅಪಘಾತಕ್ಕೀಡಾಗಿದ್ದವು. ಸಾಮಾನ್ಯ ಯಂತ್ರಗಳಿಂದ ಹೂಳೆತ್ತಲು ಸಾಧ್ಯವಿಲ್ಲ, ಸರ್ಕಾರವೇ ಅತ್ಯಾಧುನಿಕ ಕಟ್ಟಿಂಗ್ ಡ್ರೆಜ್ಜರ್ ನೀಡಿ ನಮಗೆ ಶಾಶ್ವತ ಪರಿಹಾರ ಕಲ್ಪಿಸಬೇಕು.
> –ರಾಜೇಶ್ ಪುತ್ರನ್, ಮುಖಂಡ

### ರಾಜ್ಯಗಳಿಂದ ವಿವರವಾದ ವರದಿಗಳು ಇನ್ನೂ ಬರಬೇಕಿದೆ, ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಮಾಹಿತಿ

# ಕರ್ನಾಟಕ ಸೇರಿ 5 ರಾಜ್ಯಗಳಲ್ಲಿ ಬರ, ಕಡಿಮೆ ನೀರು ಬೇಕಾದ ಬೆಳೆಗಳಿಗೆ ಒತ್ತು

**ನವದೆಹಲಿ:** ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶ, ತೆಲಂಗಾಣ ಹಾಗೂ ರಾಜಸ್ಥಾನದ ಕೆಲವು ಪ್ರದೇಶಗಳಲ್ಲಿ ಬರ ಪರಿಸ್ಥಿತಿ ಕುರಿತು ಕಳವಳವಿದೆ ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಮಂಗಳವಾರ ತಿಳಿಸಿದ್ದಾರೆ.

ದೆಹಲಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಕೇಂದ್ರ ಸಚಿವ ಶಿವರಾಜ್ ಸಿಂಗ್ ಚೌಹಾಣ್ ರಾಜ್ಯಗಳಿಂದ ವಿವರವಾದ ವರದಿಗಳು ಇನ್ನೂ ಬರಬೇಕಿದೆ.

ಈವರೆಗೆ ಲಭ್ಯವಾಗಿರುವ ಮಾಹಿತಿಯ ಪ್ರಕಾರ ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶದ ರಾಯಲಸೀಮೆ ಸೇರಿದಂತೆ ಕೆಲವು ಭಾಗಗಳು, ತೆಲಂಗಾಣದ ಕೆಲವು ಪ್ರದೇಶಗಳು ಹಾಗೂ ರಾಜಸ್ಥಾನದ ಕೆಲವು ಭಾಗಗಳಲ್ಲಿ ಬರದ ಪರಿಸ್ಥಿತಿ ಕುರಿತು ಕಳವಳವಿದೆ. ರಾಜ್ಯಗಳಿಂದ ವಿವರವಾದ ವರದಿಗಳನ್ನು ಇನ್ನೂ ನಿರೀಕ್ಷಿಸಲಾಗುತ್ತಿದೆ" ಎಂದರು.

ಕರ್ನಾಟಕ ಸರ್ಕಾರ ಕೇಂದ್ರದ ತಂಡವನ್ನು ಕಳುಹಿಸುವಂತೆ ಮನವಿ ಮಾಡಿದ್ದು, ಅಕ್ಟೋಬರ್ 3ರಂದು ಕೇಂದ್ರ ತಂಡ ರಾಜ್ಯಕ್ಕೆ ಭೇಟಿ ನೀಡಿ ಬರ ಪರಿಸ್ಥಿತಿಯನ್ನು ಪರಿಶೀಲಿಸಲಿದೆ. ಮಹಾರಾಷ್ಟ್ರದ ಮುಖ್ಯಮಂತ್ರಿ ಕೂಡ ಕೇಂದ್ರದ ಪರಿಶೀಲನಾ ತಂಡಕ್ಕೆ ಮನವಿ ಮಾಡಿದ್ದು, ಅಲ್ಲಿಗೂ ತಂಡವನ್ನು ಕಳುಹಿಸಲಾಗುವುದು ಎಂದು ಚೌಹಾಣ್ ಹೇಳಿದ್ದಾರೆ.

**ಖುದ್ದು ಭೇಟಿಗೂ ಯೋಜನೆ:** ಮಾತ್ರವಲ್ಲದೇ ಬರಪೀಡಿತ ರಾಜ್ಯಗಳಿಗೆ ತಾವೇ ಭೇಟಿ ನೀಡಿ ಪರಿಸ್ಥಿತಿಯನ್ನು ಪರಿಶೀಲಿಸುವುದಾಗಿ ತಿಳಿಸಿರುವ ಕೃಷಿ ಸಚಿವರು, ಸಂಬಂಧಿತ ರಾಜ್ಯ ಸರ್ಕಾರಗಳೊಂದಿಗೆ ನಿರಂತರ ಸಂಪರ್ಕದಲ್ಲಿರುವುದಾಗಿ ಹೇಳಿದ್ದಾರೆ.

"ಕೃಷಿ ಭೂಮಿಗಳು ಪಾಳು ಬೀಳದಂತೆ ನೋಡಿಕೊಳ್ಳುವುದು ತಕ್ಷಣದ ಉದ್ದೇಶ" ಎಂದ ಚೌಹಾಣ್, ಮುಂಬರುವ ರಬಿ ಹಂಗಾಮಿನಲ್ಲಿ ನೀರಿನ ಲಭ್ಯತೆ ಹಾಗೂ ಮಣ್ಣಿನ ತೇವಾಂಶವನ್ನು ಆಧರಿಸಿ ಬೆಳೆ ಆಯ್ಕೆ ಮಾಡುವಂತೆ ಕೇಂದ್ರ ಸರ್ಕಾರ ರಾಜ್ಯಗಳಿಗೆ ಸೂಚಿಸಿದೆ. ನೀರಿನ ಕೊರತೆಯಿರುವ ಪ್ರದೇಶಗಳಲ್ಲಿ ಕಡಿಮೆ ನೀರು ಬೇಕಾಗುವ ಬೇಳೆಕಾಳುಗಳು ಹಾಗೂ ಎಣ್ಣೆಕಾಳುಗಳಿಗೆ ಹೆಚ್ಚಿನ ಆದ್ಯತೆ ನೀಡುವಂತೆ ಸಲಹೆ ನೀಡಲಾಗಿದೆ ಎಂದರು.



ಸ್ಥಳೀಯ ಮಣ್ಣು ಮತ್ತು ಹವಾಮಾನ ಪರಿಸ್ಥಿತಿಗೆ ಹೊಂದಿಕೊಳ್ಳುವ, ಕಡಿಮೆ ನೀರಿನಲ್ಲಿ ಬೆಳೆಯಬಹುದಾದ ಹಾಗೂ ಕಡಿಮೆ ಅವಧಿಯಲ್ಲಿ ಕಟಾವಿಗೆ ಬರುವ ಬೀಜಗಳು ಮತ್ತು ಬೆಳೆ ತಳಿಗಳನ್ನು ಗುರುತಿಸಲು ರಾಜ್ಯಗಳಿಗೆ ಕೇಂದ್ರ ನೆರವು ನೀಡಲಿದೆ ಎಂದು ಚೌಹಾಣ್ ತಿಳಿಸಿದ್ದಾರೆ.

ಬರ ಪರಿಸ್ಥಿತಿಯ ನಡುವೆಯೂ ರೈತರು ಕೃಷಿ ಮುಂದುವರಿಸಲು ಅಗತ್ಯ ಸಹಾಯ ಒದಗಿಸುವುದಾಗಿ ಅವರು ಹೇಳಿದ್ದಾರೆ. ರಾಜ್ಯಗಳು ಹಾಗೂ ಇತರ ಸಂಬಂಧಿತ ಸಂಸ್ಥೆಗಳ ನಡುವೆ ಸಮನ್ವಯ ಮತ್ತು ಸಹಕಾರಕ್ಕೂ ಕೇಂದ್ರ ಸರ್ಕಾರ ನೆರವು ನೀಡಲಿದೆ ಎಂದು ಚೌಹಾಣ್ ತಿಳಿಸಿದ್ದಾರೆ.

**1.** ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶದ ರಾಯಲಸೀಮೆ ಸೇರಿದಂತೆ ಕೆಲವು ಭಾಗಗಳು, ತೆಲಂಗಾಣದ ಕೆಲವು ಪ್ರದೇಶಗಳು ಹಾಗೂ ರಾಜಸ್ಥಾನದ ಕೆಲವು ಭಾಗಗಳಲ್ಲಿ ಬರದ ಪರಿಸ್ಥಿತಿ ಕುರಿತು ಕಳವಳವಿದೆ. ರಾಜ್ಯಗಳಿಂದ ವಿವರವಾದ ವರದಿಗಳನ್ನು ಇನ್ನೂ ನಿರೀಕ್ಷಿಸಲಾಗುತ್ತಿದೆ

**2.** ಕರ್ನಾಟಕ ಸರ್ಕಾರ ಕೇಂದ್ರದ ತಂಡವನ್ನು ಕಳುಹಿಸುವಂತೆ ಮನವಿ ಮಾಡಿದ್ದು, ಅಕ್ಟೋಬರ್ 3ರಂದು ಕೇಂದ್ರ ತಂಡ ರಾಜ್ಯಕ್ಕೆ ಭೇಟಿ ನೀಡಿ ಬರ ಪರಿಸ್ಥಿತಿಯನ್ನು ಪರಿಶೀಲಿಸಲಿದೆ.

**3.** ಬರಪೀಡಿತ ರಾಜ್ಯಗಳಿಗೆ ತಾವೇ ಭೇಟಿ ನೀಡಿ ಪರಿಸ್ಥಿತಿಯನ್ನು ಪರಿಶೀಲಿಸಲಾಗವುದು, ಈ ಕುರಿತು ಸಂಬಂಧಿತ ರಾಜ್ಯ ಸರ್ಕಾರಗಳೊಂದಿಗೆ ನಿರಂತರ ಸಂಪರ್ಕದಲ್ಲಿ ಇರಲಾಗುವುದು

ದೇಶದಾದ್ಯಂತ ಮಳೆ ಕೊರತೆ ಮತ್ತು ನೀರಿನ ಲಭ್ಯತೆಯಲ್ಲಿನ ವ್ಯತ್ಯಾಸದ ಹಿನ್ನೆಲೆಯಲ್ಲಿ ರಬಿ ಹಂಗಾಮಿನ ಬೆಳೆ ಯೋಜನೆಗಳನ್ನು ನೀರಿನ ಲಭ್ಯತೆ ಹಾಗೂ ಮಣ್ಣಿನ ತೇವಾಂಶಕ್ಕೆ ಅನುಗುಣವಾಗಿ ರೂಪಿಸುವಂತೆ ಕೇಂದ್ರ ಸರ್ಕಾರ ಒತ್ತಾಯಿಸಿದೆ.

## ಜ್ಞಾನೇಶ್‌ಕುಮಾರ್ ವಿರುದ್ಧದ ಅರ್ಜಿ ವಿಚಾರಣೆಗೆ ಸುಪ್ರೀಂ ಸಮ್ಮತಿ

**ನವದೆಹಲಿ:** ಇತರ ಇಬ್ಬರು ಚುನಾವಣಾ ಆಯುಕ್ತರಾದ ಸುಖಬೀರ್ ಸಿಂಗ್ ಸಂಧು ಮತ್ತು ವಿವೇಕ್ ಜೋಶಿ ಅವರ ಒಪ್ಪಿಗೆಯಿಲ್ಲದೇ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರು ಚುನಾವಣಾ ಆಯೋಗದ ಪರವಾಗಿ ಏಕಪಕ್ಷೀಯವಾಗಿ ನಿರ್ಧಾರ ತೆಗೆದುಕೊಳ್ಳಬಹುದೇ ಎಂದು ಪ್ರಶ್ನಿಸುವ ಹೊಸ ಅರ್ಜಿಯನ್ನು ವಿಚಾರಣೆಗೆ ಪರಿಗಣಿಸಲು ಸುಪ್ರೀಂ ಕೋರ್ಟ್ ಮಂಗಳವಾರ ಒಪ್ಪಿಗೆ ಸೂಚಿಸಿದೆ.



ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ಪೀಠದ ಮುಂದೆ, ಅರ್ಜಿದಾರ ರಾಕೇಶ್ ಕುಮಾರ್ ಸಿಂಗ್ ಪರವಾಗಿ ಹಿರಿಯ ವಕೀಲ ವಿಕಾಸ್ ಸಿಂಗ್ ಈ ವಿಷಯವನ್ನು ಪ್ರಸ್ತಾಪಿಸಿದರು. ಬಹು – ಸದಸ್ಯ ಆಯೋಗದ ನಿರ್ಧಾರಗಳು ಸರ್ವಾನುಮತದಿಂದ ಅಥವಾ ಬಹುಮತದ ಆಧಾರದ ಮೇಲೆ ಇರಬೇಕೆಂಬುದು ಶಾಸನಬದ್ಧ ನಿಯಮವಾಗಿದೆ ಎಂದು ಪ್ರತಿಪಾದಿಸಿದ ಹಿರಿಯ ವಕೀಲರು, ಈ ವಿಷಯದ ತುರ್ತು ವಿಚಾರಣೆ ಕೋರಿದರು.

ಸಂವಿಧಾನದಲ್ಲಿ ತಿಳಿಸಿದಂತೆ ಬಹು – ಸದಸ್ಯ ಆಯೋಗವನ್ನು ಹೊಂದುವ ಉದ್ದೇಶವೇ ನಿರ್ಧಾರಗಳು ಸರ್ವಾನುಮತದಿಂದ ಅಥವಾ ಬಹುಮತದಿಂದ ಕೂಡಿರಬೇಕು ಎಂಬುದಾಗಿದೆ ಎಂದು ಸಿಂಗ್ ವಾದಿಸಿದರು.

ಚುನಾವಣಾ ಆಯೋಗ ಕಾರ್ಯನಿರ್ವಹಿಸಿದ ರೀತಿಯನ್ನು ಗಮನಿಸಿದರೆ, ಸಂಪೂರ್ಣ ಎಸ್‌ಐಆರ್ ಪ್ರಕ್ರಿಯೆಗೆ ಸಂಬಂಧಿಸಿದಂತೆ ಆಯೋಗವು ನಿರ್ಧಾರವನ್ನು ತೆಗೆದುಕೊಂಡಿದೆಯೇ ಎಂಬ ಬಗ್ಗೆ ಗಂಭೀರ ಅನುಮಾನವಿದೆ ಎಂದು ಅವರು ಹೇಳಿದರು. ಏಕೆಂದರೆ ಆಯೋಗವು ಸರ್ವಾನುಮತದ ನಿರ್ಧಾರವನ್ನು ತೆಗೆದುಕೊಳ್ಳದಿದ್ದರೆ, ಆಗ ಏನಾಗುತ್ತದೆ? ನ್ಯಾಯಾಲಯವು ಕೂಡ ನಿರ್ಧಾರವನ್ನು ತೆಗೆದುಕೊಂಡಿರುವುದು, ಅದು ಆಯೋಗದ ನಿರ್ಧಾರ ಎಂಬ ಆಧಾರದ ಮೇಲೆಯೇ. ಆದ್ದರಿಂದ, ಇದು ಗಂಭೀರ ವಿಷಯವಾಗಿದೆ. ನಾನು ಕೇವಲ ಮನವಿ ಮಾಡುತ್ತಿದ್ದೇನೆ ಎಂದು ಸಿಂಗ್ ತಿಳಿಸಿದರು.

ಕೇಂದ್ರ ಚುನಾವಣಾ ಆಯೋಗ, ಮುಖ್ಯ ಚುನಾವಣಾ ಆಯುಕ್ತ ಕುಮಾರ್ ಅವರ ನೇತೃತ್ವದಲ್ಲಿ ಕೈಗೊಂಡ ಆಂತರಿಕ ನಿರ್ಧಾರಗಳ ಕುರಿತು ಇಬ್ಬರು ಚುನಾವಣಾ ಆಯುಕ್ತರು ಹತ್ತು ತಿಂಗಳ ಅವಧಿಯಲ್ಲಿ ಕನಿಷ್ಠ 14 ಬಾರಿ ಔಪಚಾರಿಕ ಆಕ್ಷೇಪಣೆಗಳನ್ನು ದಾಖಲಿಸಿದ್ದಾರೆ ಎಂದು ಮಾಧ್ಯಮವೊಂದರ ವರದಿಯೊಂದು ಬಹಿರಂಗಪಡಿಸಿದ ಕೆಲವೇ ದಿನಗಳಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ಈ ಅರ್ಜಿ ಸಲ್ಲಿಕೆಯಾಗಿದೆ.

ಅವರು ಫಾರ್ಮ್ 6ರಲ್ಲಿ ಮಾಡಿದ ಬದಲಾವಣೆಗಳು ಮತ್ತು ದೆಹಲಿಯಲ್ಲಿ ಮತದಾರರ ಪಟ್ಟಿಯ ಸಾಫ್ಟ್‌ವೇರ್‌ನ ಕೇಂದ್ರೀಕರಣದ ಬಗ್ಗೆ ಕಳವಳ ವ್ಯಕ್ತಪಡಿಸಿದ್ದರು. ವರದಿಯ ನಂತರ ನೀಡಿದ ಹೇಳಿಕೆಯಲ್ಲಿ ಎಲ್ಲಾ ಪ್ರಮುಖ ನಿರ್ಧಾರಗಳಿಗೆ ಮೂವರು ಸದಸ್ಯರ ಸರ್ವಾನುಮತದ ಅನುಮೋದನೆ ಇತ್ತು ಎಂದು ಚುನಾವಣಾ ಆಯೋಗ ತಿಳಿಸಿದ್ದು, ಆಂತರಿಕ ಟಿಪ್ಪಣಿಗಳನ್ನು ಸಾಮಾನ್ಯ ಚರ್ಚೆಗಳು ಎಂದು ಸ್ಪಷ್ಟನೆ ನೀಡಿತ್ತು.

ಸುಪ್ರೀಂ ಕೋರ್ಟ್‌ನ ಕಲಾಪಗಳ ಬಗ್ಗೆ ಮಾಹಿತಿ ಇರುವ ವಕೀಲರೊಬ್ಬರ ಪ್ರಕಾರ, ಈ ವಿಷಯವನ್ನು ಮುಂದಿನ ವಾರ ವಿಚಾರಣಾ ಪಟ್ಟಿಯಲ್ಲಿ ಸೇರಿಸಲು ಸರ್ವೋಚ್ಚ ನ್ಯಾಯಾಲಯ ಒಪ್ಪಿಗೆ ಸೂಚಿಸಿದೆ. ಸಂವಿಧಾನದ 324ನೇ ವಿಧಿಯು ಚುನಾವಣಾ ಆಯೋಗಕ್ಕೆ ಒಂದು ಸಮಷ್ಟಿ ಸಂಸ್ಥೆಯಾಗಿ ಸಾಮೂಹಿಕ ನಿರ್ಧಾರ ಕೈಗೊಳ್ಳುವ ಅಧಿಕಾರವನ್ನು ನೀಡಿದೆಯೇ ಹೊರತು, ಅದರಲ್ಲಿನ 324(3)ನೇ ವಿಧಿಯು ಜ್ಞಾನೇಶ್ ಕುಮಾರ್ ಅವರನ್ನು ಕೇವಲ ಆಯೋಗದ ಅಧ್ಯಕ್ಷರನ್ನಾಗಿ ನೇಮಿಸಿದೆ ಮತ್ತು ಆಯೋಗದ ಸಾಮೂಹಿಕ ಅಧಿಕಾರದ ಮೇಲೆ ಅವರಿಗೆ ಯಾವುದೇ ವೈಯಕ್ತಿಕ ಹಕ್ಕನ್ನು ನೀಡಿಲ್ಲ. ಹೀಗಿದ್ದರೂ, ತಾವು ವೈಯಕ್ತಿಕವಾಗಿ ಆ ಅಧಿಕಾರವನ್ನು ಚಲಾಯಿಸಲು ಅರ್ಹರೆಂಬಂತೆ ಅವರು ವರ್ತಿಸುತ್ತಿರುವುದು ಹಾಗೂ ಯಾವ ಅಧಿಕಾರದ ಬಲದ ಮೇಲೆ ಹಾಗೆ ಮಾಡುತ್ತಿದ್ದಾರೆ ಎಂಬುದನ್ನು ಸ್ಪಷ್ಟಪಡಿಸುವಂತೆ ನಿರ್ದೇಶನ ನೀಡಬೇಕೆಂದು ಈ ಅರ್ಜಿಯಲ್ಲಿ ಕೋರಲಾಗಿದೆ.

## India-China ಸಂಬಂಧ ಸುಧಾರಣೆಗೆ ಗಡಿ ಶಾಂತಿಯೇ ಪ್ರಮುಖ ಕೀಲಿಕೈ

**ನ್ಯೂಯಾರ್ಕ್:** ಭಾರತ ಮತ್ತು ಚೀನಾ ನಡುವಿನ ದ್ವಿಪಕ್ಷೀಯ ಸಂಬಂಧಗಳು ಕಳೆದ ಎರಡು ವರ್ಷಗಳಿಗೆ ಹೋಲಿಸಿದರೆ ಇಂದು ಸುಧಾರಿಸಿವೆ ಎಂದು ಭಾರತದ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ಹೇಳಿದ್ದು, ಉಭಯ ದೇಶಗಳ ನಡುವೆ ಸಂಪೂರ್ಣ ಸಹಜ ಸ್ಥಿತಿ ಮರಳಬೇಕಾದರೆ ಗಡಿಯಲ್ಲಿ ನಿರಂತರ ಶಾಂತಿ ನೆಲೆಸುವುದು ಅತ್ಯಗತ್ಯ ಎಂದು ಸ್ಪಷ್ಟಪಡಿಸಿದ್ದಾರೆ.



ಉಭಯ ರಾಷ್ಟ್ರಗಳ ನಡುವಿನ ಬಾಂಧವ್ಯ 2 ವರ್ಷಗಳ ಹಿಂದಿಗಿಂತ ಈಗ ಉತ್ತಮ: ಎಸ್. ಜೈಶಂಕರ್

ಸೋಮವಾರ ಏಷ್ಯಾ ಸೊಸೈಟಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 2020ರಲ್ಲಿ ಆರಂಭವಾದ ದೀರ್ಘಕಾಲದ ಗಡಿ ಬಿಕ್ಕಟ್ಟಿನಿಂದ ಉಭಯ ದೇಶಗಳ ಸಂಬಂಧಕ್ಕೆ ತೀವ್ರ ಹೊಡೆತ ಬಿದ್ದಿತ್ತು. ಆದರೆ, ಗಡಿಗೆ ಸಂಬಂಧಿಸಿದ ತಕ್ಷಣದ ಸಮಸ್ಯೆಗಳು ಬಗೆಹರಿದ ಬಳಿಕ ಸಂಬಂಧದಲ್ಲಿ ಸುಧಾರಣೆ ಆರಂಭವಾಗಿದೆ ಎಂದು ಹೇಳಿದರು. 2025ಕ್ಕೆ ಹೋಲಿಸಿದರೆ ಇಂದು ಸಂಬಂಧ ಉತ್ತಮವಾಗಿದೆಯೇ ಎಂದು ಕೇಳಿದರೆ, ಹೌದು ಎಂದು ಹೇಳುತ್ತೇನೆ. 2024ಕ್ಕೆ ಹೋಲಿಸಿದರೆ ಇನ್ನೂ ಹೆಚ್ಚು ಉತ್ತಮವಾಗಿದೆ ಎಂದು ಹೇಳಿದರು. ಇದು ಎರಡೂ ದೇಶಗಳ ನಡುವಿನ ಸಂಬಂಧದಲ್ಲಿ ಯಾವುದೇ ಮೂಲಭೂತ ಬದಲಾವಣೆಯ ಫಲಿತಾಂಶವಲ್ಲ. ಬದಲಾಗಿ, 2020ರ ಗಡಿ ಉದ್ವಿಗ್ನತೆಯ ಬಳಿಕ ತೀವ್ರವಾಗಿ ಹದಗೆಟ್ಟಿದ್ದ ಸಂಬಂಧ ಮತ್ತೆ ಸ್ಥಿರವಾಗುತ್ತಿರುವುದರ ಪರಿಣಾಮ ಎಂದು ವಿವರಿಸಿದರು. 2020ರ ಬಳಿಕ ಉಭಯ ದೇಶಗಳ ನಡುವೆ ದೀರ್ಘಕಾಲದ ಗಡಿ ಬಿಕ್ಕಟ್ಟು ಮುಂದುವರಿದಿದ್ದರಿಂದ ಸಾಮಾನ್ಯ ಸಂಪರ್ಕಗಳು ಬಹುತೇಕ ಸ್ಥಗಿತಗೊಂಡಿದ್ದವು. ವ್ಯಾಪಾರ ಮುಂದುವರಿದಿದ್ದರೂ, ಅಧಿಕೃತ ಮಾತುಕತೆಗಳು, ವೀಸಾ ವಿತರಣೆ ಮತ್ತು ವಿಮಾನ ಸೇವೆಗಳ ಮೇಲೂ ಪರಿಣಾಮ ಬೀರಿತ್ತು. ಗಡಿ ಬಿಕ್ಕಟ್ಟು ಶಮನಗೊಂಡ ಬಳಿಕ ಸಹಜವಾಗಿಯೇ ಈ ಸಂಪರ್ಕಗಳು ಮತ್ತೆ ಸುಧಾರಿಸಲು ಆರಂಭಿಸಿದವು.

ದೀರ್ಘಕಾಲದ ಉದ್ವಿಗ್ನತೆ ಭಾರತ ಅಥವಾ ಚೀನಾದ ಹಿತಾಸಕ್ತಿಗೆ ಅನುಕೂಲಕರವಲ್ಲ ಮತ್ತು ಇಂತಹ ಪರಿಸ್ಥಿತಿ ಮೂರನೇ ರಾಷ್ಟ್ರಗಳಿಗೆ ಅವಕಾಶ ಕಲ್ಪಿಸಬಹುದು ಎಂಬುದನ್ನು ಭಾರತ ನಿರಂತರವಾಗಿ ಚೀನಾಕ್ಕೆ ತಿಳಿಸುತ್ತಾ ಬಂದಿತ್ತು. ಇತರರಿಗೆ ಲಾಭವಾಗುವಂತಹ ಸಮಸ್ಯೆಯಲ್ಲಿ ನಾವು ಸಿಲುಕಿಕೊಳ್ಳಬಾರದು ಎಂಬುದು ನಮ್ಮ ರಾಜತಾಂತ್ರಿಕತೆಯ ಮೂಲ ತತ್ವ. ಭಾರತ–ಚೀನಾ ಸಂಬಂಧದ ಕುರಿತು ಭಾರತದ ನಿಲುವು ಸ್ಪಷ್ಟವಾಗಿದೆ. ಗಡಿಯ ಸ್ಥಿತಿ ಹೇಗಿದೆಯೋ, ಅದರ ಆಧಾರದ ಮೇಲೆಯೇ ಒಟ್ಟಾರೆ ದ್ವಿಪಕ್ಷೀಯ ಸಂಬಂಧದ ಸ್ಥಿತಿಯೂ ನಿರ್ಧಾರವಾಗುತ್ತದೆ ಎಂದು ತಿಳಿಸಿದರು. ಗಡಿಯಲ್ಲಿ ಉದ್ವಿಗ್ನತೆ ಇರುವಾಗ ಸಂಬಂಧ ಸಾಮಾನ್ಯವಾಗಿರಬೇಕು ಎಂದು ಹೇಳಲು ಸಾಧ್ಯವಿಲ್ಲ. ಗಡಿ ಮತ್ತೆ ಸಹಜ ಸ್ಥಿತಿಯತ್ತ ಬಂದಂತೆ, ಎರಡೂ ದೇಶಗಳ ನಡುವಿನ ಸಂಬಂಧವೂ ಸಹಜ ಸ್ಥಿತಿಯತ್ತ ಮರಳುತ್ತದೆ ಎಂದು ಹೇಳಿದರು.

## ಮಮತಾ ವಿರುದ್ಧ ನಿತಿನ್ ನಬಿನ್ ವಾಗ್ದಾಳಿ

**ಕೋಲ್ಕತ್ತಾ:** ಪಶ್ಚಿಮ ಬಂಗಾಳದಲ್ಲಿ ನಡೆದ SIR ಆಡಳಿತಾರೂಢ ಬಿಜೆಪಿಗೆ ಸಹಾಯ ಮಾಡಿದೆ ಎಂದು ಆರೋಪಿಸಿದ ಮಾಜಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ವಿರುದ್ಧ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ವಾಗ್ದಾಳಿ ನಡೆಸಿದ್ದಾರೆ. ಪಶ್ಚಿಮ ಬಂಗಾಳಕ್ಕೆ ಭೇಟಿ ನೀಡಿರುವ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರು, ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡರು. ಈ ವೇಳೆ ಮಾತನಾಡಿದ ಅವರು, ಮುಖ್ಯಮಂತ್ರಿ ಸುವೇಂದು ಅಧಿಕಾರಿ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ರಾಜ್ಯವು ಸರಿಯಾದ ದಿಕ್ಕಿನಲ್ಲಿ ಸಾಗುತ್ತಿದೆ ಎಂದು ಹೇಳಿದರು. ಚುನಾವಣಾ ಆಯೋಗದ ಕುರಿತ ಮಮತಾ ಬ್ಯಾನರ್ಜಿ ಅವರ ಟೀಕೆಗೆ ಪ್ರತಿಕ್ರಿಯಿಸಿದ ನಬಿನ್, ನಾನು ಇದನ್ನು ಹತಾಶೆ ಮತ್ತು ನಿರಾಶೆಯ ಸಂಕೇತವೆಂದು ಪರಿಗಣಿಸುತ್ತೇನೆ. ಕೇರಳ ಅಥವಾ ತಮಿಳುನಾಡಿನಲ್ಲಿ ಚುನಾವಣೆ ಗೆದ್ದಾಗ ಇದೇ ಕಾಂಗ್ರೆಸ್ ಸದಸ್ಯರು ಚುನಾವಣಾ ಆಯೋಗವನ್ನು ದೂಷಿಸುವುದಿಲ್ಲ. ಅಥವಾ ಕರ್ನಾಟಕದಲ್ಲಿ ಜಯಗಳಿಸಿದಾಗಲೂ ಅದರಲ್ಲಿ ತಪ್ಪು ಹುಡುಕುವುದಿಲ್ಲ. ಆದರೆ, ಪಶ್ಚಿಮ ಬಂಗಾಳ ಮತ್ತು ಗುಜರಾತ್‌ನಲ್ಲಿ ಸೋತಾಗ ಮಾತ್ರ ಅವರು ಚುನಾವಣಾ ಆಯೋಗವನ್ನು ದೂಷಿಸುತ್ತಾರೆ. ಇಂತಹ ದ್ವಂದ್ವ ನಿಲುವುಗಳು ನಡೆಯುವುದಿಲ್ಲ. ಸಾರ್ವಜನಿಕರು ಅವರಿಗೆ ಕಲಿಸಿದ ಪಾಠದಿಂದ ಟಿಎಂಸಿ ಅರಿತುಕೊಳ್ಳುವುದು ಒಳ್ಳೆಯದು ಎಂದು ಹೇಳಿದರು.



**1.** ದ್ವಂದ್ವ ನಿಲುವುಗಳು ನಡೆಯುವುದಿಲ್ಲ
**2.** ಕರ್ನಾಟಕ, ತಮಿಳುನಾಡಲ್ಲಿ ಬೇರೆ ಪಕ್ಷಗಳು ಗೆದ್ದಾಗ ಏಕೆ ಪ್ರಶ್ನಿಸುವುದಿಲ್ಲ

## ದೆಹಲಿಯ ಬೇಲಾ ಎಸ್ಟೇಟ್‌ನಲ್ಲಿ 728 ರಲ್ಲಿ 727 ಮತದಾರರು ಡಿಲೀಟ್

**ನವದೆಹಲಿ:** ಚಾಂದನಿ ಚೌಕ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಿಜಯ್ ಘಾಟ್‌ನ ಜೆಜೆ ಬೇಲಾ ಎಸ್ಟೇಟ್‌ನ ಮತದಾರರ ಹೆಸರುಗಳನ್ನು ತೆಗೆದುಹಾಕಲಾಗಿದೆ ಎಂಬ ಆರೋಪ ಮತ್ತು ಸಾರ್ವಜನಿಕರ ಅಹವಾಲುಗಳ ಕುರಿತು ಪತ್ರಿಕೆಗಳು ವರದಿ ಪ್ರಕಟಿಸಿದ್ದವು. ಈ ವರದಿ ಪ್ರಕಟಗೊಂಡ ಮೇಲೆ ಲೋಕಸಭಾ ವಿಪಕ್ಷ ನಾಯಕ ರಾಹುಲ್ ಪ್ರತಿಕ್ರಿಯಿಸಿದ್ದಾರೆ.



ಇದು ಮತಕಳ್ಳತನ ಎಂದ ರಾಹುಲ್

ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆ ವೇಳೆ ಚುನಾವಣಾ ಆಯೋಗವು ದೆಹಲಿಯ ಬೇಲಾ ಎಸ್ಟೇಟ್‌ನ 727 ನಿವಾಸಿಗಳ ಹೆಸರುಗಳನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕಿದೆ ಎಂಬ ಆರೋಪವನ್ನು ಅವರು, ಮತ ಕಳ್ಳತನದ ವಿಧಾನ ಎಂದಿದ್ದಾರೆ. ಸೆಪ್ಟೆಂಬರ್ 9ರಂದು ಚಾಂದನಿ ಚೌಕ್ ಕ್ಷೇತ್ರದ ಈ ನಿರ್ದಿಷ್ಟ ಮತಗಟ್ಟೆಯಲ್ಲಿ 728ರಲ್ಲಿ 727 ಮತಗಳನ್ನು ತೆಗೆದು ಹಾಕಲಾಗಿದ್ದು, ಇದೀಗ ಕೇವಲ ಓರ್ವ ಮತದಾರ ಮಾತ್ರ ಉಳಿದಿದ್ದಾನೆ. ಮಂಗೋಲ್‌ಪುರಿಯ ವೈ ಬ್ಲಾಕ್ ನಿವಾಸಿ ಕಾಂತಾ ಪ್ರಸಾದ್ ಅವರು ಜೀವಂತವಾಗಿದ್ದರೂ ಅವರನ್ನು ಮೃತ ಎಂದು ಎಎಸ್‌ಡಿಡಿ ಪಟ್ಟಿಗೆ ಸೇರಿಸಲಾಗಿದೆ ಎಂದು ವರದಿಯಲ್ಲಿ ಉಲ್ಲೇಖಿಸಿತ್ತು. ಈ ಕುರಿತು ಎಕ್ಸ್ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ರಾಹುಲ್ ಗಾಂಧಿ, ದಶಕಗಳಿಂದ ಜನರು ಇಲ್ಲಿ ವಾಸಿಸುತ್ತಿದ್ದಾರೆ. 2024ರ ಲೋಕಸಭಾ ಚುನಾವಣೆ ಹಾಗೂ 2025ರ ದೆಹಲಿ ಚುನಾವಣೆಯಲ್ಲಿ ಮತ ಚಲಾಯಿಸಿದ್ದಾರೆ. 2023ರಲ್ಲಿ ಅವರ ಮನೆಗಳನ್ನು ಕೆಡವಲಾಗಿತ್ತು. ಆದರೆ, ಅವರೆಲ್ಲ ಎಲ್ಲಿಗೂ ತೆರಳದೇ ಅಲ್ಲೇ ವಾಸಿಸುತ್ತಿದ್ದರು ಎಂದು ಅವರು ಆ ವಿಡಿಯೋದಲ್ಲಿ ವಿವರಿಸಿದ್ದಾರೆ.

ಈ ವಸತಿ ಪ್ರದೇಶಕ್ಕೆ ಇಂದು ಭೇಟಿ ನೀಡಿ, ಚುನಾವಣಾ ಆಯೋಗ ನಡೆಸಿರುವ ಕ್ರಮವನ್ನು ಅವರಿಂದಲೇ ಕೇಳಿ ತಿಳಿದುಕೊಂಡೆ. ಮನೆ ಇದೆಯೇ ಅಥವಾ ಇಲ್ಲವೇ ಎಂಬುದು ಮತದಾನದ ಹಕ್ಕಿನ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಎಂದು ನಾನು ಎಸ್‌ಡಿಎಂ ಅವರಿಗೆ ದೂರವಾಣಿ ಮೂಲಕ ತಿಳಿಸಿದೆ. ನಿರಾಶ್ರಿತರಿಗಾಗಿ ಮನೆ ಸಂಖ್ಯೆ 0 ನಿಗದಿಪಡಿಸಲಾಗಿದೆ ಎಂದು ಸ್ವತಃ ಸಿಇಸಿ ಜ್ಞಾನೇಶ್ ಕುಮಾರ್ ಹೇಳಿದ್ದರೂ 727 ಜನರ ಹೆಸರುಗಳನ್ನು ಪಟ್ಟಿಯಿಂದ ತೆಗೆದುಹಾಕಲಾಗಿದೆ. ಇದು ಎಸ್‌ಐಆರ್ ಪ್ರಕ್ರಿಯೆಯಲ್ಲ. ಮತಕಳ್ಳತನದ ವಿಧಾನವಾಗಿದೆ. ಜ್ಞಾನೇಶ್ ಕುಮಾರ್ ಅಂತಿಮವಾಗಿ ತಮ್ಮ ಹುದ್ದೆಯಿಂದ ನಿರ್ಗಮಿಸುತ್ತಾರೆ. ಆದರೆ, ಅವರನ್ನು ಹೀಗೆ ಮಾಡಲು ಪ್ರೇರೇಪಿಸಿದ ವ್ಯವಸ್ಥೆಯನ್ನೂ ಸಹ ಹೊಣೆಗಾರರನ್ನಾಗಿಸಲಾಗುತ್ತದೆ ಎಂದು ರಾಹುಲ್ ಪ್ರಶ್ನಿಸಿದ್ದಾರೆ.

### ಬಂಡುಕೋರರ ಹಿಡಿತದಲ್ಲಿರುವ ರಾಖೈನ್ ಮೇಲೆ ಮ್ಯಾನ್ಮಾರ್ ಸೇನೆಯಿಂದ ವೈಮಾನಿಕ ದಾಳಿ

# ಮಾರಣಾಂತಿಕ ದಾಳಿಗೆ ಕನಿಷ್ಠ 49 ಮಂದಿ ಸಾವು, 58 ಜನರಿಗೆ ಗಾಯ

**ಬ್ಯಾಂಕಾಕ್:** ಪ್ರಬಲ ಬಂಡಾಯ ಗುಂಪೊಂದರ ನಿಯಂತ್ರಣದಲ್ಲಿರುವ ಪ್ರದೇಶದ ಮಾರುಕಟ್ಟೆಯ ಸಮೀಪ ಮ್ಯಾನ್ಮಾರ್ ಸೇನೆ ನಡೆಸಿದ ವೈಮಾನಿಕ ದಾಳಿಯಲ್ಲಿ ಕನಿಷ್ಠ 49 ಜನರು ಸಾವನ್ನಪ್ಪಿದ್ದಾರೆ. 58 ಮಂದಿ ಈ ದಾಳಿಯಲ್ಲಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ದೇಶಾದ್ಯಂತ ಪ್ರಜಾಪ್ರಭುತ್ವ ಪರ ಪ್ರತಿರೋಧ ಪಡೆಗಳು ಮತ್ತು ಜನಾಂಗೀಯ ಸಶಸ್ತ್ರ ಗುಂಪುಗಳ ವಿರುದ್ಧ ಪಶ್ಚಿಮ ರಾಖೈನ್ ರಾಜ್ಯದಲ್ಲಿ ನಡೆಸಲಾದ ಮಾರಣಾಂತಿಕ ವೈಮಾನಿಕ ದಾಳಿ ಇದಾಗಿದೆ.

ಫೆಬ್ರವರಿ 1, 2021 ರಂದು ಆಂಗ್ ಸಾನ್ ಸೂಕಿ ಅವರ ಚುನಾಯಿತ ಸರ್ಕಾರವನ್ನು ಕೆಳಗಿಳಿಸಿ, ಸೇನೆಯು ಅಧಿಕಾರವನ್ನು ವಶಪಡಿಸಿಕೊಂಡಾಗಿನಿಂದ ಮ್ಯಾನ್ಮಾರ್ ಅಶಾಂತಿ ಸೃಷ್ಟಿಯಾಗಿದೆ. ಅಷ್ಟೇ ಅಲ್ಲ ಸೇನೆಯ ವಿರುದ್ಧ ವ್ಯಾಪಕ ಪ್ರತಿರೋಧಕ್ಕೂ ಕಾರಣವಾಗಿದೆ. ಶಾಂತಿಯುತ ಪ್ರತಿಭಟನೆಗಳನ್ನು ಭದ್ರತಾ ಪಡೆಗಳು ಮಾರಣಾಂತಿಕ ಬಲಪ್ರಯೋಗದ ಮೂಲಕ ಹತ್ತಿಕ್ಕಿದ ನಂತರ, ಸೇನಾ ಆಳ್ವಿಕೆ ವಿರುದ್ಧ ಅನೇಕ ವಿರೋಧಿಗಳು ಶಸ್ತ್ರಾಸ್ತ್ರಗಳನ್ನು ಕೈಗೆತ್ತಿಕೊಂಡಿದ್ದಾರೆ. ಇದರಿಂದಾಗಿ ದೇಶದ ಬಹುಭಾಗವು ಸಂಘರ್ಷಕ್ಕೆ ಸಿಲುಕಿದೆ. ಕ್ಯೌಕ್ತಾವ್ ಪಟ್ಟಣದಲ್ಲಿ ಸೋಮವಾರ ಈ ದಾಳಿ ಸಂಭವಿಸಿದೆ ಎಂದು ರಾಖೈನ್ ಮೂಲದ ಪ್ರಬಲ ಜನಾಂಗೀಯ ಸಶಸ್ತ್ರ ಗುಂಪಾದ ಅರಾಕನ್ ಆರ್ಮಿ ನೀಡಿದೆ. ಈ ಪ್ರದೇಶದಲ್ಲಿ ಅರಾಕನ್ ಆರ್ಮಿ ತನ್ನ ಪ್ರಾಬಲ್ಯ ಸಾಧಿಸಿದೆ.

ಭಾರಿ – ಸಾವು ನೋವಿಗೆ ಕಾರಣವಾದ ಉದ್ದೇಶಪೂರ್ವಕ ವೈಮಾನಿಕ ದಾಳಿಗಳಿಗೆ ನೇರವಾಗಿ ಹೊಣೆಗಾರರಾದ ವ್ಯಕ್ತಿಗಳು ಮತ್ತು ಸಂಸ್ಥೆಗಳ ವಿರುದ್ಧ ಶೀಘ್ರದಲ್ಲೇ ಪರಿಣಾಮಕಾರಿ ಪ್ರತೀಕಾರದ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಆ ಹೇಳಿಕೆಯಲ್ಲಿ ತಿಳಿಸಲಾಗಿದೆ.



**1.** ರಾಖೈನ್‌ನಲ್ಲಿ ಸಂಘರ್ಷ ತೀವ್ರ
**2.** ಆಹಾರದ ಕೊರತೆ ಉಲ್ಬಣ
**3.** ಭಾರಿ – ಸಾವು ನೋವು

**22 ಜನರ ಸ್ಥಿತಿ ಗಂಭೀರ**

ಹೇಳಿಕೆ ಬಿಡುಗಡೆ ಮಾಡಿರುವ ಅರಾಕನ್ ಆರ್ಮಿ, ಮಧ್ಯಾಹ್ನದ ಸಮಯದಲ್ಲಿ ಯುದ್ಧ ವಿಮಾನವೊಂದು ಸ್ಥಳೀಯ ಮಾರುಕಟ್ಟೆಯ ಸಮೀಪ ಎರಡು ಬಾಂಬ್‌ಗಳನ್ನು ಹಾಕಿದೆ ಎಂದು ತಿಳಿಸಿದೆ. ಇದರಿಂದಾಗಿ ಮಾರಾಟಗಾರರು, ಗ್ರಾಹಕರು ಮತ್ತು ಪಾದಚಾರಿಗಳು ಸಾವನ್ನಪ್ಪಿದ್ದಾರೆ. ಅಲ್ಲದೇ , 58 ಮಂದಿ ಗಾಯಗೊಂಡಿದ್ದು, ಅವರಲ್ಲಿ 22 ಮಂದಿಯ ಸ್ಥಿತಿ ಗಂಭೀರವಾಗಿದೆ ಎಂದು ಗುಂಪು ಹೇಳಿದೆ.

ರಾಖೈನ್‌ನ ಹಿರಿಯ ರಕ್ಷಣಾ ಕಾರ್ಯಕರ್ತ ವೈ ಹುನ್ ಆಂಗ್ ಘಟನಾ ಸ್ಥಳದಲ್ಲಿದ್ದ ರಕ್ಷಣಾ ಕಾರ್ಯಕರ್ತರ ಮಾಹಿತಿಯನ್ನು ಉಲ್ಲೇಖಿಸಿ, ಸಾವುನೋವುಗಳ ಬಗ್ಗೆ ಅಸೋಸಿಯೇಟೆಡ್ ಪ್ರೆಸ್‌ಗೆ ಖಚಿತಪಡಿಸಿದ್ದಾರೆ. ದಾಳಿ ನಡೆದ ಮಾರುಕಟ್ಟೆಯು ಆ ಪ್ರದೇಶದ ಪ್ರಮುಖ ಸಗಟು ಕೇಂದ್ರವಾಗಿದ್ದು, ರಾಜ್ಯದಾದ್ಯಂತದ ವ್ಯಾಪಾರಿಗಳು ಮತ್ತು ಗ್ರಾಹಕರು ಇಲ್ಲಿಗೆ ಬರುತ್ತಾರೆ ಎಂದು ಹೇಳಿದ್ದಾರೆ. ಇದು ರಾಖೈನ್‌ನಲ್ಲಿ ನಡೆದ ಅತ್ಯಂತ ತೀವ್ರವಾದ ವೈಮಾನಿಕ ದಾಳಿಗಳಲ್ಲಿ ಒಂದಾಗಿದೆ ಎಂದು ಆಂಗ್ ಮಾಹಿತಿ ನೀಡಿದ್ದಾರೆ.

ಅರಾಕನ್ ಆರ್ಮಿಯು ಮ್ಯಾನ್ಮಾರ್‌ನ ಕೇಂದ್ರ ಸರ್ಕಾರದಿಂದ ರಾಖೈನ್‌ನ ಜನಾಂಗೀಯ ಅಲ್ಪಸಂಖ್ಯಾತರಿಗೆ ಸ್ವಾಯತ್ತತೆ ಕೋರುವ ಚಳವಳಿಯ ನೇತೃತ್ವ ವಹಿಸಿದೆ. ಅಲ್ಲದೇ ಇದು ಸುಶಿಕ್ಷಿತ ಮತ್ತು ಸುಸಜ್ಜಿತ ಮಿಲಿಟರಿ ವಿಭಾಗವಾಗಿದೆ. 2023ರ ನವೆಂಬರ್‌ನಲ್ಲಿ ರಾಖೈನ್‌ನಲ್ಲಿ ಆಕ್ರಮಣಕಾರಿ ಕಾರ್ಯಾಚರಣೆ ಪ್ರಾರಂಭಿಸಿದ್ದು, ಆಯಕಟ್ಟಿನ ಪ್ರಮುಖ ಪ್ರಾದೇಶಿಕ ಮಿಲಿಟರಿ ಪ್ರಧಾನ ಕಚೇರಿ ಹಾಗೂ ರಾಜ್ಯದ 17 ಪಟ್ಟಣಗಳ ಪೈಕಿ 14 ಪಟ್ಟಣಗಳನ್ನು ವಶಪಡಿಸಿಕೊಂಡು ತನ್ನ ನಿಯಂತ್ರಣದಲ್ಲಿಟ್ಟುಕೊಂಡಿದೆ.

ರಾಖೈನ್‌ನಲ್ಲಿ ಸಂಘರ್ಷ ತೀವ್ರಗೊಂಡಾಗಿನಿಂದ ಮಿಲಿಟರಿಯು ವ್ಯಾಪಾರ ಮಾರ್ಗಗಳ ಮೇಲೆ ಕಠಿಣ ನಿರ್ಬಂಧಗಳನ್ನು ವಿಧಿಸಿದೆ. ಇದರಿಂದಾಗಿ ಆಹಾರದ ಕೊರತೆ ಉಲ್ಬಣಗೊಂಡಿದೆ. ಡಿಸೆಂಬರ್‌ನಲ್ಲಿ, ರಾಖೈನ್‌ನ ಮ್ರೌಕ್–ಯು ಪಟ್ಟಣದಲ್ಲಿರುವ ಆಸ್ಪತ್ರೆಯೊಂದರ ಮೇಲೆ ಮಿಲಿಟರಿ ನಡೆಸಿದ ವೈಮಾನಿಕ ದಾಳಿಯಲ್ಲಿ ಕನಿಷ್ಠ 34 ಜನರು ಸಾವನ್ನಪ್ಪಿ, 80 ಜನರು ಗಾಯಗೊಂಡಿದ್ದರು.

## ಮಿನಿ ನ್ಯೂಸ್

### ಅಮೆರಿಕದಲ್ಲಿ ಉಕ್ಕು ಘಟಕ ಸ್ಥಾಪಿಸಲಿರುವ ಭಾರತದ ಮೂಲದ ಎಸ್ಸಾರ್ ಗ್ರೂಪ್

**ವಾಷಿಂಗ್ಟನ್:** ಅಮೆರಿಕದಲ್ಲಿ ಅತಿದೊಡ್ಡ ಉಕ್ಕು ಕಾರ್ಖಾನೆಯೊಂದರಲ್ಲಿ ಹೂಡಿಕೆಗೆ ಭಾರತದ ಬಹುರಾಷ್ಟ್ರೀಯ ಸಮೂಹ ಸಂಸ್ಥೆಯಾಗಿರುವ ಎಸ್ಸಾರ್ ಗ್ರೂಪ್ ಮುಂದಾಗಿದೆ. ಸುಮಾರು 15 ಬಿಲಿಯನ್ ಡಾಲರ್‌ನಷ್ಟು ಹೂಡಿಕೆ ಮಾಡಲಿದ್ದು, ಅಯೋವಾದಲ್ಲಿ ಉಕ್ಕು ಕಾರ್ಖಾನೆ ನಿರ್ಮಾಣವಾಗಲಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ. ಓವಲ್ ಆಫೀಸ್‌ನಲ್ಲಿ ಎಸ್ಸಾರ್ ಗ್ರೂಪ್‌ನ ಸಹ ಸಂಸ್ಥಾಪಕ ರವಿ ರುಯಿಯಾ ಮತ್ತು ಅವರ ಪುತ್ರ ರೇವಂತ್ ಅವರ ಸಮ್ಮುಖದಲ್ಲಿ ಟ್ರಂಪ್ ಈ ಘೋಷಣೆಯನ್ನು ಮಾಡಿದ್ದಾರೆ. ಅಮೆರಿಕದ ಇತಿಹಾಸದಲ್ಲೇ ಅತಿದೊಡ್ಡ ಉಕ್ಕು ಕಾರ್ಖಾನೆಯನ್ನು ಅಯೋವಾ ರಾಜ್ಯದಲ್ಲಿ ಮೆಸಾಬಿ ಮೆಟಾಲಿಕ್ಸ್ ನಿರ್ಮಾಣವಾಗುತ್ತಿದೆ ಎಂದು ಘೋಷಿಸಿದ ಟ್ರಂಪ್, ಅಮೆರಿಕದಲ್ಲಿ ವಸ್ತುಗಳನ್ನು ಉತ್ಪಾದಿಸುವ ಮಹತ್ವವನ್ನು ಮರಳಿ ತಂದಿದ್ದಕ್ಕೆ ಎಸ್ಸಾರ್ ಗ್ರೂಪ್‌ನ ಮೆಸಾಬಿ ಮೆಟಾಲಿಕ್ಸ್ ಅಧ್ಯಕ್ಷ ರೇವಂತ್ ರುಯಿಯಾ ಅವರಿಗೆ ಧನ್ಯವಾದಗಳನ್ನು ಸಲ್ಲಿಸಿದರು. ಭಾರತದ ಎಸ್ಸಾರ್ ಗ್ರೂಪ್ ಒಡೆತನದ ಮಿನ್ನಿಸೋಟ ಮೂಲದ ಕಂಪನಿಯಾದ ಮೆಸಾಬಿ ಮೆಟಾಲಿಕ್ಸ್ ಈ ಹೊಸ ಉಕ್ಕು ಕಾರ್ಖಾನೆಯನ್ನು ನಿರ್ಮಿಸುತ್ತಿದೆ. 2030ರ ವೇಳೆಗೆ ಉತ್ಪಾದನೆಯನ್ನು ಪ್ರಾರಂಭಿಸಲು ಮೆಸಾಬಿ ಮೆಟಾಲಿಕ್ಸ್ ಈ ಘಟಕವನ್ನು ನಿರ್ಮಿಸುತ್ತಿದೆ ಎಂದು ಶ್ವೇತಭವನದ ಅಧಿಕಾರಿಗಳು ತಿಳಿಸಿದ್ದಾರೆ. ಈ ಘಟಕವು ವರ್ಷಕ್ಕೆ 10 ದಶಲಕ್ಷ ಟನ್ ಉಕ್ಕನ್ನು ಉತ್ಪಾದಿಸುವ ಹಾಗೂ ರಾಜ್ಯದಲ್ಲಿ 1,750ರಷ್ಟು ಶಾಶ್ವತ ಉದ್ಯೋಗಗಳನ್ನು ಸೃಷ್ಟಿಸುವ ನಿರೀಕ್ಷೆಯಿದೆ.

### FBI ಟಾಪ್–10 ಮೋಸ್ಟ್ ವಾಂಟೆಡ್ ಅಪರಾಧಿಗಳ ಪಟ್ಟಿಗೆ ಗ್ಯಾಂಗ್‌ಸ್ಟರ್ ಗೋಲ್ಡಿ ಬ್ರಾರ್

**ವಾಷಿಂಗ್ಟನ್ ಡಿಸಿ:** ಪರಾರಿಯಾಗಿರುವ ಗ್ಯಾಂಗ್‌ಸ್ಟರ್ ಸತಿಂದರ್‌ಜೀತ್ ಸಿಂಗ್ ಅಲಿಯಾಸ್ ಗೋಲ್ಡಿ ಬ್ರಾರ್ ನನ್ನು ಎಫ್ ಬಿಐ ಅತ್ಯಂತ ಬೇಕಾದ 10 ಪರಾರಿಯಾದ ಅಪರಾಧಿಗಳ ಪಟ್ಟಿಗೆ ಸೇರಿಸಿದೆ. ಆತನ ಬಂಧನಕ್ಕೆ ಕಾರಣವಾಗುವ ಮಾಹಿತಿಯನ್ನು ನೀಡುವವರಿಗೆ 1 ಮಿಲಿಯನ್ ಅಮೆರಿಕನ್ ಡಾಲರ್ ಬಹುಮಾನ ನೀಡುವುದಾಗಿ ಘೋಷಿಸಿದೆ.



ಸುಳಿವು ನೀಡಿದವರಿಗೆ 10 ಲಕ್ಷ ಡಾಲರ್ ಬಹುಮಾನ ಘೋಷಣೆ!

ಎಫ್‌ಬಿಐ ಬಿಡುಗಡೆ ಮಾಡಿದ ಪ್ರಕಟಣೆಯ ಪ್ರಕಾರ, ಅಮೆರಿಕ ಮತ್ತು ಕೆನಡಾದಾದ್ಯಂತ ನಡೆದ ಹಲವಾರು ಹಿಂಸಾತ್ಮಕ ಅಪರಾಧಗಳೊಂದಿಗೆ ನಂಟು ಹೊಂದಿರುವ ಲಾರೆನ್ಸ್ ಬಿಷ್ಣೋಯ್ ಸಂಘಟಿತ ಅಪರಾಧ ಗುಂಪಿನ ಉತ್ತರ ಅಮೆರಿಕದ ನಾಯಕನಾಗಿ ಕಾರ್ಯನಿರ್ವಹಿಸುತ್ತಿದ್ದ ಆರೋಪದ ಮೇಲೆ ಸಿಂಗ್‌ಗಾಗಿ ಹುಡುಕಾಟ ನಡೆಸಲಾಗುತ್ತಿದೆ. ಎಫ್‌ಬಿಐ ಸತಿಂದರ್‌ಜೀತ್ ಸಿಂಗ್‌ನನ್ನು ಅತ್ಯಂತ ಬೇಕಾದ 10 ಪರಾರಿಯಾದ ಅಪರಾಧಿಗಳ ಪಟ್ಟಿಗೆ ಸೇರಿಸಿದೆ. ದಕ್ಷಿಣ ಕ್ಯಾಲಿಫೋರ್ನಿಯಾ ಹಾಗೂ ಅಮೆರಿಕ ಮತ್ತು ಕೆನಡಾದಾದ್ಯಂತ ವಿವಿಧ ಹಿಂಸಾತ್ಮಕ ಕೃತ್ಯಗಳಲ್ಲಿ ತೊಡಗಿರುವ ಆರೋಪ ಹೊತ್ತಿರುವ ಲಾರೆನ್ಸ್ ಬಿಷ್ಣೋಯ್ ಸಂಘಟಿತ ಅಪರಾಧ ಗುಂಪಿನಲ್ಲಿ ಆತ ಭಾಗಿಯಾಗಿದ್ದಾನೆ ಎಂಬ ಆರೋಪ ಈತನ ಮೇಲಿದೆ. ಹೀಗಾಗಿ ಎಫ್‌ಬಿಐ ಇತನನ್ನು ಮೋಸ್ಟ್ ವಾಂಟೆಡ್ ಎಂದು ಪಟ್ಟಿ ಮಾಡಿದೆ. ಗೋಲ್ಡಿ ಬ್ರಾರ್‌ನ ಮಾಹಿತಿ ನೀಡಿದವರಿಗೆ 1,000,000 ಅಮೆರಿಕನ್ ಡಾಲರ್‌ವರೆಗೆ ಬಹುಮಾನವನ್ನು ನೀಡಲಾಗುವುದು ಎಂದು ಎಫ್‌ಬಿಐ ಅಧಿಕೃತ ಹೇಳಿಕೆಯಲ್ಲಿ ತಿಳಿಸಿದೆ.

### ವಸೂಲಾಗದ 20,000 ಕೋಟಿ ಸಂಚಾರ ದಂಡದ ಮೊತ್ತ: ವಿದ್ಯುತ್ ಬಿಲ್ ಜೊತೆ ಸೇರಿಸಲು ಸುಪ್ರೀಂ ಸಲಹೆ

**ನವದೆಹಲಿ:** ದೇಶದ ವಿವಿಧ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ವಸೂಲಾಗದ ಸಂಚಾರ ನಿಯಮ ಉಲ್ಲಂಘನೆಯ ದಂಡದ ಮೊತ್ತ ಪಾವತಿ ಮಾಡಿಸಿಕೊಳ್ಳಲು ಸುಪ್ರೀಂ ಕೋರ್ಟ್ ಮಹತ್ವದ ಸಲಹೆಯೊಂದನ್ನು ನೀಡಿದೆ.

ಸಂಚಾರ ನಿಯಮ ಉಲ್ಲಂಘನೆಯ ಸುಮಾರು 20,000 ಕೋಟಿ ಮೊತ್ತ ಬಾಕಿ ಉಳಿದಿದೆ ಎಂಬ ಕುರಿತು ತಿಳಿದುಕೊಂಡ ಸುಪ್ರೀಂ ಕೋರ್ಟ್ ಈ ಮೊತ್ತವನ್ನು ವಸೂಲಿ ಮಾಡಲು ಅವುಗಳನ್ನು ವಿದ್ಯುತ್ ಬಿಲ್‌ಗಳೊಂದಿಗೆ ಜೋಡಿಸುವಂತೆ ಸಲಹೆ ನೀಡಿದೆ. ನ್ಯಾಯಮೂರ್ತಿಗಳಾದ ಜೆ.ಬಿ. ಪರ್ದಿವಾಲಾ ಮತ್ತು ಕೆ.ವಿ. ವಿಶ್ವನಾಥನ್ ಅವರನ್ನೊಳಗೊಂಡ ಪೀಠವು ಈ ವಿಷಯದ ಕುರಿತು ಇಂದು ವಿಚಾರಣೆ ನಡೆಸಿತು. ಅಪಾರ ಸಂಖ್ಯೆಯಲ್ಲಿ ಸಂಚಾರ ನಿಯಮ ಉಲ್ಲಂಘನೆಗಾಗಿ ದಂಡವನ್ನು ವಿಧಿಸುತ್ತಿದ್ದರೂ, ದಂಡದ ವಸೂಲಾತಿ ಮಾತ್ರ ಅತ್ಯಲ್ಪವಾಗಿದೆ ಎಂದು ಪೀಠಕ್ಕೆ ತಿಳಿಸಲಾಯಿತು. ಈ ಸಂದರ್ಭದಲ್ಲಿ ಪೀಠ ಕೇವಲ ಇ ಚಲನ್‌ಗಳನ್ನು ವಿಧಿಸುತ್ತಿರುವುದು ಸಾಕಾಗುವುದಿಲ್ಲ. ದಂಡದ ವಸೂಲಾತಿಯೂ ಮುಖ್ಯ ಎಂದು ಅಭಿಪ್ರಾಯಪಟ್ಟಿತು. ದಂಡ ವಸೂಲಿಗೆ ಪರ್ಯಾಯ ಮಾರ್ಗಗಳನ್ನು ಕಂಡುಕೊಳ್ಳಬೇಕಾದ ಅಗತ್ಯವಿದೆ. ಅಷ್ಟೇ ಅಲ್ಲ ಪಾವತಿಯಾಗದ ಸಂಚಾರ ದಂಡದ ಮೊತ್ತವನ್ನು ವಿದ್ಯುತ್ ಬಾಕಿಯೊಂದಿಗೆ ಸೇರಿಸಬಹುದು ಹಾಗೂ ವಿದ್ಯುತ್ ಬಿಲ್ ಪಾವತಿಸಿದಿದ್ದರೆ, ಸಂಪರ್ಕ ಕಡಿತವಾಗಲಿದೆ. ಇದರಿಂದ ಬಾಕಿ ಉಳಿಸಿಕೊಂಡಿರುವ ಪಾವತಿ ಮೊತ್ತವನ್ನು ಅದರಲ್ಲಿ ಸೇರಿಸಿದಾಗ ಎರಡೂ ಮೊತ್ತವು ಪಾವತಿಯಾದಂತಾಗುತ್ತದೆ. ಈ ರೀತಿ ದಂಡದ ಮೊತ್ತ ಪಾವತಿಗೆ ಪರ್ಯಾಯ ಮಾರ್ಗಗಳನ್ನು ಕಂಡುಕೊಳ್ಳಬೇಕಿದೆ ಎಂದು ಪೀಠ ಅಭಿಪ್ರಾಯಪಟ್ಟಿತು.

### ಅತ್ಯಾಧುನಿಕ Kingfish Drone ಇರಾನ್ ವಶಕ್ಕೆ..!

**ಟೆಹ್ರಾನ್:** ಜಾಗತಿಕ ರಾಜಕೀಯ ವಲಯದಲ್ಲಿ ತಲ್ಲಣ ಮೂಡಿಸುವಂತಹ ಘಟನೆಯೊಂದರಲ್ಲಿ, ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ ನೌಕಾಪಡೆಯು ಹಾರ್ಮುಜ್ ಜಲಸಂಧಿಯಲ್ಲಿ ಅಮೆರಿಕದ ಎರಡನೇ ಅತ್ಯಾಧುನಿಕ ನೀರೊಳಗಿನ ಡ್ರೋನ್ ಅನ್ನು ವಶಪಡಿಸಿಕೊಂಡಿರುವುದಾಗಿ ಅಧಿಕೃತವಾಗಿ ಘೋಷಿಸಿದೆ. ಮೊದಲಿಗೆ ಈ ಡ್ರೋನ್ ಅನ್ನು 'REMUS 600' ಎಂದು ಗುರುತಿಸಲಾಗಿದ್ದರೂ, ಇರಾನ್ ಮಿಲಿಟರಿ ವಕ್ತಾರರಾದ ಬ್ರಿಗೇಡಿಯರ್ ಜನರಲ್ ಹೊಸೈನ್ ಮೊಹೆಬ್ಬಿ ಅವರು ಈಗ ಇದು ಅಮೆರಿಕ ಮಿಲಿಟರಿಗೆ ಸೇರಿದ ಬಹುಕೋಟಿ ಮೌಲ್ಯದ 'Mk 18 Mod 2 Kingfish' ಎಂಬ ಸ್ವಯಂಚಾಲಿತ ನೀರೊಳಗಿನ ವಾಹನ ಎಂದು ಸ್ಪಷ್ಟಪಡಿಸಿದ್ದಾರೆ. ಇರಾನ್‌ನ ಸರ್ಕಾರಿ ಸುದ್ದಿ ಸಂಸ್ಥೆ 'IRIB' ಪ್ರಸಾರ ಮಾಡಿದ ವರದಿಯ ಪ್ರಕಾರ, ಇರಾನ್ ಸೇನೆಯು ತನ್ನ ಅತ್ಯಾಧುನಿಕ ಮಿಲಿಟರಿ ಇಂಟೆಲಿಜೆನ್ಸ್ ಮತ್ತು ಎಲೆಕ್ಟ್ರಾನಿಕ್ ವಾರ್‌ಫೇರ್ ತಂತ್ರಜ್ಞಾನವನ್ನು ಬಳಸಿ ಈ ಕ್ಲಿಷ್ಟಕರ ಕಾರ್ಯಾಚರಣೆಯನ್ನು ಯಶಸ್ವಿಗೊಳಿಸಿದೆ ಎಂದು ತಿಳಿಸಿದೆ. ಅಮೆರಿಕದ ಈ ರಹಸ್ಯ ಡ್ರೋನ್ ಜಲಸಂಧಿಯಲ್ಲಿ ಇರಾನ್‌ನ ಮಿಲಿಟರಿ ಚಟುವಟಿಕೆಗಳ ಮೇಲೆ ಬೇಹುಗಾರಿಕೆ ನಡೆಸುತ್ತಿತ್ತು ಎಂದು ಇರಾನ್ ಆರೋಪಿಸಿದೆ. ಸದ್ಯ ಈ ಡ್ರೋನ್ ಅನ್ನು ಇರಾನ್‌ನ ತಾಂತ್ರಿಕ ತಜ್ಞರ ವಶಕ್ಕೆ ನೀಡಲಾಗಿದ್ದು, ಅದರೊಳಗಿರುವ ರಹಸ್ಯ ಡೇಟಾವನ್ನು ಹೊರತೆಗೆಯುವ ಪ್ರಕ್ರಿಯೆ ಆರಂಭವಾಗಿದೆ. ಅಮೆರಿಕಕ್ಕೆ ಸೇರಿದ ಈ ನೀರೊಳಗಿನ ಸಾಧನವು ಅತ್ಯಾಧುನಿಕ ಸ್ವಯಂಚಾಲಿತ ನೀರೊಳಗಿನ ವಾಹನವಾಗಿದ್ದು, ಸೋನಾರ್ ಹಾಗೂ ನಿಖರ ಸಂಚರಣೆ ವ್ಯವಸ್ಥೆ ಹೊಂದಿದೆ ಎಂದು ಐಆರ್‌ಜಿಸಿ ಹೇಳಿದೆ. ಹಾರ್ಮುಜ್ ಜಲಸಂಧಿ ತೆರೆದಿರುವುದು ಮಾತ್ರವಲ್ಲ, ಅಮೆರಿಕದ ಜಲಾಂತರ್ಗಾಮಿ ನೌಕೆಗಳನ್ನು ಗುರಿಯಾಗಿಸುವ ಐಆರ್‌ಜಿಸಿ ನೌಕಾಪಡೆಯ ಕಾರ್ಯಾಚರಣೆ ಪ್ರದೇಶವಾಗಿದೆ.



# ವಿಷ್ಣುವರ್ಧನ್ ಅಮೃತ ಮಹೋತ್ಸವ





ದಿವಂಗತ ನಟ ಡಾ. ವಿಷ್ಣುವರ್ಧನ್ ಅವರ 75ನೇ ಜನ್ಮದಿನದ ವರ್ಷಾಚರಣೆ ಅಂಗವಾಗಿ ಬೆಂಗಳೂರಿನಲ್ಲಿ ಭಾನುವಾರ ನಡೆದ 'ಡಾ. ವಿಷ್ಣುವರ್ಧನ್ ಅಮೃತ ಮಹೋತ್ಸವ'ದಲ್ಲಿ ನಟ ಶಿವರಾಜ್‌ಕುಮಾರ್ ಭಾಗವಹಿಸಿ, ವಿಷ್ಣುವರ್ಧನ್ ಅವರೊಂದಿಗಿನ ತಮ್ಮ ಆತ್ಮೀಯ ಬಾಂಧವ್ಯವನ್ನು ನೆನಪಿಸಿಕೊಂಡರು.

ತಮ್ಮ ಕುಟುಂಬ ಹಾಗೂ ವಿಷ್ಣುವರ್ಧನ್ ಕುಟುಂಬದ ನಡುವಿನ ಸಂಬಂಧದ ಕುರಿತು ವರ್ಷಗಳಿಂದ ಕೇಳಿಬರುತ್ತಿದ್ದ ವಿವಿಧ ಮಾತುಗಳಿಗೂ ಅವರು ತಮ್ಮದೇ ರೀತಿಯಲ್ಲಿ ಪ್ರತಿಕ್ರಿಯಿಸಿದರು.

ವಿಷ್ಣು ಸೇನಾ ಸಮಿತಿ ಆಯೋಜಿಸಿದ್ದ ಈ ಅದ್ದೂರಿ ಕಾರ್ಯಕ್ರಮದಲ್ಲಿ ಕನ್ನಡ ಚಿತ್ರರಂಗದ ಗಣ್ಯರು, ನಿರ್ದೇಶಕರು, ತಂತ್ರಜ್ಞರು ಹಾಗೂ ಕರ್ನಾಟಕದ ವಿವಿಧ ಭಾಗಗಳಿಂದ ಆಗಮಿಸಿದ್ದ ಸಾವಿರಾರು ಅಭಿಮಾನಿಗಳು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಶಿವರಾಜ್‌ಕುಮಾರ್ ವೇದಿಕೆಗೆ ಆಗಮಿಸಿದಾಗ ಕಾರ್ಯಕ್ರಮ ಮತ್ತಷ್ಟು ಭಾವುಕ ಕ್ಷಣಕ್ಕೆ ಸಾಕ್ಷಿಯಾಯಿತು.

ಭಾರಿ ಸಂಖ್ಯೆಯಲ್ಲಿ ಸೇರಿದ್ದ ಅಭಿಮಾನಿಗಳನ್ನುದ್ದೇಶಿಸಿ ಮಾತನಾಡಿದ ಶಿವರಾಜ್‌ಕುಮಾರ್ ಅವರು, ರಾಜ್‌ಕುಮಾರ್ ಹಾಗೂ ವಿಷ್ಣುವರ್ಧನ್ ಕುಟುಂಬಗಳ ನಡುವಿನ ಸಂಬಂಧದ ಬಗ್ಗೆ ಹೊರಗಿನಿಂದ ಹರಡುತ್ತಿದ್ದ ಹಲವು ಊಹಾಪೋಹಗಳಿಗೆ ತೆರೆ ಎಳೆಯುವ ರೀತಿಯಲ್ಲಿ ಮಾತನಾಡಿದರು. ವಿಷ್ಣುವರ್ಧನ್ ಅವರ ಮೇಲಿನ ನಮ್ಮ ಪ್ರೀತಿ ಮತ್ತು ಗೌರವ ನಮಗೆ ಗೊತ್ತಿದೆ, ನಿಮಗೆಲ್ಲ ಅಭಿಮಾನಿಗಳಿಗೂ ಗೊತ್ತಿದೆ. ಅದನ್ನು ಬೇರೆಯವರಿಗೆ ತೋರಿಸಬೇಕಾಗಿಲ್ಲ, ಯಾರಿಗೂ ಸಾಬೀತುಪಡಿಸಬೇಕಾಗಿಲ್ಲ ಎಂದು ಶಿವರಾಜ್‌ಕುಮಾರ್ ಅವರು ಭಾವುಕರಾಗಿ ಹೇಳಿದರು. ಅವರ ಈ ಮಾತಿಗೆ ಅಭಿಮಾನಿಗಳಿಂದ ಭಾರಿ ಚಪ್ಪಾಳೆ ಕೇಳಿಬಂದಿತು. "ನಾನು ಇಂದು ವಿಷ್ಣುವರ್ಧನ್ ಅವರಿಗಾಗಿ ಇಲ್ಲಿಗೆ ಬಂದಿದ್ದೇನೆ. ಮುಂದೆಯೂ ಬರುತ್ತೇನೆ. ನೀವು ಯಾವಾಗ ಕರೆದರೂ ನಾನು ಇಲ್ಲಿಗೆ ಬರುತ್ತೇನೆ" ಎಂದು ಹೇಳಿದರು.



ಬಳಿಕ ಬಾಲ್ಯದ ದಿನಗಳನ್ನು ಮೆಲುಕು ಹಾಕಿದ ಶಿವರಾಜ್‌ಕುಮಾರ್, ವಿಷ್ಣುವರ್ಧನ್ ಅವರೊಂದಿಗಿನ ತಮ್ಮ ಮೊದಲಿನ ಒಡನಾಟವನ್ನೂ ನೆನಪಿಸಿಕೊಂಡರು.

ನಾನು ಚಿಕ್ಕವನಿದ್ದಾಗ ವಿಷ್ಣು ಅಂಕಲ್ ಅವರ ಕೈ ಹಿಡಿದುಕೊಂಡು 'ಭೂತಯ್ಯನ ಮಗ ಅಯ್ಯು' ಚಿತ್ರದ (1974) 100ನೇ ದಿನದ ಸಂಭ್ರಮಕ್ಕೆ ಹೋಗಿದ್ದೆ. ಆಗ ಆರಂಭವಾದ ಆ ಬಾಂಧವ್ಯ ಕೊನೆಯವರೆಗೂ ಹಾಗೆಯೇ ಉಳಿಯಿತು. ಅಪ್ಪಾಜಿ (ಡಾ. ರಾಜ್‌ಕುಮಾರ್) ಅವರಿಗೆ ವಿಷ್ಣು ಸರ್ ಮೇಲೆ ಅಪಾರ ಪ್ರೀತಿ ಇತ್ತು. ಅವರಿಬ್ಬರ ನಡುವಿನ ಸಂಬಂಧವೇ ವಿಶಿಷ್ಟವಾಗಿತ್ತು. ಹೊರಗಿನವರು ಏನೇ ಮಾತನಾಡಿದರೂ ಆ ಬಾಂಧವ್ಯದಲ್ಲಿ ಯಾವುದೇ ಬದಲಾವಣೆಯಾಗಲಿಲ್ಲ ಎಂದು ಹೇಳಿದರು.

"ವಿಷ್ಣು ಅಂಕಲ್ ನಮ್ಮೊಂದಿಗೆ ಇಲ್ಲ ಎಂದು ನಾನು ಎಂದಿಗೂ ಭಾವಿಸುವುದಿಲ್ಲ. ಅವರು ಯಾವುದೋ ಒಂದು ಮೂಲೆಯಲ್ಲಿ, ಆತ್ಮೀಯವಾಗಿ, ಸದಾ ನಮ್ಮ ಪಕ್ಕದಲ್ಲೇ ಇದ್ದಾರೆ" ಎಂದು ಭಾವುಕರಾಗಿ ನುಡಿದರು.

ವಿಷ್ಣುವರ್ಧನ್ ಅವರ 40 ವರ್ಷಗಳಿಗೂ ಅಧಿಕ ಕಾಲದ ಅದ್ಭುತ ಸಿನಿ ಕೊಡುಗೆಯನ್ನು ಸ್ಮರಿಸಲು ನಡೆದ 'ಅಮೃತ ಮಹೋತ್ಸವ'ದಲ್ಲಿ ಕನ್ನಡ ಚಿತ್ರರಂಗದ ಹಲವು ಗಣ್ಯರು ಒಂದೇ ವೇದಿಕೆಯಲ್ಲಿ ಸೇರಿದ್ದರು.

ಸಾವಿರಾರು ಅಭಿಮಾನಿಗಳ ಸಮ್ಮುಖದಲ್ಲಿ ನಡೆದ ಈ ಕಾರ್ಯಕ್ರಮ ದಿವಂಗತ ನಟನ ಅಳಿಸಲಾಗದ ನೆನಪು ಮತ್ತು ಪರಂಪರೆಗೆ ಸಾಕ್ಷಿಯಾಯಿತು.

## ಸಾಹಸ ಸಿಂಹನ ನೆನಪಿನಲ್ಲಿ ಸ್ಯಾಂಡಲ್‌ವುಡ್: ತಾರೆಯರ ಸಮಾಗಮ..!

ಕನ್ನಡ ಚಿತ್ರರಂಗದ ಸಾಹಸ ಸಿಂಹ ಡಾ. ವಿಷ್ಣುವರ್ಧನ್ ಅವರ 75ನೇ ಜನ್ಮದಿನೋತ್ಸವದ ಅಂಗವಾಗಿ ಆಯೋಜಿಸಲಾಗಿದ್ದ "ವಿಷ್ಣುವರ್ಧನ್ ಅಮೃತ ಮಹೋತ್ಸವ" ಬೆಂಗಳೂರಿನ ನಂದಿ ಲಿಂಕ್ ಮೈದಾನದಲ್ಲಿ ಅತ್ಯಂತ ವಿಜೃಂಭಣೆಯಿಂದ ನೆರವೇರಿತು.

ವಿಷ್ಣುವರ್ಧನ್ ಅವರ 75ನೇ ಜನ್ಮದಿನದ ವರ್ಷಾಚರಣೆ ಅಂಗವಾಗಿ ಬೆಂಗಳೂರಿನ ಹೊಸಕೆರೆಹಳ್ಳಿಯ ನಂದಿ ಲಿಂಕ್ ಮೈದಾನದಲ್ಲಿ ಭಾನುವಾರ 'ವಿಷ್ಣುವರ್ಧನ್ ಅಮೃತ ಮಹೋತ್ಸವ' ಅದ್ದೂರಿಯಾಗಿ ನಡೆಯಿತು.

ವೀರಕಪುತ್ರ ಶ್ರೀನಿವಾಸ್ ನೇತೃತ್ವದ ಡಾ. ವಿಷ್ಣು ಸೇನಾ ಸಮಿತಿ ಈ ಕಾರ್ಯಕ್ರಮವನ್ನು ರೂಪಿಸಿದ್ದು, ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ಹಾಗೂ ಎಸ್.ವಿ. ರಾಜೇಂದ್ರ ಸಿಂಗ್ ಬಾಬು ಅವರ ಬೆಂಬಲವೂ ಇತ್ತು.

ದಿನವಿಡೀ ನಡೆದ ವಿಷ್ಣುವರ್ಧನ್ ಅಮೃತ ಮಹೋತ್ಸವದಲ್ಲಿ ಕನ್ನಡ ಹಾಗೂ ದಕ್ಷಿಣ ಭಾರತದ ಚಿತ್ರರಂಗದ ಹಲವು ಗಣ್ಯರು ಭಾಗವಹಿಸಿದರೆ, ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ್ದ ಸಾವಿರಾರು ಅಭಿಮಾನಿಗಳು ತಮ್ಮ ನೆಚ್ಚಿನ ನಟನಿಗೆ ಗೌರವ ಸಲ್ಲಿಸಿದರು. ಆದರೆ, ಈ ಸಂಭ್ರಮದ ನಡುವೆಯೂ ವಿಷ್ಣುವರ್ಧನ್ ಅವರ ಕುಟುಂಬದ ಸದಸ್ಯರಾದ ಹಿರಿಯ ನಟಿ ಭಾರತಿ ವಿಷ್ಣುವರ್ಧನ್ ಹಾಗೂ ನಟ–ಅಳಿಯ ಅನಿರುದ್ಧ್ ಜಟ್ಕರ್ ಸೇರಿದಂತೆ ಕುಟುಂಬದವರು ಕಾರ್ಯಕ್ರಮದಲ್ಲಿ ಕಾಣಿಸಿಕೊಳ್ಳದಿರುವುದು ಗಮನ ಸೆಳೆಯಿತು. ಕಾರ್ಯಕ್ರಮದ ಆಯೋಜನೆ ಹಾಗೂ ನಿರ್ವಹಣೆ ವಿಚಾರದಲ್ಲಿ ಆಯೋಜಕರೊಂದಿಗೆ ಉಂಟಾದ ಭಿನ್ನಾಭಿಪ್ರಾಯದ ಹಿನ್ನೆಲೆಯಲ್ಲಿ ಕುಟುಂಬದವರು ಕಾರ್ಯಕ್ರಮದಿಂದ ದೂರ ಉಳಿದಿದ್ದಾರೆ ಎಂದು ವರದಿಯಾಗಿದೆ. ಇದರಿಂದ ದಿವಂಗತ ನಟನ ಆಪ್ತ ವಲಯದಲ್ಲಿ ಮುಂದುವರಿದಿರುವ ಭಿನ್ನಾಭಿಪ್ರಾಯಗಳ ವಿಚಾರವೂ ಮತ್ತೆ ಮುನ್ನೆಲೆಗೆ ಬಂದಿದೆ.

# ಪ್ರೇಮದ ಊರಲಿ ಯಶಸ್ವಿ ಪ್ರದರ್ಶನ



ಚಿತ್ರಮಂದಿರಗಳಿಗೆ ಪ್ರೇಕ್ಷಕರು ಬರುತ್ತಿಲ್ಲ ಎಂಬ ಮಾತುಗಳ ನಡುವೆಯೇ, ಕೌಟುಂಬಿಕ ಕಥಾಹಂದರ ಹೊಂದಿರುವ 'ಪ್ರೇಮದ ಊರಲಿ' ಸಿನಿಮಾ ರಾಜ್ಯಾದ್ಯಂತ ಭರ್ಜರಿ ಪ್ರದರ್ಶನ ಕಾಣುತ್ತಿದೆ. ಬಿಡುಗಡೆಯಾದ ದಿನದಿಂದ ದಿನಕ್ಕೆ ಪ್ರೇಕ್ಷಕರ ಸಂಖ್ಯೆ ಹೆಚ್ಚುತ್ತಿದ್ದು, ಚಿತ್ರಕ್ಕೆ ಸಿಗುತ್ತಿರುವ ಉತ್ತಮ ಪ್ರತಿಕ್ರಿಯೆಯಿಂದಾಗಿ ಚಿತ್ರಮಂದಿರಗಳಲ್ಲಿ ಶೋಗಳ ಸಂಖ್ಯೆಯನ್ನು ಹೆಚ್ಚಿಸಲಾಗಿದೆ. ಹಲವೆಡೆ ಹೌಸ್‌ಫುಲ್ ಪ್ರದರ್ಶನ ಕಾಣುವ ಮೂಲಕ ಈ ಚಿತ್ರ ಸ್ಯಾಂಡಲ್‌ವುಡ್‌ನಲ್ಲಿ ಹೊಸ ಭರವಸೆ ಮೂಡಿಸಿದೆ.

ರಾಷ್ಟ್ರಪ್ರಶಸ್ತಿ ವಿಜೇತ ನಿರ್ದೇಶಕ ಮನೋಜ್ ಕುಮಾರ್ ಸಾರಥ್ಯದಲ್ಲಿ ಮೂಡಿಬಂದಿರುವ 'ಪ್ರೇಮದ ಊರಲಿ' ಒಂದು ಸರಳ, ಸುಂದರ ಹಾಗೂ ಭಾವನಾತ್ಮಕ ಹಳ್ಳಿಯ ಕಥೆಯಾಗಿದೆ. ಹಚ್ಚಹಸಿರಿನ ಗ್ರಾಮೀಣ ಪರಿಸರದಲ್ಲಿ ಸಾಗುವ ಈ ಸಿನಿಮಾ, ಸಂಕೀರ್ಣ ಕೌಟುಂಬಿಕ ಸಂಬಂಧಗಳು, ಮನುಷ್ಯತ್ವ ಮತ್ತು ಮುಗ್ಧ ಪ್ರೀತಿಯ ಸೂಕ್ಷ್ಮ ಎಳೆಗಳನ್ನು ಅದ್ಭುತವಾಗಿ ತೆರೆದಿಟ್ಟಿದೆ. ಇಂದಿನ ಅಬ್ಬರದ ಮತ್ತು ಆಕ್ಷನ್ ಸಿನಿಮಾಗಳ ನಡುವೆ, ಪ್ರೇಕ್ಷಕರ ಮನಸ್ಸಿಗೆ ಆಪ್ತವಾಗುವ ಒಂದು ಪರಿಪೂರ್ಣ 'ಫೀಲ್ ಗುಡ್' ಚಿತ್ರವಾಗಿ ಇದು ಗಮನಸೆಳೆಯುತ್ತಿದೆ.

ಚಿತ್ರದಲ್ಲಿ ನಾಯಕ ಶ್ರೀರಾಮ್, ನಾಯಕಿಯರಾದ ರಮಿಕಾ ಶಿವು ಮತ್ತು ತಪಸ್ವಿನಿ ಪೂಣಚ್ಚ ತಮ್ಮ ಸಹಜ ನಟನೆಯ ಮೂಲಕ ಪಾತ್ರಗಳಿಗೆ ಜೀವ ತುಂಬಿದ್ದಾರೆ. ಹಿರಿಯ ನಟ ರಂಗಾಯಣ ರಘು ಅವರು ಕೌಟುಂಬಿಕ ಬಿಕ್ಕಟ್ಟಿನ ಭಾವನಾತ್ಮಕ ಸನ್ನಿವೇಶಗಳನ್ನು ಅತ್ಯಂತ ಪ್ರಬುದ್ಧವಾಗಿ ನಿಭಾಯಿಸಿ ಚಿತ್ರದ ತೂಕವನ್ನು ಹೆಚ್ಚಿಸಿದ್ದಾರೆ.

ಜೊತೆಗೆ ಸುನಾದ್ ಗೌತಮ್ ಅವರ ಸುಮಧುರ ಸಂಗೀತ ಹಾಗೂ ಹಿನ್ನೆಲೆ ಸಂಗೀತ ಚಿತ್ರದ ಜೀವಾಳವಾಗಿದ್ದು, ರಾಜ್‌ಕಾಂತ್ ಅವರ ಕ್ಯಾಮರಾ ಕೈಚಳಕದಲ್ಲಿ ಹಳ್ಳಿಯ ತೇವದ ಅಂಗಳ ಮತ್ತು ಹಸಿರು ಗದ್ದೆಗಳ ಸೊಬಗು ಕಣ್ಮನ ಸೆಳೆಯುವಂತೆ ಸೆರೆಯಾಗಿದೆ. ಒಟ್ಟಾರೆಯಾಗಿ ಕುಟುಂಬ ಸಮೇತರಾಗಿ ನೋಡಬಹುದಾದ ಈ ಚಿತ್ರ ಗಲ್ಲಾಪೆಟ್ಟಿಗೆಯಲ್ಲಿ ಉತ್ತಮ ಯಶಸ್ಸಿನತ್ತ ಮುನ್ನಡೆಯುತ್ತಿದೆ.

# ರಾಮರಸದಲ್ಲಿ ವೀರ ದುರ್ಮುಗಿಯಾಗಿ ಡೆಡ್ಲಿ ಆದಿತ್ಯ



ಕನ್ನಡದ ಬಹುನಿರೀಕ್ಷಿತ ಪೌರಾಣಿಕ ರಾಮರಸ ಚಿತ್ರ ಬೃಹತ್ ಮಟ್ಟದಲ್ಲಿ ಮೂಡಿಬರುತ್ತಿದೆ. ಚಿತ್ರೀಕರಣದ ಎಲ್ಲಾ ಹಂತಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ, ಹೈ–ಎಂಡ್–ಪೋಸ್ಟ್–ಪ್ರೊಡಕ್ಷನ್ ಹಂತಕ್ಕೆ ಕಾಲಿಟ್ಟಿರುವ ಚಿತ್ರತಂಡ, ಇದೀಗ ತನ್ನ ತಾರಾಬಳಗದ ಮತ್ತೊಂದು ಪ್ರಮುಖ ಪಾತ್ರವನ್ನು ಪ್ರೇಕ್ಷಕರಿಗೆ ಪರಿಚಯಿಸಿದೆ.

ಡೆಡ್ಲಿ ಸೋಮ, ಎದೆಗಾರಿಕೆ ಅಂತಹ ಸಿನಿಮಾಗಳ ಮೂಲಕ ಪ್ರೇಕ್ಷಕರ ಮೆಚ್ಚುಗೆ ಪಡೆದುಕೊಂಡಿರುವ ಆದಿತ್ಯ ರಾಮರಸ ಚಿತ್ರತಂಡಕ್ಕೆ ಸೇರ್ಪಡೆಯಾಗಿದ್ದಾರೆ. ಈ ಚಿತ್ರದಲ್ಲಿ ವೀರ ದುರ್ಮುರ್ಗಿ ಅವತಾರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಹಿಂದೆಂದೂ ನಿರ್ವಹಿಸಿರದ ಪಾತ್ರವನ್ನವರು ಇಲ್ಲಿ ನಿರ್ವಹಿಸಿದ್ದಾರೆ.

ಅವರ ಪಾತ್ರ ಕೇವಲ ಎಂಟ್ರಿ ಅಲ್ಲ, ಕಥೆಯ ಮಹತ್ವದ ತಿರುವಾಗಿ ಪ್ರೇಕ್ಷಕರಿಗೆ ಮನರಂಜನೆ ಕೊಡಲಿದೆ. ವೀರ ದುರ್ಮುರ್ಗಿ ಶಕ್ತಿ, ಭಯ ಮತ್ತು ವಿನಾಶದ ಸಂಕೇತ. ಈ ಪಾತ್ರವು ರಾಮರಸದ ನಿರೂಪಣೆಯನ್ನು ಮತ್ತೊಂದು ಹಂತಕ್ಕೆ ಕೊಂಡೊಯ್ಯಲಿದೆ. ದಶ ಮಹಾವಿದ್ಯೆಯ ರಹಸ್ಯದ ಬಹುಪಾಲು ಭಾಗವು ಅವರ ಪಾತ್ರದ ಸುತ್ತವೇ ಸುತ್ತುತ್ತದೆ. ರಾಮರಸವು ಸಾಂಪ್ರದಾಯಿಕ ಜಾನಪದ ಮತ್ತು ಸ್ಥಳೀಯ ಆಧ್ಯಾತ್ಮಿಕ ಆಚರಣೆಗಳಿಂದ ಸ್ಫೂರ್ತಿ ಪಡೆದ, ಸ್ಥಳೀಯವಾಗಿ ಬೇರೂರಿದ ಫ್ಯಾಂಟಸಿ ಕಥೆಯನ್ನು ಹೊಂದಿರುವ ಚಿತ್ರ. ಪರಾಶಕ್ತಿಯ ದೈವಿಕ ಕಥೆಯನ್ನು ಒಳಗೊಂಡಿರುವ ಚಿತ್ರದಲ್ಲಿ ಬಿಗ್ ಬಾಸ್ ಕನ್ನಡ ವಿನ್ನರ್ ಕಾರ್ತಿಕ್ ಮಹೇಶ್ ಪ್ರಮುಖ ಪಾತ್ರದಲ್ಲಿದ್ದರೆ, ಪ್ರಜ್ವಲ್ ದೇವರಾಜ್ ಗುರು ಸಿದ್ಧನಾಗಿ ಮುಖ್ಯಭೂಮಿಕೆಯಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಬಾಲಿವುಡ್ ಮತ್ತು ಸೌತ್ ಸಿನಿಮಾ ಇಂಡಸ್ಟ್ರಿಯಲ್ಲಿ ಸಂಚಲನ ಮೂಡಿಸಿರುವ ಅದಾ ಶರ್ಮಾ ಶಕ್ತಿಯುತ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಉಳಿದಂತೆ ಕಾಮಿಡಿ ಕಿಂಗ್ ಶರಣ್ ಇಂದ್ರ ದೇವೇಂದ್ರನಾಗಿ ಕಾಣಿಸಿಕೊಳ್ಳಲಿದ್ದು, ಗ್ಲಾಮರಸ್ ನಟಿ ಹೇಬಹ್ ಪಟೇಲ್, ಬಾಲಾಜಿ ಮನೋಹರ್, ವೈಶಾಲಿ ತಾರಾಬಳಗದಲ್ಲಿದ್ದಾರೆ. ಇನ್ನೂ ಅನೇಕ ಪ್ರಮುಖ ತಾರೆಯರು ತಂಡದಲ್ಲಿದ್ದು, ಹೆಸರುಗಳನ್ನು ಶೀಘ್ರದಲ್ಲೇ ಘೋಷಿಸಲಾಗುವುದು. ಪುನೀತ್ ರಾಜ್‌ಕುಮಾರ್ ಅವರ ರಣವಿಕ್ರಮ ಸಿನಿಮಾದಲ್ಲಿ ನಟಿಸಿದ್ದ ಸೌತ್ ನಟಿ ಅದಾ ಶರ್ಮಾ ಈಗಾಗಲೇ ಕನ್ನಡಿಗರಿಗೆ ಪರಿಚಿತರು. ದಿ ಕೇರಳ ಸ್ಟೋರಿ ಮೂಲಕ ದೇಶಾದ್ಯಂತ ದೊಡ್ಡ ಸಂಚಲನ ಸೃಷ್ಟಿಸಿದ್ದ ನಟಿ, ಇದೀಗ ರಾಮರಸ ಸಿನಿಮಾ ಮೂಲಕ ಸ್ಯಾಂಡಲ್‌ವುಡ್‌ಗೆ ಮರಳಿದ್ದಾರೆ. ಇತ್ತೀಚೆಗಷ್ಟೇ ಅವರ ಪೋಸ್ಟರ್ ಅನಾವರಣಗೊಂಡಿತ್ತು.

# ಏಷ್ಯನ್ ಗೇಮ್ಸ್ ಸೆಮಿಫೈನಲ್‌ನಲ್ಲಿ ಭಾರತ–ಪಾಕಿಸ್ತಾನ ಮುಖಾಮುಖಿ; ಪಂದ್ಯ ಯಾವಾಗ?

ಪ್ರಸ್ತುತ ನಡೆಯುತ್ತಿರುವ ಏಷ್ಯನ್ ಗೇಮ್ಸ್‌ನಲ್ಲಿ ಪುರುಷರ ಹಾಕಿ ಪಂದ್ಯದಲ್ಲಿ ಭಾರತ ಮತ್ತು ಪಾಕಿಸ್ತಾನ ತಂಡಗಳು ಮುಖಾಮುಖಿ ಆಗುತ್ತಿವೆ. ಭಾರತ ತಂಡ ಪೂಲ್ ಎ ನಲ್ಲಿ ಆಡಿದ ಎಲ್ಲಾ ಐದು ಪಂದ್ಯಗಳನ್ನು ಗೆದ್ದು ಸೆಮಿಫೈನಲ್ ಪ್ರವೇಶಿಸಿದೆ. ಭಾರತ ಮೊದಲು ಇಂಡೋನೇಷ್ಯಾವನ್ನು 13–1 ಅಂತರದಿಂದ ಸೋಲಿಸಿತು. ನಂತರ ದಕ್ಷಿಣ ಕೊರಿಯಾವನ್ನು 8–2 ಅಂತರದಿಂದ ಸೋಲಿಸಿತು. ಮೂರನೇ ಪಂದ್ಯದಲ್ಲಿ ಸಿಂಗಾಪುರವನ್ನು 7–0 ಅಂತರದಿಂದ ಮತ್ತು ಜಪಾನ್ ಅನ್ನು 2–0 ಅಂತರದಿಂದ ಮಣಿಸಿತು.




ಭಾರತ ತನ್ನ ಅಂತಿಮ ಗುಂಪು ಹಂತದ ಪಂದ್ಯವನ್ನು ಬಾಂಗ್ಲಾದೇಶದ ವಿರುದ್ಧ ಆಡಿತು. ಈ ಪಂದ್ಯದಲ್ಲೂ ಏಕಪಕ್ಷೀಯ ಗೆಲುವು ಸಾಧಿಸಿತು. ಭಾರತ ತಂಡವು ಬಾಂಗ್ಲಾದೇಶವನ್ನು 10–0 ಅಂತರದಿಂದ ಸೋಲಿಸಿತು. ನಾಯಕ ಹರ್ಮನ್‌ಪ್ರೀತ್ ಭಾರತ ಪರ ಮೂರು ಗೋಲುಗಳನ್ನು ಗಳಿಸಿದರು. ಅವರು 27, 40 ಮತ್ತು 45 ನೇ ನಿಮಿಷಗಳಲ್ಲಿ ಗೋಲು ಗಳಿಸಿದರು. ಅವರಲ್ಲದೆ, ಸಿಲಾನಂದ ಲಾಕ್ರ 44 ಮತ್ತು 45 ನೇ ನಿಮಿಷಗಳಲ್ಲಿ ಎರಡು ಗೋಲುಗಳನ್ನು ಗಳಿಸಿದರು.



ಮತ್ತೊಂದೆಡೆ, ಅಭಿಷೇಕ್, ಜುಗ್ರಾಜ್ ಸಿಂಗ್, ಸುಖ್‌ಜಿತ್ ಸಿಂಗ್, ಸಂಜಯ್ ಮತ್ತು ಮಂದೀಪ್ ಸಿಂಗ್ ತಲಾ ಒಂದು ಗೋಲು ಗಳಿಸಿದರು.

**ಭಾರತ ಮತ್ತು ಪಾಕಿಸ್ತಾನ ನಡುವಿನ ಪಂದ್ಯ ಯಾವಾಗ ನಡೆಯಲಿದೆ?** ಭಾರತ ಮತ್ತು ಪಾಕಿಸ್ತಾನ ನಡುವಿನ ಸೆಮಿಫೈನಲ್ ಪಂದ್ಯವು ಜಪಾನ್‌ನ ಕಾಕಮಿಗಹರಾದ ಗಿಫು ಪ್ರಿಫೆಕ್ಚರಲ್ ಗ್ರೀನ್ ಕ್ರೀಡಾಂಗಣದಲ್ಲಿ ನಡೆಯಲಿದೆ. ಅಕ್ಟೋಬರ್ 1 ರಂದು ಪಂದ್ಯವೂ ಭಾರತೀಯ ಕಾಲಮಾನ ಮಧ್ಯಾಹ್ನ 1:00 ಗಂಟೆಗೆ ಆರಂಭವಾಗಲಿದೆ. ಫ್ಯಾನ್ಸ್‌ಗಳು ಸೋನಿ ಸ್ಪೋರ್ಟ್ಸ್ ಚಾನೆಲ್‌ನಲ್ಲಿ ಪಂದ್ಯದ ನೇರಪ್ರಸಾರ ವೀಕ್ಷಿಸಬಹುದು. ಇದಲ್ಲದೆ, ಸೋನಿ LIV ಅಪ್ಲಿಕೇಶನ್ ಮತ್ತು ವೆಬ್‌ಸೈಟ್‌ನಲ್ಲೂ ನೇರಪ್ರಸಾರ ಮಾಡಲಾಗುತ್ತದೆ. ಈ ಹೈವೋಲ್ಟೇಜ್ ಪಂದ್ಯವನ್ನು ಡಿಡಿ ಸ್ಪೋರ್ಟ್ಸ್ ಚಾನೆಲ್‌ನಲ್ಲೂ ಉಚಿತವಾಗಿ ವೀಕ್ಷಿಸಬಹುದಾಗಿದೆ.

ಏತನ್ಮಧ್ಯೆ ಪ್ರಸ್ತುತ ಭಾರತದ ಫಾರ್ಮ್ ಅನ್ನು ಗಮನಿಸಿದರೆ, ತಂಡವೂ ಫೈನಲ್ ತಲುಪುವ ಸಾಧ್ಯತೆಗಳು ಅಗಾಧವಾಗಿವೆ. ಟೀಮ್ ಇಂಡಿಯಾ ಲೀಗ್ ಪಂದ್ಯಗಳನ್ನು ಭರ್ಜರಿಯಾಗಿ ಗೆದ್ದಿದೆ. ಮತ್ತೊಂದೆಡೆ, ಪಾಕಿಸ್ತಾನ ಮಲೇಷ್ಯಾ ವಿರುದ್ಧ ಸೋಲನ್ನು ಎದುರಿಸಬೇಕಾಯಿತು. ಇಡೀ ತಂಡವು ಸುಫ್ಯಾನ್ ಖಾನ್ ಅವರ ಮೇಲೆ ಹೆಚ್ಚು ಅವಲಂಬಿತವಾಗಿದೆ. ಅವರು ಐದು ಪಂದ್ಯಗಳಲ್ಲಿ 11 ಗೋಲುಗಳನ್ನು ಗಳಿಸಿದ್ದಾರೆ. ಭಾರತ ಮತ್ತು ಪಾಕಿಸ್ತಾನ ನಡುವಿನ ಕೊನೆಯ ಪಂದ್ಯವು ಆಗಸ್ಟ್ 19, 2026 ರಂದು ಎಫ್‌ಐಎಚ್ ಹಾಕಿ ವಿಶ್ವಕಪ್‌ನಲ್ಲಿ ನಡೆಯಿತು. ಈ ಪಂದ್ಯದಲ್ಲಿ ಭಾರತವು ಪಂದ್ಯವನ್ನು 5–3 ಅಂತರದಿಂದ ಗೆದ್ದಿತು ಎಂಬುದು ಗಮನಾರ್ಹ.

**ಏಷ್ಯನ್ ಗೇಮ್ಸ್ 2026ರಲ್ಲಿ ಇದುವರೆಗೆ ಭಾರತ ಗೆದ್ದ ಪದಕಗಳು:** ಪ್ರಸ್ತುತ ನಡೆಯುತ್ತಿರುವ ಏಷ್ಯನ್ ಗೇಮ್ಸ್‌ನಲ್ಲಿ ಭಾರತದ ಪದಕ ಅಭಿಯಾನವು ಮುಂದುವರೆದಿದೆ. ಸೆಪ್ಟೆಂಬರ್ 29 ರ ಮಂಗಳವಾರ ಮಧ್ಯಾಹ್ನ 1 ಗಂಟೆಯವರೆಗೆ ಭಾರತ 5 ಚಿನ್ನ, 21 ಬೆಳ್ಳಿ ಮತ್ತು 22 ಕಂಚು ಸೇರಿದಂತೆ ಒಟ್ಟು 48 ಪದಕಗಳನ್ನು ಗೆದ್ದುಕೊಂಡಿದೆ. ವಿಶೇಷವೆಂದರೆ ಕಬಡ್ಡಿ, ಕ್ರಿಕೆಟ್, ಶೂಟಿಂಗ್‌ನಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದರೆ, ಅಥ್ಲೆಟಿಕ್ಸ್, ವೇಟ್ಲಿಫ್ಟಿಂಗ್, ವುಶು, ಸ್ಕ್ವಾಷ್ ಮತ್ತು ಬ್ಯಾಡ್ಮಿಂಟನ್‌ವರೆಗೆ ಭಾರತೀಯ ಆಟಗಾರರು ಪದಕ ಗೆದ್ದುಕೊಂಡಿದ್ದಾರೆ. ಇಂದು ನೀರು ಧಂಡಾ ವೈಯಕ್ತಿಕ ಟ್ರ್ಯಾಪ್ ಶೂಟಿಂಗ್‌ನಲ್ಲಿ ಚಿನ್ನ ಗೆದ್ದು ಭಾರತಕ್ಕೆ ಐದನೇ ಚಿನ್ನ ತಂದುಕೊಟ್ಟರು. ಇದು ಏಷ್ಯನ್ ಗೇಮ್ಸ್ 2026ರಲ್ಲಿ ಭಾರತದ ಮೊದಲ ವೈಯಕ್ತಿಕ ಚಿನ್ನದ ಪದಕವಾಗಿದೆ.

# ಟ್ರ್ಯಾಪ್ ಶೂಟಿಂಗ್‌ನಲ್ಲಿ ಭಾರತಕ್ಕೆ ಚಿನ್ನ; ಇತಿಹಾಸ ಸೃಷ್ಟಿಸಿದ ನೀರು ಧಂಡಾ

ಜಪಾನ್‌ನಲ್ಲಿ ನಡೆಯುತ್ತಿರುವ 20ನೇ ಏಷ್ಯನ್ ಕ್ರೀಡಾಕೂಟದಲ್ಲಿ ಭಾರತೀಯ ಶೂಟಿಂಗ್ ಹೊಸ ದಾಖಲೆಯನ್ನು ಸೃಷ್ಟಿಸಿದೆ. 26 ವರ್ಷದ ಭಾರತೀಯ ಸ್ಟಾರ್ ಶೂಟರ್ ನೀರು ಧಂಡಾ ಮಹಿಳೆಯರ ವೈಯಕ್ತಿಕ ಟ್ರ್ಯಾಪ್ ಶೂಟಿಂಗ್ ಸ್ಪರ್ಧೆಯಲ್ಲಿ ಚಿನ್ನ ಗೆದ್ದಿದ್ದಾರೆ. ಏಷ್ಯನ್ ಕ್ರೀಡಾಕೂಟದ ಇತಿಹಾಸದಲ್ಲಿ ಮಹಿಳೆಯರ ವೈಯಕ್ತಿಕ ಟ್ರ್ಯಾಪ್ ಶೂಟಿಂಗ್ ಸ್ಪರ್ಧೆಯಲ್ಲಿ ಇದು ಭಾರತಕ್ಕೆ ದೊರೆತ ಮೊದಲ ಚಿನ್ನದ ಪದಕವಾಗಿದೆ.

ಶೂಟಿಂಗ್ ರೇಂಜ್‌ನಲ್ಲಿ ಮಳೆ ಸುರಿಯುತ್ತಿದ್ದರೂ, ನೀರು ಧಂಡಾ ಅತ್ಯುತ್ತಮ ಪ್ರದರ್ಶನ ನೀಡಿದರು. ಹಿಂದಿನ ಅರ್ಹತಾ ಸುತ್ತಿನಲ್ಲಿ, ಒಟ್ಟು 125 ಅಂಕಗಳಲ್ಲಿ 118 ಅಂಕಗಳನ್ನು ಗಳಿಸುವ ಮೂಲಕ ಅವರು ಸ್ಪರ್ಧೆಯಲ್ಲಿ ಅಗ್ರಸ್ಥಾನ ಪಡೆದು ಫೈನಲ್‌ಗೆ ಮುನ್ನಡೆದಿದ್ದರು.

ರೋಚಕ ಅಂತಿಮ ಸುತ್ತಿನಲ್ಲೂ ಅವರು ತಮ್ಮ ಪ್ರಾಬಲ್ಯವನ್ನು ಮುಂದುವರೆಸಿದರು, 30 ಗುರಿಗಳಲ್ಲಿ 28 ಅಂಕಗಳನ್ನು ಕಲೆಹಾಕುವ ಮೂಲಕ ಏಷ್ಯನ್ ಕ್ರೀಡಾಕೂಟದಲ್ಲಿ ಹೊಸ ದಾಖಲೆಯನ್ನು ಸ್ಥಾಪಿಸಿದರು. ಕ್ರೀಡಾಕೂಟದ ಟ್ರ್ಯಾಪ್ ವಿಭಾಗದ ಹಿಂದಿನ ದಾಖಲೆ 24 ಗುರಿಗಳದಾಗಿತ್ತು ಎಂಬುದು ಗಮನಾರ್ಹ. ಉಳಿದಂತೆ ಈ ಸ್ಪರ್ಧೆಯಲ್ಲಿ ಚೀನಾದ ಸನ್ ಯುನೊಂಗ್ ಬೆಳ್ಳಿ ಮತ್ತು ಕತಾರ್‌ನ ಹಜರ್ ಅಬ್ದುಲ್ಮಲಿಕ್ ಕಂಚು ಗೆದ್ದರು. ಇಂದು ಬೆಳಿಗ್ಗೆ ವೈಯಕ್ತಿಕ ಚಿನ್ನ ಗೆದ್ದ ವಿಶ್ವದ 13ನೇ ಶ್ರೇಯಾಂಕದ ನೀರು ಧಂಡಾ, ಇದಕ್ಕೂ ಮುನ್ನ ನಡೆದಿದ್ದ ಮಹಿಳೆಯರ ಟ್ರ್ಯಾಪ್ ಟೀಮ್ ಇವೆಂಟ್‌ನಲ್ಲಿ ಭಾರತಕ್ಕೆ ಬೆಳ್ಳಿ ಪದಕ ಗೆದ್ದುಕೊಟ್ಟಿದ್ದರು. ಇದರೊಂದಿಗೆ, ಒಂದೇ ದಿನದಲ್ಲಿ ಎರಡು ಪದಕಗಳನ್ನು ಗೆಲ್ಲುವ ಮೂಲಕ ಅವರು ಅಂತಾರಾಷ್ಟ್ರೀಯ ವೇದಿಕೆಯಲ್ಲಿ ಭಾರತದ ಖ್ಯಾತಿಯನ್ನು ಹೆಚ್ಚಿಸಿದರು. ಕಳೆದ ಜುಲೈನಲ್ಲಿ ಇಟಲಿಯಲ್ಲಿ ನಡೆದ ಐಎಸ್‌ಎಸ್‌ಎಫ್ ವಿಶ್ವಕಪ್‌ನಲ್ಲಿ ಚಿನ್ನ ಗೆದ್ದ ಮೊದಲ ಭಾರತೀಯ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದ ನೀರು ಧಂಡಾ ಈಗ ಏಷ್ಯನ್ ಕ್ರೀಡಾಕೂಟದಲ್ಲೂ ಹೊಸ ಮೈಲಿಗಲ್ಲು ಸಾಧಿಸಿದ್ದಾರೆ.



### ಅಂಕುಶ್ ಪಂಗಲ್‌ಗೆ ಪದಕ ಖಚಿತ

**ಏಷ್ಯನ್ ಕ್ರೀಡಾಕೂಟದ ಪುರುಷರ 80 ಕೆಜಿ ಬಾಕ್ಸಿಂಗ್ ಸೆಮಿಫೈನಲ್ ಪಂದ್ಯದಲ್ಲಿ ಭಾರತದ ಅಂಕುಶ್ ಪಂಗಲ್ ಉಜ್ಬೇಕಿಸ್ತಾನದ ಫಜ್ಲಿಡಿನ್ ಅವರನ್ನು ಎದುರಿಸಿದರು. ಆರಂಭದಿಂದಲೂ ಇಬ್ಬರೂ ಅದ್ಭುತ ಪ್ರದರ್ಶನ ನೀಡಿದರು. ಅಂತಿಮವಾಗಿ ಅಂಕುಶ್ ಪಂಗಲ್ 5–0 ಅಂತರದಿಂದ ಗೆದ್ದು ಫೈನಲ್‌ಗೆ ಮುನ್ನಡೆದರು. ಇದರೊಂದಿಗೆ ಬಾಕ್ಸಿಂಗ್ ವಿಭಾಗದಲ್ಲಿ ಭಾರತಕ್ಕೆ ಮತ್ತೊಂದು ಚಿನ್ನ ಅಥವಾ ಬೆಳ್ಳಿ ಪದಕವನ್ನು ಖಚಿತಪಡಿಸಿದ್ದಾರೆ.**

**ಪುರುಷರ ಟ್ರ್ಯಾಪ್ ವಿಭಾಗದಲ್ಲಿ ನಿರಾಶೆ:** ಏತನ್ಮಧ್ಯೆ ಪುರುಷರ ವೈಯಕ್ತಿಕ ಟ್ರ್ಯಾಪ್ ಶೂಟಿಂಗ್ ಫೈನಲ್‌ನಲ್ಲಿ ಸಬತ್ ಭಾರದ್ವಾಜ್ ಅಭಿಮಾನಿಗಳನ್ನು ನಿರಾಸೆಗೊಳಿಸಿದರು. ಅರ್ಹತಾ ಸುತ್ತಿನಲ್ಲಿ ಉತ್ತಮವಾಗಿ ಆಡಿದ ನಂತರ ಫೈನಲ್‌ಗೆ ಅರ್ಹತೆ ಪಡೆದ ಏಕೈಕ ಭಾರತೀಯ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದರು. ಆದರೆ ಪದಕ ಸ್ಪರ್ಧೆಯಲ್ಲಿ ಅಂತಿಮ ಸುತ್ತಿನ ಆರಂಭದಲ್ಲಿಯೇ ಅವರು ಹಿನ್ನಡೆ ಅನುಭವಿಸಿದರು. 10 ಗುರಿಗಳಲ್ಲಿ 7 ಅನ್ನು ಮಾತ್ರ ಸರಿಯಾಗಿ ತಲುಪಿದ್ದರಿಂದ ಅವರು ಸ್ಪರ್ಧೆಯಿಂದ ಹೊರಬಿದ್ದರು ಮತ್ತು ಪದಕ ಗೆಲ್ಲುವ ಅವಕಾಶ ಕಳೆದುಕೊಂಡರು.

**ನರೇಂದ್ರ ಪರ್ವಾಲ್‌ಗೆ ಕಂಚು:** ಪುರುಷರ 90+ ಕೆಜಿ (ಸೂಪರ್ ಹೆವಿವೇಯ್ಟ್) ಬಾಕ್ಸಿಂಗ್ ಸೆಮಿಫೈನಲ್‌ನಲ್ಲಿ ಭಾರತದ ನರೇಂದ್ರ ಪರ್ವಾಲ್ ಅವರು ಕಜಕಿಸ್ತಾನದ ಕಾಮ್ಶಿಬೆಕ್ ಓರಲ್‌ಬಾಯಿ ವಿರುದ್ಧ ಕಠಿಣ ಹೋರಾಟದಲ್ಲಿ ಸೋತು ಕಂಚಿನ ಪದಕಕ್ಕೆ ತೃಪ್ತಿಪಡೆದುಕೊಂಡರು. ಬಾಕ್ಸಿಂಗ್‌ನಲ್ಲಿ ಸೆಮಿಫೈನಲ್‌ನಲ್ಲಿ ಸೋತರೂ, ಅಂತರಾಷ್ಟ್ರೀಯ ನಿಯಮಗಳ ಪ್ರಕಾರ ಸೆಮಿಫೈನಲ್‌ಗೆ ಮುನ್ನಡೆದವರಿಗೆ ಕಂಚಿನ ಪದಕ ನೀಡಲಾಗುತ್ತದೆ.

# ಸೆಮಿಫೈನಲ್, ಫೈನಲ್ ಪಂದ್ಯ ನಡೆಯದಿದ್ದರೆ ಚಿನ್ನದ ಪದಕ ಯಾರಿಗೆ?

ಏಷ್ಯನ್ ಗೇಮ್ಸ್‌ನಲ್ಲಿ ಪುರುಷರ ಕ್ರಿಕೆಟ್‌ನ ಸೆಮಿಫೈನಲ್ ಚಿತ್ರಣ ಸ್ಪಷ್ಟವಾಗಿದೆ. ನೇಪಾಳ ಮತ್ತು ಶ್ರೀಲಂಕಾ ನಡುವಿನ ಕ್ವಾರ್ಟರ್–ಫೈನಲ್ ಪಂದ್ಯ ಮಳೆಯಿಂದಾಗಿ ರದ್ದಾದ ನಂತರ, ಶ್ರೀಲಂಕಾ ಶ್ರೇಯಾಂಕದ ಆಧಾರದ ಮೇಲೆ ಸೆಮಿಫೈನಲ್‌ನಲ್ಲಿ ತನ್ನ ಸ್ಥಾನವನ್ನು ಖಚಿತಪಡಿಸಿಕೊಂಡಿದೆ. ಈಗ ಭಾರತ ಸೆಮಿಫೈನಲ್‌ನಲ್ಲಿ ಶ್ರೀಲಂಕಾವನ್ನು ಎದುರಿಸಲಿದೆ. ಮತ್ತೊಂದೆಡೆ, ಪಾಕಿಸ್ತಾನ ಬಾಂಗ್ಲಾದೇಶವನ್ನು ಎದುರಿಸಲಿದೆ. ಏಷ್ಯನ್ ಗೇಮ್ಸ್‌ನ ಈ ಎರಡೂ ಸೆಮಿಫೈನಲ್‌ಗಳು ಅಕ್ಟೋಬರ್ 1 ರಂದು ನಡೆಯಲಿವೆ. ಫೈನಲ್ ಮತ್ತು ಕಂಚಿನ ಪದಕ ಪಂದ್ಯ ಅಕ್ಟೋಬರ್ 3 ರಂದು ನಡೆಯಲಿದೆ. ಬಾಂಗ್ಲಾದೇಶ ಮತ್ತು ಮಲೇಷ್ಯಾ ನಡುವಿನ ಕ್ವಾರ್ಟರ್–ಫೈನಲ್ ಪಂದ್ಯ ಮಳೆಯಿಂದಾಗಿ ರದ್ದುಗೊಂಡಿದೆ ಎಂಬುದು ಗಮನಾರ್ಹ. ಈ ಹಿನ್ನೆಲೆ ಮಳೆಯಿಂದಾಗಿ ಕ್ವಾರ್ಟರ್–ಫೈನಲ್‌ನ ಎಲ್ಲಾ ನಾಲ್ಕು ಪಂದ್ಯಗಳನ್ನು ರದ್ದುಗೊಳಿಸಬೇಕಾಯಿತು ಮತ್ತು ಉತ್ತಮ ಶ್ರೇಯಾಂಕ ಹೊಂದಿರುವ ತಂಡಗಳು ಸೆಮಿಫೈನಲ್‌ಗೆ ಪ್ರವೇಶಿಸಿವೆ.

**ಸೆಮಿಫೈನಲ್ ಪಂದ್ಯ ರದ್ದಾದರೆ ಭಾರತಕ್ಕೆ ಲಾಭ:** ಭಾರತ ಮತ್ತು ಶ್ರೀಲಂಕಾ ನಡುವಿನ ಸೆಮಿಫೈನಲ್ ಪಂದ್ಯಕ್ಕೂ ಮಳೆ ಅಡ್ಡಿಪಡಿಸುವ ಸಾಧ್ಯತೆಯಿದೆ ಎನ್ನಲಾಗುತ್ತಿದೆ ಇದರಿಂದಾಗಿ ಈ ಹಂತದಲ್ಲೂ ಶ್ರೇಯಾಂಕಗಳು ಪ್ರಮುಖ ಪಾತ್ರ ವಹಿಸುತ್ತವೆ. ಟಿ20 ಸ್ವರೂಪದಲ್ಲಿ ಉತ್ತಮ ಶ್ರೇಯಾಂಕ ಪಡೆದುಕೊಂಡಿರುವ ಆಧಾರದ ಮೇಲೆ ಭಾರತ ಫೈನಲ್‌ಗೆ ಪ್ರವೇಶಿಸಲಿದೆ. ಭಾರತ ಪ್ರಸ್ತುತ ಶ್ರೇಯಾಂಕದಲ್ಲಿ ನಂಬರ್ –1 ಸ್ಥಾನದಲ್ಲಿದೆ, ಶ್ರೀಲಂಕಾ ಒಂಬತ್ತನೇ ಸ್ಥಾನದಲ್ಲಿದೆ. ಇಂತಹ ಪರಿಸ್ಥಿತಿಯಲ್ಲಿ ಮಳೆಯೂ ಲಂಕಾಗೆ ಮಾರಕವಾಗಲಿದೆ.

**ಪಾಕಿಸ್ತಾನಕ್ಕೂ ಇಲ್ಲ ಆತಂಕ:** ಎರಡನೇ ಸೆಮಿಫೈನಲ್‌ನಲ್ಲಿ ಪಾಕಿಸ್ತಾನ ಬಾಂಗ್ಲಾದೇಶವನ್ನು ಎದುರಿಸಲಿದೆ. ಟಿ20 ಶ್ರೇಯಾಂಕದಲ್ಲಿ ಪಾಕಿಸ್ತಾನ ಆರನೇ ಸ್ಥಾನದಲ್ಲಿದ್ದರೆ, ಬಾಂಗ್ಲಾದೇಶ ಎಂಟನೇ ಸ್ಥಾನದಲ್ಲಿದೆ. ಅಂತಹ ಪರಿಸ್ಥಿತಿಯಲ್ಲಿ, ಮಳೆಯಿಂದಾಗಿ ಪಾಕಿಸ್ತಾನದ ಸೆಮಿಫೈನಲ್ ಕೂಡ ರದ್ದಾದರೆ, ಉತ್ತಮ ಶ್ರೇಯಾಂಕದ ಆಧಾರದ ಮೇಲೆ ಪಾಕಿಸ್ತಾನ ಫೈನಲ್‌ಗೆ ಪ್ರವೇಶಿಸುತ್ತದೆ.

**ಭಾರತ–ಪಾಕಿಸ್ತಾನ ನಡುವೆ ಫೈನಲ್ ಸಾಧ್ಯತೆ:** ಒಂದು ವೇಳೆ ಮಳೆಯಿಂದ ಸೆಮಿಸ್ ನಡೆಯದಿದ್ದಲ್ಲಿ ಏಷ್ಯನ್ ಕ್ರೀಡಾಕೂಟದಲ್ಲಿ ಭಾರತ ಮತ್ತು ಪಾಕಿಸ್ತಾನ ನಡುವೆ ಚಿನ್ನದ ಪದಕ ಪಂದ್ಯ ನಡೆಯಲಿದೆ. ಅಕ್ಟೋಬರ್ 1 ರಂದು ಎರಡೂ ತಂಡಗಳು ತಮ್ಮ ಸೆಮಿಫೈನಲ್ ಪಂದ್ಯಗಳನ್ನು ಗೆದ್ದರೆ, ಅಕ್ಟೋಬರ್ 3 ರಂದು ನಡೆಯುವ ಫೈನಲ್‌ನಲ್ಲಿ ಪರಸ್ಪರ ಮುಖಾಮುಖಿಯಾಗುತ್ತವೆ. ಮತ್ತೊಂದೆಡೆ, ಎರಡೂ ತಂಡಗಳು ಸೆಮಿಫೈನಲ್‌ನಲ್ಲಿ ಸೋತರೆ, ಒಂದೇ ದಿನ ಕಂಚಿನ ಪದಕಕ್ಕಾಗಿ ಮುಖಾಮುಖಿಯಾಗಬಹುದು.

**ಫೈನಲ್ ಪಂದ್ಯ ಮಳೆಯಿಂದ ರದ್ದಾದರೆ ಚಿನ್ನದ ಪದಕ ಯಾರಿಗೆ:** ಏಷ್ಯನ್ ಗೆಮ್ಸ್‌ನ ಫೈನಲ್ ಪಂದ್ಯ ಸಹ ಮಳೆಯಿಂದ ರದ್ದಾದರೆ ಚಿನ್ನದ ಪದಕ ಯಾರಿಗೆ ಸಿಗಲಿದೆ ಎಂಬುದು ತಿಳಿಯಲು ಫ್ಯಾನ್ಸ್ ಕಾತುರಾಗಿದ್ದಾರೆ. ಈ ಹಿಂದೆ ನಡೆದುದ್ದ 2023ರ ಹ್ಯಾಂಗ್‌ಝೌ ಏಷ್ಯನ್ ಕ್ರೀಡಾಕೂಟದಲ್ಲಿ ಭಾರತ ತಂಡವು ಪುರುಷರ ಕ್ರಿಕೆಟ್‌ನಲ್ಲಿ ಚಿನ್ನದ ಪದಕವನ್ನು ಗೆದ್ದುಕೊಂಡಿತ್ತು. ಒಂದು ವೇಳೆ ಭಾರತ ಫೈನಲ್ ತಲುಪಿದರೆ ಮತ್ತು ಪ್ರಶಸ್ತಿ ಪಂದ್ಯವು ಮಳೆಯಿಂದಾಗಿ ರದ್ದಾದರೆ, ಈ ಬಾರಿ ಎರಡೂ ಫೈನಲಿಸ್ಟ್‌ಗಳಿಗೆ ಚಿನ್ನದ ಪದಕಗಳನ್ನು ನೀಡಲಾಗುತ್ತದೆ ಎಂಬುದು ಗಮನಿಸಬೇಕಾದ ಸಂಗತಿ. ಈ ಹಿಂದೆ, ಅಂತಹ ಯಾವುದೇ ನಿಯಮವಿರಲಿಲ್ಲ ಏಕೆಂದರೆ 2023ರ ಏಷ್ಯನ್ ಕ್ರೀಡಾಕೂಟದ ಫೈನಲ್ ರದ್ದಾದ ನಂತರ ಉನ್ನತ ಶ್ರೇಯಾಂಕದ ಆಧಾರದ ಮೇಲೆ ಟೀಮ್ ಇಂಡಿಯಾವನ್ನು ವಿಜೇತರೆಂದು ಘೋಷಿಸಲಾಗಿತ್ತು. ಆದರೆ ಈಗ ನಿಯಮವನ್ನು ಬದಲಾಯಿಸಲಾಗಿದೆ. ಮಳೆಯಿಂದಾಗಿ ಪಂದ್ಯವು ಮಳೆಯಿಂದ ರದ್ದಾದರೆ, ಒಂದು ತಂಡಕ್ಕೆ ಚಿನ್ನ ನೀಡುವ ಬದಲು, ಎರಡೂ ತಂಡಗಳಿಗೆ ಚಿನ್ನದ ಪದಕಗಳನ್ನು ನೀಡಲಾಗುತ್ತದೆ.


Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper. udayavahini.in www.udayavahini.in Udaya vahini news Udaya vahini news